ಪ್ರಕಟನೆಯ ೨೯ ನೆಯ ವರ್ಷ : ೧೯೯೪

ಸಂಕ್ರಮಣ

೨೮೩-೨೮೪

ಡಂಕೆಲ್ ವಿಶೇಷಾಂಕ

ಸಾಸಿವೆಯಷ್ಟು ಸುಖಕ್ಕಾಗಿ
ಅಥೆನ್ಸಿನ ಅರ್ಥವಂತ ಮತ್ತು ಮನಮೋಹಕ ಬಜೆಟ್
ಆದೇಶ ಸಂಸ್ಕೃತಿ ಮತ್ತು ಸಂಗೀತ
ಡಂಕೆಲ್ ಯಜಮಾನಿಕೆಯನ್ನು ಎದುರಿಸುವ ಪ್ರಶ್ನೆ
ಹಾಲಿವುಡ್ ಹರಡುತ್ತಿರುವ ಅಮೇರಿಕಾದ ಕನಸು
ಡಂಕೆಲ್ ಮತ್ತು ಕಾಪಿರೈಟ್
ಡಂಕೆಲ್ ಮತ್ತು ಸ್ಯಾಟಲೈಟ್ ಟಿವಿ
ಡಂಕೆಲ್ ಮತ್ತು ವಿದೇಶಿ ಪತ್ರಿಕೆಗಳು
ಡಂಕೆಲ್ ಪದಕೋಶ
ಡಂಕೆಲ್ ಮತ್ತು ಜಾಹಿರಾತು

ಅತಿಥಿ ಸಂಪಾದಕ : ಜಿ. ಎನ್. ಮೋಹನ

ಸಂಪುಟ ೨೯ : ಸಂಚಿಕೆ ೭-೮ ಜುಲೈ-ಅಗಸ್ಟ ೧೯೯೪

ಸಂಕ್ರಮಣ ಸಾಹಿತ್ಯ ಸ್ಪರ್ಧೆ: ೧೯೯೪

● ಎರಡು ಅತ್ಯುತ್ತಮ ಸಣ್ಣಕಥೆ ● ಹತ್ತು ಅತ್ಯುತ್ತಮ ಕವನ

● ಒಂದು ಅತ್ಯುತ್ತಮ ಲಲಿತ ಪ್ರಬಂಧ

● ಇಪ್ಪತ್ತೈದು ಅತ್ಯುತ್ತಮ ಹನಿಗವನಗಳು

ಹೀಗೆ ಅತ್ಯುತ್ತಮ ರಚನೆಗಳಿಗೆ ಪ್ರಮಾಣಪತ್ರದೊಂದಿಗೆ ಪುಸ್ತಕ ರೂಪದಲ್ಲಿ ಸೂಕ್ತ ಬಹುಮಾನ ನೀಡಲಾಗುವುದು; ಬಹುಮಾನಿತ ಬರಹಗಳು **ಸಂಕ್ರಮಣದ** ಡಿಸೆಂಬರ ಸಂಚಿಕೆಯಲ್ಲಿ ಪ್ರಕಟವಾಗುವವು.

ನಿಯಮಗಳು

೧ ಹಾಳೆಯ ಒಂದೇ ಮಗ್ಗುಲಿಗೆ ಟೈಪು ಅಥವಾ ಸ್ಪಷ್ಟ ಕೈಬರಹದಲ್ಲಿ ಕಳಿಸಬೇಕು: ಹಸ್ತಪ್ರತಿಗಳನ್ನು ವಾಪಸು ಕಳಿಸುವುದಿಲ್ಲ.

೨ ಒಬ್ಬರೇ ಯಾವ ಸಾಹಿತ್ಯ ಪ್ರಕಾರದಲ್ಲಾದರೂ, ಎಷ್ಟಾದರೂ 'ಪ್ರವೇಶ' (ಎಂಟ್ರಿ) ಕಳಿಸಬಹುದು.

೩ ಸಣ್ಣಕಥೆ ಹಾಗೂ ಲಲಿತ ಪ್ರಬಂಧಗಳು ಮುದ್ರಣದಲ್ಲಿ ೧೦-೧೨ ಪುಟ ಮೀರದಂತೆ ಇದ್ದರೆ ಒಳ್ಳೆಯದು; ಹನಿಗವನ ೨೫ ಶಬ್ದ ಮೀರಬಾರದು.

೪ **ಪ್ರವೇಶ ಧನ**

ಸಣ್ಣ ಕತೆ / ಲಲಿತ ಪ್ರಬಂಧ	ಪ್ರತಿಯೊಂದಕ್ಕೆ ರೂ. ೭-೦೦
ಕವನ	ಪ್ರತಿಯೊಂದಕ್ಕೆ ರೂ. ೫-೦೦
ಹನಿಗವನ	ಪ್ರತಿಯೊಂದಕ್ಕೆ ರೂ. ೨-೦೦

ಪ್ರವೇಶ ಧನವನ್ನು ಎಂ. ಓ. / ಡಿ. ಡಿ. / ಪೋಸ್ಟಲ್ ಆರ್ಡರ್ ಮೂಲಕ **ಸಂಕ್ರಮಣ ಪ್ರಕಾಶನ**ದ ಹೆಸರಿನಲ್ಲಿ ಕಳಿಸಬೇಕು. (ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ಹೆಸರು-ವಿಳಾಸ ಸಂಪೂರ್ಣ ಬರೆದಿರಬೇಕು.)

೫ ಪ್ರವೇಶಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ **೧೫ ಅಕ್ಟೋಬರ ೧೯೯೪.** ಸ್ಪರ್ಧೆಯ ಫಲಿತಾಂಶವನ್ನು ನವೆಂಬರ ಕೊನೆಯ ವಾರದಲ್ಲಿ ಪ್ರಮುಖ ಪತ್ರಿಕೆಗಳಿಗೆ ಬಿಡುಗಡೆ ಮಾಡಲಾಗುವುದು. ಫಲಿತಾಂಶವನ್ನು **ನೇರವಾಗಿ ಅಂಚೆಯ ಮೂಲಕ** ತಿಳಿಯಬಯಸುವವರು **ತಮ್ಮ ಹಸ್ತಪ್ರತಿಯ ಜೊತೆಗೆ ಸ್ವ-ವಿಳಾಸದ ಅಂಚೆ ಪಾಕೀಟು ಕಳಿಸಬೇಕು.**

೬ ವಿಳಾಸ: **ಸಂಕ್ರಮಣ ಪ್ರಕಾಶನ, ೬೮, ಯುರೇಕಾ ಕಾ[illegible]**
ಧಾರವಾಡ-೫೮೦ ೦೦೧.

ಸಂಕ್ರಮಣ

ಜುಲೈ-ಅಗಸ್ಟ ೧೯೯೪
ಸಂಪುಟ ೨೯ : ಸಂಚಿಕೆ ೭-೮

ಸಂಪಾದಕಿ
ನೀಲಾ ಪಾಟೀಲ

ಸಲಹಾ ಸಂಪಾದಕ
ಚಂದ್ರಶೇಖರ ಪಾಟೀಲ

ಅತಿಥಿ ಸಂಪಾದಕ : ಜಿ. ಎನ್. ಮೋಹನ

SANKRAMANA 263-264
A Monthly in Kannada
July August 1994 Vol. XXIX Nos. 7-8
Sankramana Prakashana Dharwad-580 001 Phone : 40509
Printed at Chandana Mudrana, Dharwad-8 Phone : 44863
Annual Subscription : Rs. 50/-

ಹುಡುಕಿ ಬಂದರು

ಫಾಸ್ಟರ್ ನೈಮ್ಯೊಲರ್

ಮೊದಲವರು
ಯೆಹೂದಿಗಳನ್ನು ಹುಡುಕಿ ಬಂದರು
ನಾನು ಬಾಯಿ ಬಿಡಲಿಲ್ಲ
ಏಕೆಂದರೆ ನಾನು ಯೆಹೂದಿಯಾಗಿರಲಿಲ್ಲ

ನಂತರ ಅವರು
ಕಮ್ಯುನಿಸ್ಟರನ್ನು ಹುಡುಕಿ ಬಂದರು
ನಾನಾಗ ಬಾಯಿ ಬಿಡಲಿಲ್ಲ
ಏಕೆಂದರೆ ನಾನು
ಕಮ್ಯುನಿಸ್ಟನಾಗಿರಲಿಲ್ಲ

ನಂತರ ಅವರು
ಕ್ಯಾಥೋಲಿಕ್ಕರನ್ನು ಹುಡುಕಿ ಬಂದರು
ಆಗ ನಾನು ಬಾಯಿಬಿಡಲಿಲ್ಲ
ಏಕೆಂದರೆ ನಾನು ಕ್ಯಾಥೋಲಿಕನಾಗಿರಲಿಲ್ಲ

ನಂತರ ಅವರು
ನನ್ನನ್ನೇ ಹುಡುಕಿ ಬಂದರು
ಆಗ ನನ್ನ ಪರವಾಗಿ ದನಿ ಎತ್ತುವವರು
ಯಾರೂ ಇರಲಿಲ್ಲ

ಜಿ. ಎನ್. ಮೋಹನ

ಸಾಸಿವೆಯ ಸುಖಕ್ಕಾಗಿ....

ಪ್ರಸ್ತಾವನೆ

ಹಾಲು ಅಥವಾ ಕೋಲಾ
ಯಾವುದು ಒಳ್ಳೆಯದು ಹೇಳಿ ?

ಎನ್ನುವುದು ಮಕ್ಕಳಿಗೆ ಒಂದಿಷ್ಟಾದರೂ ವಿದ್ಯೆ ಕೊಡಿಸುವ ಆಸೆಯಿಂದ ದೆಹಲಿ ಮುಟ್ಟಿ ಅಲ್ಲಿ ಮನೆ ಕೆಲಸ ಮಾಡುತ್ತಾ ಜೀವನವನ್ನು ಸಾಗಿಸಲು ಕಷ್ಟಪಡುತ್ತಿರುವ ಸುನೀತಾ ಪ್ರಧಾನ್‌ಳ ಪ್ರಶ್ನೆ.

ಭಾರತದಲ್ಲಿ ಬಂಡವಾಳ ಹೂಡಲು ಬಹು ರಾಷ್ಟ್ರೀಯ ಕಂಪನಿಗಳ ಬಾಗಿಲು ತಟ್ಟುವಂತಹ ಉದಾರೀಕರಣದ ಯೋಜನೆಯನ್ನು ಭಾರತ ರೂಪಿಸಿದಾಗ ಅದು ಬಡವರ ಮನೆಯ ಕದವನ್ನೂ ತಟ್ಟುತ್ತದೆ ಎಂಬುದನ್ನು ಬೇಕೆಂದೇ ಮರೆಯಲು ಇಚ್ಛಿಸಿತು.

ಸ್ಯಾಟಲೈಟ್ ಟಿ ವಿ ಬಣ್ಣ ಬಣ್ಣದ ಕನಸನ್ನು, ಬದಲಾಗಲು ಒಂದು ದಾರಿಯನ್ನು, ತುಳಿಯಲು ಯುವ ಜನಾಂಗದ ಮನಸ್ಸಿಗೆ ಎಂಟಿವಿ ಕಸುವನ್ನು ತಂದುಕೊಳ್ಳುತ್ತಿರುವಾಗಲೇ ಹಾಲು ಚಾಕಲೇಟ್‌ಗಳಾಗಿ, ಮಿಲ್ಕ್ ಪೌಡರ್‌ಗಳಾಗಿ ಬದಲಾಯಿತು. ಉದ್ಯಮ, ರಾಜಕೀಯದೊಂದಿಗೆ ಕೈಕುಲುಕಿದ ತಕ್ಷಣವೇ ಸಾವಿರಾರು ಬಾಟಲಿಗಳಲ್ಲಿ ಕೋಕಾಕೋಲಾ ಭಾರತಕ್ಕೆ ಬಂದಿಳಿಯಿತು.

ಸುನೀತಾ ಪ್ರಧಾನ್‌ಳಂತಹ ಲೆಕ್ಕವಿರವಷ್ಟು ತಾಯಂದಿರು ಕೇಳುತ್ತಾರೆ; ' ಹಾಲು ಅಥವಾ ಕೋಲಾ ' ಯಾವುದು ಒಳ್ಳೆಯದು ?

ಹಾಲಿನ ಕ್ಷೇತ್ರಕ್ಕೆ ಹೊಸ ಆಯಾಮ ಕೊಟ್ಟ ಮ್ಯಾಗ್ಸೇಸೆ ಪ್ರಶಸ್ತಿ ವಿಜೇತ ವಿ. ಕುರಿಯನ್ ಅವರು "ಇಂದು ಇಡೀ ದೇಶವಲ್ಲಿ ನಾವು ದಿಕ್ಕನ್ನು, ದಿಕ್ಕಿನ ಪ್ರಜ್ಞೆಯನ್ನು ಕಳೆದುಕೊಂಡಿದ್ದೇವೆ. ನಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವರು ನಾವು ಇಂದು ಸ್ಟಾರ್ ಟಿವಿಯನ್ನು ನೋಡಲೆಂದೋ, ಕೋಕಾಕೋಲಾ ಕುಡಿಯಲೆಂದೋ ಪ್ರಾಣ ತೆರಲಿಲ್ಲ. ಅವರು ಸೆಣಸಿದ್ದು, ತ್ಯಾಗ ಮಾಡಿದ್ದು ಎಲ್ಲಾ ಪ್ರಜೆಗಳೂ ಏಕಾತ್ಮಕವಾಗಿ ದುಡಿವ ದೇಶವನ್ನು ಕಟ್ಟಬಲ್ಲಂಥ ವ್ಯವಸ್ಥೆ ಯನ್ನು ಸೃಷ್ಟಿಸಲೆಂದು, ಅಂಥ ದೇಶದ ಉನ್ನತಿಯಿಂದ ಮುಂಬರುವ ನಾವೂ ಉತ್ತಮರಾಗಬಹುದೆಂದು.

"ನಾವು ಅನುಭೋಗಿಸುವ ಅನೇಕ ಸವಲತ್ತುಗಳಿಂದ ನಮ್ಮ ಬಹುಪಾಲು ದೇಶ ಬಾಂಧವರು ವಂಚಿತರು. ನಮ್ಮ ಹಳ್ಳಿ ಕೊಳೆಗೇರಿಗಳ ಜನ ತಮ್ಮ ಭವಿಷ್ಯ ವನ್ನು ತಾವೇ ನಿರ್ಧರಿಸುವ ಶಕ್ತಿಗಳಿಂದ ವಂಚಿತರು. ಸ್ವಾತಂತ್ರ್ಯದ ಮುಂಬೆಳ ಗಿನಲ್ಲಿ ಪ್ರಾಪ್ತ ವಯಸ್ಕರಾದ ನಾವು ಸಮಾನತೆಯ, ನ್ಯಾಯದ ದೇಶವೊಂದನ್ನು ಕಟ್ಟುವ ವಚನವನ್ನು ನೀಡಿದೆವು.

"ಆ ವಚನ ಇಂದು ಭಂಗವಾಗಿ ಹೋಗಿದೆ. ಇಂದು ಉಪಭೋಗತೆಯ ದುರಾಕರ್ಷಣೆಗೆ ಒಳಗಾಗಿ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳ, ಉತ್ಪಾದಕರ ಕೈಗೆ ಕಡಿವಾಣ ಕೊಡಲಾಗಿದೆ. ನಮ್ಮ ರೈತರಿಗೆ ಲಾಭದಾಯಕವಾಗಬಲ್ಲಂಥ ಪುಟ್ಟ ಬದಲಾವಣೆಯ ಪ್ರತಿಯೊಂದು ಕ್ರಮವನ್ನೂ ನಮ್ಮ ಸರಕಾರಗಳು ವಿದೇಶಿ ಹಣ ಹೂಡಿಕೆಗೆ ಬಲಿ ಕೊಡುವುದನ್ನು ಮತ್ತೆ ಮತ್ತೆ ನೋಡಿ ನಾವು ಹತಾಶೆಯಲ್ಲಿ ಅದ್ದಿ ಹೋಗಿದ್ದೇವೆ." ಎಂದಿದ್ದಾರೆ.

ಡಂಕೆಲ್ ಪ್ರಸ್ತಾವನೆಗೆ ಸಹಿ ಹಾಕುವ ಮೊದಲೇ ಎರಡು ಬಜೆಟ್‌ಗಳಲ್ಲಿ ಸ್ವಾತಂತ್ರ್ಯದ ಹೋರಾಟವನ್ನು ಪೆಪ್ಸಿಕೋಲಾಗೆ ಬಲಿಕೊಟ್ಟ ಭಾರತದ ನಾಯಕರು ಅಮೇರಿಕಾ ಒತ್ತಡ ತರದಿದ್ದರೂ ಡಂಕೆಲ್ ಪ್ರಸ್ತಾವನೆಗಳಿಗೆ ಸಹಿ ಹಾಕುತ್ತಿ ದ್ದರು. ಸಮಸ್ಯೆಗಳನ್ನು ಸಮರ್ಥವಾಗಿ ನಿಭಾಯಿಸಲಾಗದೆ, ಸ್ವಾತಂತ್ರ್ಯ ಹೋರಾಟ ಎದೆಯೊಳಗೆ ಮೂಡಿಸಿದ್ದ ಬೆಳಕನ್ನು ದಾರಿದೀಪ ಮಾಡಿಕೊಳ್ಳದೆ ಬೀಸುವ ದೊಣ್ಣೆಯನ್ನು ತಪ್ಪಿಸಿಕೊಳ್ಳಲು ಅತ್ಯಂತ ಸುಲಭವಾದ ಕಳ್ಳದಾರಿಯನ್ನು ಸೃಷ್ಟಿಸಿಕೊಂಡಿತು. ಈ ಸಾಧನೆಗೆ ಈಗ ಮೂರು ವರ್ಷದ ಸಂಭ್ರಮ.

ಡಂಕೆಲ್ ಪ್ರಸ್ತಾವನೆಗಳು ಕೃಷಿ, ಕೈಗಾರಿಕೆ, ಸಂಶೋಧನೆ, ಔಷಧರಂಗದ ಮೇಲೆ ಉಂಟುಮಾಡುವ ಪರಿಣಾಮಗಳ ಬಗ್ಗೆ ಈಗಾಗಲೇ ವ್ಯಾಪಕ ಚರ್ಚೆ ನಡೆದಿದೆ. ಈ ಪ್ರಸ್ತಾಪಗಳು ಸಾಹಿತ್ಯ, ಸಂಸ್ಕೃತಿಯ ಮೇಲೆ ನಡೆಸುವ ದಾಳಿ

ಎಂತಹದ್ದು ಎಂದು ಯೋಚಿಸಿದಾಗ ಮೂಡಿದ ಚಿಂತನೆಗಳು ಈಗ ನಿಮ್ಮ ಮುಂದಿವೆ.

ಗ್ಯಾಟ್‌ನ ಯಾವ ಸುತ್ತಿನ ಮಾತುಕತೆಯಲ್ಲೂ ಇಲ್ಲದೆ ಡಂಕೆಲ್ ವರದಿಯಲ್ಲಿ ಮಾತ್ರ ಪ್ರಸ್ತಾಪ ಮಾಡಲಾಗಿರುವ ಬೌದ್ಧಿಕ ಆಸ್ತಿ ಹಕ್ಕು ಪೇಟೆಂಟ್ ಕಾಯಿದೆಯ ಮೂಲಕ ಉಂಟುಮಾಡುವ ಹಾವಳಿಯನ್ನು ಈಗಾಗಲೇ ಚರ್ಚಿಸಲಾಗಿದೆ. ಇದೇ ಬೌದ್ಧಿಕ ಹಕ್ಕೇ ಸಾಹಿತ್ಯದ, ಸಂಸ್ಕೃತಿಯ ಕ್ಷೇತ್ರಕ್ಕೂ ವಿಪತ್ತು ತಂದಿದೆ.

ಕಾಪಿರೈಟ್ ಕಾಯಿದೆಯ ಮೂಲಕ, ಸೇವಾ ಕ್ಷೇತ್ರದಲ್ಲಿ ವ್ಯಾಪಾರ– (ಸಾಂಸ್ಕೃತಿಕ ವಿನಿಮಯವೂ ಸೇವೆ ಎಂದೇ ಪರಿಗಣಿತವಾಗುತ್ತದೆ.) ಗ್ಯಾಟ್ ಮುಂದು ಮಾಡುವ ಷರತ್ತುಗಳ ಮೂಲಕ ನೇರ ದಾಳಿ ನಡೆವರೆ ಇನ್ನುಳಿದಂತೆ ಎಲ್ಲವೂ ಪರೋಕ್ಷವೇ.

ಅಮೇರಿಕಾ ಎಲ್ಲವನ್ನೂ ವ್ಯಾಪಾರಿ ಕಣ್ಣಿನಿಂದ ನೋಡುವುದರಿಂದ ಸಾಹಿತ್ಯ, ಸಂಸ್ಕೃತಿ ಸಹಾ ಅಮೇರಿಕಾಗೆ ಒಂದು 'ಸರಕು' ಮಾತ್ರ. ಜಾಹಿರಾತಿನ ಮೋಡಿಗಾರಿಕಯ ಭಾಷೆಯಲ್ಲಿ ಮಾರಾಟ ಮಾಡಿಬಿಡಬಹುದಾದ ಮತ್ತೊಂದು ಸರಕು. ಅಸಮಾಧಾನದ ಅಲೆಗಳು ಮೂಡುವುದು ಇಲ್ಲಿಂದಲೇ. ಪ್ರತಿಯೊಂದು ಕೃತಿಯೂ ಸಮಾಜ ಬದಲಾವಣೆಯ ವೇಗವರ್ಧಕ ಎಂದು ನಂಬಿರುವ ನಾವು ಇದನ್ನು ಸರಕನ್ನಾಗಿ ಮಾಡುವುದಾದರೂ ಹೇಗೆ ? ಅಥವಾ ಸರಕಾಗಿ ಭಾರತಕ್ಕೆ ಪ್ರವಾಹದೋಪಾದಿಯಲ್ಲಿ ಬರುವ ಅಮೇರಿಕನ್ ಸಾಹಿತ್ಯ, ಸಂಸ್ಕೃತಿಯನ್ನು ಅಪ್ಪಿಕೊಳ್ಳುವುದಾದರೂ ಹೇಗೆ ? ಒಂದು ಪಥೇರ ಪಾಂಚಾಲಿ, ಒಂದು ಕುಸುಮಬಾಲೆ, ಒಂದು ಒಡಲಾಳ, ಒಂದು ಹೊಲೆ ಮಾದಿಗರ ಹಾಡಿಗೆ ಒಂದು ಸಮಾಜವನ್ನು ಬದಲಾಯಿಸಲು ಜನರನ್ನು ಅಣಿನೆರಸುವ ಶಕ್ತಿಯಿದೆ.

ಡಂಕೆಲ್ ಪ್ರಸ್ತಾವಗಳು ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರದ ಮೇಲೆ ಉಂಟು ಮಾಡುವ ಪರಿಣಾಮ ಯಾವ ರೀತಿಯದ್ದು ಎಂಬುದಕ್ಕೆ ಚೌಕಟ್ಟು ಹಾಕುವ ಪ್ರಯತ್ನ ಇಲ್ಲಿದೆ. ಸಮಸ್ಯೆಯ ಸ್ಪಷ್ಟ ಚಿತ್ರಣ ನೀಡಲು ಪ್ರಯತ್ನಿಸಿದ್ದೇವೆ. ಭಾರತಕ್ಕೆ ಹಾಲೆಂಡ್‌ನಿಂದ ಸಗಣಿ ಬರುವುದು, ಜನರ ಭಾಷೆಯೇ ಬದಲಾಗುವುದು ಅದು ಹಾಗಿರಲಿ, ಭಾರತದ ರದ್ದಿ ಕಾಗದದ ಬೆಲೆ ದಿಢೀರನೆ ಕುಸಿಯುವುದರ ಹಿಂದೆಯೂ ಈ ಡಂಕೆಲ್ ಕೈವಾಡವಿದೆ ಎಂಬುದನ್ನು ನಾವು ಯೋಚಿಸಿದರೆ ಡಂಕೆಲ್ ಯಾವೆಲ್ಲಾ ಕತೆ, ಹೇಗೆಲ್ಲಾ ನಡೆಸಬಹುದಾದ ದಾಳಿಯ ರೀತಿ ಅರ್ಥವಾಗುತ್ತದೆ.

ಇಲ್ಲಿನ ಬಹುಪಾಲು ಲೇಖನಗಳೆಲ್ಲಾ ಮೇಲಿಂದ ಮೇಲೆ ಅಮೇರಿಕಾದ ದಾಳಿಯ ಬಗ್ಗೆ ಎಚ್ಚರಿಸುತ್ತವೆ. ವಿ. ಆರ್. ಕೃಷ್ಣಯ್ಯರ್ ಅವರು ತಿಳಿಸಿದಂತೆ ಈ ಎಲ್ಲಾ ಲೇಖನಗಳು ಅಮೇರಿಕಾದತ್ತ ಬೊಟ್ಟು ಮಾಡುತ್ತಿರುವುದು 'ಅಮೇರಿಕಾದ ಬಗೆಗಿನ ಭೀತಿಯಿಂದಲ್ಲ, ಬದಲಿಗೆ ಭಾರತದ ಬಗೆಗಿನ ಪ್ರೀತಿಯಿಂದ'.

ಡಂಕೆಲ್ ಪ್ರಸ್ತಾಪಗಳ ವಿರುದ್ಧ ಹಲವು ರಂಗಗಳಿಂದ ಹೋರಾಟ ಮೂಡಿಬರುತ್ತಿವೆ. ಡಂಕೆಲ್ ಪ್ರಸ್ತಾಪಗಳ ಪರಿಣಾಮದ ಅಗಾಧತೆ ಅರಿವಾಗದೇ ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಸಾಕಷ್ಟು ಚಿಂತನೆ ನಡೆದಿಲ್ಲ. ಈ ಹಿಂದೆ ತುರ್ತು ಪರಿಸ್ಥಿತಿ, ಕೋಮು ವಾದದಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿ ತಮ್ಮ ಹೊಣೆಯನ್ನು ಈ ಕ್ಷೇತ್ರ ಸಮರ್ಥ ವಾಗಿ ನಿಭಾಯಿಸಿದೆ. ಗ್ಯಾಟಿನ ದಾಳಿ ಕೋಮುವಾದದ ಮುಂದುವರಿಕೆಯೂ ಹೌದು. ಭಾರತದ ಸಂಸ್ಕೃತಿ ಬುಡಮೇಲಾಗುವಾಗ 'ಭಾರತೀಯ ಸಂಸ್ಕೃತಿಯ ವಕ್ತಾರರು' ಮತ್ತಷ್ಟು ಭದ್ರವಾಗಿ ಬೇರೂರಲು ಇದು ಸಹಾಯ ಮಾಡುತ್ತದೆ– ಕತ್ತಲೆಯಲ್ಲಿ ಕ್ರಿಮಿಗಳು ಸಾಕಷ್ಟು ಸಂಖ್ಯೆಯಲ್ಲಿ ವೃದ್ಧಿಸುವ ಹಾಗೆ. ಗ್ಯಾಟನೊಂದಿಗೆ ಸಮರ ಈಗಾಗಲೇ ಆರಂಭವಾಗಿದೆ. ಸು. ರಂ. ಎಕ್ಕುಂಡಿಯವರು ಹೇಳುವಂತೆ ಯೋಧ ರಾಗಿ ರಣರಂಗಕ್ಕೆ ಹೋಗುವವರಿಗೆ ಕತ್ತಿ, ಗುರಾಣಿ ಶಸ್ತ್ರಾಸ್ತ್ರಗಳನ್ನು ತಯಾರಿಸ ಬೇಕಾಗಿದೆ,

ಈ ಮೊದಲಿನಿಂದಲೂ ಇಂತಹ ಹೊಣೆಯನ್ನು ಸಮರ್ಥವಾಗಿ ನಿಭಾಯಿಸುತ್ತಲೇ ಬಂದಿರುವ 'ಸಂಕ್ರಮಣ'ವೇ ಮತ್ತೆ ಡಂಕೆಲ್ ಪ್ರಸ್ತಾವನೆಗಳ ಬಗೆಗಿನ ಬೇಗುದಿಗೆ ಮಾತುಕೊಟ್ಟಿದೆ.

ಗ್ಯಾಟ ಒಪ್ಪಂದಕ್ಕೆ ಅಂತಿಮವಾಗಿ ಭಾರತ ಸಹಿ ಹಾಕಬೇಕಾದ ದಿನ ಮಂಗಳೂರಿ ನಲ್ಲಿದ್ದ ಚಂಪಾರವರೊಂದಿಗೆ ಮಾತನಾಡುವಾಗ ಮೇಲಿಂದ ಮೇಲೆ ಡಂಕೆಲ್ ಹಾವಳಿಯ ಪ್ರಸ್ತಾಪ ಬಂತು. ಕಡಲ ದಂಡೆಯ ನಿಂತು ಡಂಕೆಲ್ ಪ್ರಸ್ತಾವನೆ ಯಿಂದಾಗಿ ಬದಲಾಗಬಹುದಾದ ಪ್ರವಾಸೋದ್ಯಮದ ಚಿತ್ರಗಳ ಬಗ್ಗೆ ಮಾತನಾಡು ತ್ತಿದ್ದಾಗ ಅದುವರೆಗೂ ಚರ್ಚಿಸಿದ ಎಲ್ಲಾ ವಿಷಯಗಳನ್ನು ಒಂದೆಡೆ ಒಟ್ಟುಮಾಡುವ ಬಗ್ಗೆ ಚಂಪಾ ಪ್ರಸ್ತಾಪಿಸಿದರು. ಚಂಪಾರವರ ಮಂಗಳೂರು ಪ್ರವಾಸ ಮುಕ್ತಾಯ ವಾದದ್ದು 'ಡಂಕೆಲುನ್ನಾರು ಜಾಗ್ರತ' ಎಂಬ ಘೋಷಣೆಯನ್ನು ರೂಪಿಸಿಕೊಡುವು ದರೊಂದಿಗೆ.

'ಡಂಕೆಲುನ್ನಾರು ಜಾಗ್ರತ' ಎಂದು ಎಚ್ಚರಿಸುವುದೇ ಈ ಲೇಖನಗಳ ಮುಖ್ಯ ಉದ್ದೇಶ. ಡಂಕೆಲ್ ಹಾವಳಿಯನ್ನು ಕುರಿತು ಈಗಾಗಲೇ ಬಂದಿರುವ ಅನೇಕ ಲೇಖನಗಳನ್ನು ಸಂಕಲಿಸುವುದಷ್ಟೇ ನಮ್ಮ ಮುಖ್ಯ ಉದ್ದೇಶವಾಗಿತ್ತು. ಆದರೆ

ನಂತರ ಸಾಹಿತ್ಯ, ಸಂಸ್ಕೃತಿಯ ಮೇಲಿನ ದಾಳಿಯ ಬಗ್ಗೆ ಮಾತ್ರವೇ ಚರ್ಚಿಸುವುದರಿಂದ ಪ್ರಸ್ತಾವಗಳ ದಾಳಿಕೋರತನದ ಮತ್ತೊಂದು ಮುಖ ಗೊತ್ತಾಗುತ್ತದೆ ಎನ್ನುವ ಕಾರಣಕ್ಕಾಗಿ ಸಂಚಿಕೆ ಪ್ರಸ್ತುತ ರೂಪು ಪಡೆದಿದೆ.

ಈ ಸಂಚಿಕೆಗೆ ಲೇಖನ ಬರೆಯುವಂತೆ ಅಥವಾ ಡಂಕೆಲ್ ಪ್ರಸ್ತಾವಗಳನ್ನು ಕುರಿತು ಅವರ ಚಿಂತನೆಯ ಟಿಪ್ಪಣಿ ಕಳಿಸುವಂತೆ ಸಾಹಿತ್ಯ, ಸಾಂಸ್ಕೃತಿಕ ಲೋಕದ ಗಣ್ಯರಿಗೆ ಪತ್ರ ಬರೆಯಲಾಯಿತು. 'ಈ ವಿಷಯದ ಬಗ್ಗೆ ಸಾಕಷ್ಟು ಸಿದ್ಧತೆಯಿಲ್ಲ' ಎನ್ನದೇ ಬಹುತೇಕ ಮಂದಿ ಉತ್ತರಿಸಿದರು. ಸಂಕ್ರಮಣದ ಈ ಸಂಕಲನವನ್ನು ರೂಪಿಸಲೇ ಬೇಕಾದ ಮಹತ್ವ ನಮಗೆ ಮನವರಿಕೆಯಾಯಿತು.

ಡಂಕೆಲ್ ಪ್ರಸ್ತಾವನೆಗಳು ಉಂಟುಮಾಡುವ ಸಮಸ್ಯೆಗಳನ್ನು ಚೌಕಟ್ಟಿಗೆ ತರುವಲ್ಲಿ ಕೆಲಸ ಇಲ್ಲಿಂದ ಆರಂಭವಾಗಿದೆ ಎಂದಷ್ಟೇ ಹೇಳಬಹುದು. ಈ ಲೇಖನಗಳು ಮತ್ತಷ್ಟು ಚಿಂತನೆಗೆ ದಾರಿ ಮಾಡಿಕೊಡಬೇಕು. ಸಾಕಷ್ಟು ಚರ್ಚೆ ಈ ಚಿಂತನೆಯನ್ನು ಗಟ್ಟಿಗೊಳಿಸಬೇಕು. ಈ ಪುಟ್ಟ ಪ್ರಯತ್ನದಿಂದ ಹೋರಾಟದ ಮೊಳಕೆಯೊಂದು ಕುಡಿಯೊಡೆಯಬೇಕು ಎಂಬುದು ನಮ್ಮ ಆಶಯ. ಇಂತಹ ಒಂದು ಸಂಚಿಕೆ ರೂಪುಗೊಳ್ಳುವಲ್ಲಿ ಕವಿಮಿತ್ರ ಕೆ. ಫಣಿರಾಜ ಸಾಕಷ್ಟು ನೆರವು ನೀಡಿದ್ದಾರೆ. ಇವರಿಗೆ ವಂದನೆಗಳು.

ಡಂಕೆಲ್ ಪ್ರಸ್ತಾವನೆಗಳು ಕೇವಲ ದಾಳಿಯನ್ನೇ ನಡೆಸುತ್ತದೆಯೇ ಕಿಂಚಿತ್ತಾದರೂ ಕೊಡುಗೆ ಇಲ್ಲವೆ ಎಂಬ ಯೋಚನೆ ಮೇಲಿಂದ ಮೇಲೆ ಬಂತು. ವಚನಕಾರ ಅಲ್ಲಮಪ್ರಭು ಹೇಳುತ್ತಾರೆ: ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ನೋಡಾ.

●

ಡಂಕೆಲ್ ಪದಕೋಶ

ಗ್ಯಾಟ್ (GATT)

ಜನರಲ್ ಅಗ್ರಿಮೆಂಟ್ ಆಫ್ ಟ್ರೇಡ್ ಅ್ಯಂಡ್ ಟ್ಯಾರಿಫ್ಸ್

ಗ್ಯಾಟ್ ಎಂದರೆ ಸುಂಕಗಳು ಹಾಗೂ ವ್ಯಾಪಾರ ಕುರಿತಾದ ಸಾರ್ವತ್ರಿಕ ಒಪ್ಪಂದ. ವಿಶ್ವಬ್ಯಾಂಕ್ ಮತ್ತು ಐ.ಎಂ.ಎಫ್. ನಂತೆ ಎರಡನೇ ಮಹಾಯುದ್ಧದ ನಂತರ ಹುಟ್ಟಿದ ಸಂಘಟನೆ ಇದು. ಐ.ಎಂ.ಎಫ್., ವಿಶ್ವಬ್ಯಾಂಕ್‌ಗಳಂತೆ ಇದೊಂದು ಶಾಶ್ವತ ಸಂಸ್ಥೆಯಲ್ಲ. ವಿಶ್ವಸಂಸ್ಥೆ ಹಾಗೂ ಅವರ ಅಂಗಸಂಸ್ಥೆಗಳಂತಹ ಅಂತಾ-ರಾಷ್ಟ್ರೀಯ ಸಂಘಟನೆಯೂ ಅಲ್ಲ. ವ್ಯಾಪಾರಕ್ಕೆ ಸಂಬಂಧಪಟ್ಟಂತೆ ಸುಂಕದ ದರಗಳು ಹೇಗಿರಬೇಕು ಎಂಬ ಬಗ್ಗೆ ಒಂದು ತಾತ್ಕಾಲಿಕ ಒಪ್ಪಂದಕ್ಕಾಗಿ ಆರಂಭವಾಯಿತು.

೧೯೪೭ ರಲ್ಲಿ ೨೩ ಪಾಶ್ಚಿಮಾತ್ಯ ದೇಶಗಳು ಈ 'ತಾತ್ಕಾಲಿಕ' ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಗ್ಯಾಟ್ ಅಸ್ತಿತ್ವಕ್ಕೆ ಬಂತು. ಒಂದು ದೇಶ ಇನ್ನೊಂದು ದೇಶದೊಂದಿಗೆ ವ್ಯಾಪಾರ ಮಾಡಲು ನಡೆಸುವ ಮಾತುಕತೆ ಮತ್ತು ಒಪ್ಪಂದ ಗಳನ್ನು ದ್ವಿಪಕ್ಷೀಯ ಒಪ್ಪಂದ ಎಂದು ಕರೆಯಲಾಗುತ್ತದೆ. ಈ ಒಪ್ಪಂದಗಳಿಗೆ ಎರಡು ದೇಶಗಳು ಮಾತ್ರ ಬದ್ಧವಾಗಿರುತ್ತದೆ. ಹಲವಾರು ದೇಶಗಳು ಒಟ್ಟಿಗೆ ಕೂಡಿ ತಮ್ಮ ನಡುವಿನ ವ್ಯಾಪಾರ ಸಂಬಂಧಗಳು ಹೇಗಿರಬೇಕೆಂಬುದರ ಬಗ್ಗೆ ಮಾತುಕತೆ ನಡೆಸಿ ಒಪ್ಪಂದ ಮಾಡಿಕೊಳ್ಳುವುದನ್ನು ಬಹುಪಕ್ಷೀಯ ಒಪ್ಪಂದ ಎಂದು ಕರೆಯಲ್ಪಡುತ್ತದೆ. ಈ ರೀತಿಯ ಮಾತುಕತೆಯಿಂದ ಮಾಡಿಕೊಂಡ ಒಪ್ಪಂದಗಳಿಗೂ ಒಂದು ಕಾಲಮಿತಿ ಇದ್ದು ಅದರ ಅಂತ್ಯದಲ್ಲಿ ಹೊಸ ಸುತ್ತಿನ ಮಾತುಕತೆ ಆರಂಭವಾಗಿ ಹೊಸ ಒಪ್ಪಂದಗಳು ರೂಪುಗೊಳ್ಳುತ್ತವೆ.

ಉರುಗ್ವೇ ಸುತ್ತು

೧೯೪೭ ರಲ್ಲಿ ಜಿನೀವಾದಲ್ಲಿ ಗ್ಯಾಟ್‌ನ ಮೊದಲ ಸುತ್ತಿನ ಮಾತುಕತೆ ಆರಂಭ ವಾಯಿತು. ಎರಡನೇ ಮಹಾಯುದ್ಧದಿಂದ ದುರ್ಬಲಗೊಂಡ ಮುಂದುವರಿದ

ಪಾಶ್ಚಿಮಾತ್ಯ ದೇಶಗಳು ತಮ್ಮ ದೇಶದ ಉದ್ದಿಮೆಗಳ ರಕ್ಷಣೆಗಾಗಿ ಬೇರೆ ದೇಶಗಳ ಸರಕುಗಳ ಮೇಲೆ ವಿಪರೀತ ಸುಂಕಗಳನ್ನು ಹೇರದಿರಲಿ ಎಂದು ಆರಂಭವಾದ ಈ ಮಾತುಕತೆಗೆ ೧೯೪೭ ರಲ್ಲಿ ೨೩ ದೇಶಗಳು ಸಹಿ ಹಾಕಿದವು. ನಂತರ ಮತ್ತೆ ಆರು ಸುತ್ತಿನ ಮಾತುಕತೆಗಳು ನಡೆದಿವೆ.

೧೯೮೬ ರಲ್ಲಿ ಆರಂಭವಾದ ಉರುಗ್ವೇ ಸುತ್ತಿನ ಮಾತುಕತೆ ವಿಶ್ವದ ಗಮನವನ್ನು ಸೆಳೆಯುವಂತಹ ಮಾತುಕತೆ, ಉರುಗ್ವೇ ಸುತ್ತಿನ ಮಾತುಕತೆಗಳವರೆಗೂ ಗ್ಯಾಟ್ ಸರಕುಗಳ ವ್ಯಾಪಾರ ಸಂಬಂಧಿ ಪ್ರಶ್ನೆಯನ್ನಷ್ಟೇ ತನ್ನ ಮಿತಿಯೊಳಗಿರಿಸಿಕೊಂಡಿತ್ತು. ಆದರೆ ೧೯೮೬ ಸಪ್ಟೆಂಬರ್‌ನಲ್ಲಿ ಉರುಗ್ವೇಯ ಪುಂಟ ಡೆಲ್ ಎಸ್ತೆಯಲ್ಲಿ ಆರಂಭವಾದ ಮಾತುಕತೆಯಲ್ಲಿ ಸರಕು ವ್ಯಾಪಾರದ ಜೊತೆಗೆ ವ್ಯಾಪಾರ ಸಂಬಂಧಿ ಬಂಡವಾಳ ಹೂಡಿಕೆ ಕ್ರಮ (ಟ್ರಿಮ್ಸ್), ವ್ಯಾಪಾರ ಸಂಬಂಧಿ ಬೌದ್ಧಿಕ ಆಸ್ತಿ ಹಕ್ಕುಗಳು (ಟ್ರಿಪ್ಸ್), ಬ್ಯಾಂಕಿಂಗ್, ವಿಮೆ ಕ್ಷೇತ್ರದಂತಹ ಹಣಕಾಸು ಸೇವಾ ಸಂಬಂಧಿ ವಿಷಯಗಳನ್ನು ಪ್ರಸ್ತಾಪ ಮಾಡಲಾಗಿದೆ. ೧೯೮೬ ರ ನಂತರ ಮಧ್ಯಕಾಲೀನ ಅವಲೋಕನಕ್ಕಾಗಿ ೧೯೮೮, ೧೯೮೯ ರಲ್ಲಿ ಸಭೆ ಸೇರಿ ಚರ್ಚೆ ನಡೆಸಿ ಒಪ್ಪಂದದ ಅಂತಿಮ ಕರಡು ನಿಯಮಾವಳಿ ರೂಪಿಸಲಾಗಿದೆ.

ಡಂಕೆಲ್

ಗ್ಯಾಟ ಒಪ್ಪಂದದ ಅಂತಿಮ ಕರಡು ನಿಯಮಾವಳಿಯನ್ನು ರೂಪಿಸಿದವರು ಆರ್ಥರ್ ಡಂಕೆಲ್. ಗ್ಯಾಟ್ ಒಪ್ಪಂದಕ್ಕೆ 'ಮಹಾಭಕ್ಷಕ' ಸ್ವರೂಪ ನೀಡಿದ ಡಂಕೆಲ್ ಗ್ಯಾಟ್‌ನ ಮಹಾನಿರ್ದೇಶಕರಾಗಿದ್ದರು. ಪೀಟರ್ ಸದರ್‌ಲ್ಯಾಂಡ್ ಈಗ ಗ್ಯಾಟ್‌ನ ಮಹಾ ನಿರ್ದೇಶಕ. ಡಂಕೆಲ್ ವರದಿ ಎಂದೇ ಹೆಸರಾಗಿರುವ ಕುರಿತು ನಿಯಮಾವಳಿಯ ಗಾತ್ರ ಎಷ್ಟು ಗೊತ್ತೇ ? ಮುಖ್ಯ ವರದಿ ೫೦೦ ಪುಟ, ವಿವಿಧ ದೇಶಗಳಿಗೆ ಸಂಬಂಧಿಸಿದ ವರದಿ ಕೇವಲ ೨೦,೦೦೦ ಪುಟ. ಅಂತಿಮ ಕರಡನ್ನು ಡಂಕೆಲ್–ಸದರ್‌ಲ್ಯಾಂಡ ವರದಿ ಎಂದೂ ಕರೆಯುತ್ತಾರೆ.

ಟ್ರಿಪ್ಸ್
ಟ್ರೇಡ್ ರಿಲೇಟೆಡ್ ಇಂಟೆಲೆಕ್ಚುಯಲ್ ಪ್ರಾಪರ್ಟಿ ರೈಟ್ಸ್

ಯಾವದೇ ವಸ್ತು, ತಂತ್ರಜ್ಞಾನ ಇತ್ಯಾದಿಗಳನ್ನು ಸಂಶೋಧನೆ ಮಾಡಿದವರು ಅವುಗಳು ತಮ್ಮ ಬೌದ್ಧಿಕ ಪ್ರಯತ್ನಗಳ ಫಲವಾದ್ದರಿಂದ ಕೆಲವು ವರ್ಷಗಳ ಕಾಲ ಅವುಗಳ ಮೇಲೆ ಸ್ವಾಮ್ಯ ಹೊಂದುವುದನ್ನು ಬೌದ್ಧಿಕ ಆಸ್ತಿಯ ಹಕ್ಕು ಎಂದು ಹೇಳಬಹುದು. ಇವುಗಳಲ್ಲಿ ನಾಲ್ಕು ಮುಖ್ಯ ವಿಧಗಳಿವೆ : ಪೇಟೆಂಟ್. ಕಾಪಿರೈಟ್, ಟ್ರೇಡ್‌ಮಾರ್ಕ್ ಮತ್ತು ಇನ್ವೆಂಟರ್ಸ್ ಸರ್ಟಿಫಿಕೇಟ್.

ಪೇಟೆಂಟ್

ಇದು ೧೮೮೩ ರ ಪ್ಯಾರಿಸ್ ಸಮಾವೇಶದಲ್ಲಿ ರೂಪುಗೊಂಡು ಕಾಲಕಾಲಕ್ಕೆ ಬದಲಾಗುತ್ತ ಬಂದ ವ್ಯವಸ್ಥೆ. ಇದರ ಪ್ರಕಾರ ಆವಿಷ್ಕಾರ ಮಾಡಿದವರು/ಸಂಶೋಧಕರು ಆಯಾ ದೇಶಗಳ ಪೇಟೆಂಟ್ ಕಾಯ್ದೆಗೆ ಅನುಗುಣವಾಗಿ ತಮ್ಮ ಸಂಶೋಧನೆಗೆ ಕೆಲವು ವರ್ಷಗಳ ಕಾಲ ಸ್ವಾಮ್ಯ ಪಡೆಯುತ್ತಾರೆ. ಈ ಸಂಶೋಧನೆಯನ್ನು ಬಳಸುವವರು ಸ್ವಾಮ್ಯ ಹೊಂದಿದವರಿಗೆ ನಿಗದಿತ ಕ್ರಯ (ರಾಯಲ್ಟಿ) ನೀಡಿ ಉಪಯೋಗಿಸುವ ಅನುಮತಿ (ಲೈಸೆನ್ಸ್) ಪಡೆಯಬೇಕು. ಈ ಪೇಟೆಂಟ್‌ನಲ್ಲಿ ಸದ್ಯಕ್ಕೆ ಎರಡು ವಿಧ.

ಮೊದಲನೆಯದು 'ಪ್ರಾಡಕ್ಟ್ ಪೇಟೆಂಟ್'. ಇದರ ಅನ್ವಯ ಅಂತಿಮವಾಗಿ ಸಂಶೋಧನೆಗೊಂಡ ವಸ್ತುಗಳಿಗೆ ಪೇಟೆಂಟ್ ನೀಡಲಾಗುತ್ತದೆ. ಈ ವಸ್ತುಗಳನ್ನು ಉತ್ಪಾದಿಸುವವರು ಯಾವುದೇ ವಿಧಾನದಿಂದ ಉತ್ಪಾದಿಸಲಿ ಸ್ವಾಮ್ಯ ಹೊಂದಿದವರಿಗೆ ರಾಯಲ್ಟಿ ಕೊಟ್ಟು ಲೈಸೆನ್ಸ್ ಪಡೆಯಬೇಕು. ಪೇಟೆಂಟ್ ಮುಗಿಯುವವರೆಗೂ ಬೇರೆ ಯಾರೂ ಆ ವಸ್ತುವನ್ನು ಬೇರೆ ವಿಧಾನದಿಂದ ಉತ್ಪಾದಿಸುವಂತಿಲ್ಲ. ಅಮೇರಿಕಾ. ಯುರೋಪ ದೇಶಗಳು ಈ ರೀತಿಯ ಪೇಟೆಂಟ್ ವ್ಯವಸ್ಥೆ ಹೊಂದಿವೆ.

ಎರಡನೆಯದು 'ಪ್ರೊಸೆಸ್ ಪೇಟೆಂಟ್'. ಇಲ್ಲಿ ವಸ್ತುವನ್ನು ಉತ್ಪಾದನೆ ಮಾಡುವ ವಿಧಾನವನ್ನು ಮಾತ್ರ ಗೌರವಿಸಲಾಗುತ್ತದೆ. ಬೇರೆಯವರು ಅದೇ ವಸ್ತುವನ್ನು ಬೇರೆ ವಿಧಾನದಿಂದ ಉತ್ಪಾದಿಸಿದರೆ ಅದಕ್ಕೆ ಅಡ್ಡಿ ಮಾಡುವಂತಿಲ್ಲ. ಭಾರತ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳು ಈ ಪೇಟೆಂಟ್ ವ್ಯವಸ್ಥೆ ಹೊಂದಿವೆ.

ಎಪ್ರಿಲ್ ೧೫, ೧೯೯೪

ಡಂಕೆಲ್ ಕರಡು ವರದಿಗೆ ೧೯೯೩ ರ ಡಿಸೆಂಬರ್ ೧೫ ರಂದು ಭಾರತ ಸಹಿ ಹಾಕಿತು. ಸಹಿ ಹಾಕಿದ ಒಟ್ಟು ದೇಶಗಳ ಸಂಖ್ಯೆ ೧೧೭. ನಂತರದ ನಾಲ್ಕು ತಿಂಗಳ ಅವಧಿಯಲ್ಲಿ ಸಹಿ ಹಾಕಿದ ಎಲ್ಲಾ ದೇಶಗಳ ಸರ್ಕಾರಗಳು ಈ ಒಪ್ಪಂದಗಳಿಗೆ ಅನುಮೋದನೆ ನೀಡಬೇಕು. ಈ ಅನುಮೋದನೆಯೊಂದಿಗೆ ಇದುವರೆಗೂ ಕೇವಲ ಒಪ್ಪಂದವಾಗಿ ಮಾತ್ರ ಚಾಲ್ತಿಯಲ್ಲಿರುತ್ತಿದ್ದ ಗ್ಯಾಟ್ ಈಗ ವಿಶ್ವ ವ್ಯಾಪಾರ ಸಂಘಟನೆ (WTO) ಎಂಬ ಸಂಘಟನಾ ರೂಪ ಪಡೆಯುತ್ತದೆ. ೧೯೯೪ ರ ಎಪ್ರಿಲ್ ೧೫ ರಂದು ಮೊರಕ್ಕೋದ ರಾಜಧಾನಿ ಮರಕೇಶ್‌ನಲ್ಲಿ ಭಾರತ ಡಂಕೆಲ್ ವರದಿಯನ್ನು ಅನುಮೋದಿಸಿತು.

ಕೆ. ಫಣಿರಾಜ

‘ಡಂಕೆಲ್ ಯಜಮಾನಿಕೆ’ಯನ್ನು ಎದುರಿಸುವ ಪ್ರಶ್ನೆ

‘ಡಂಕೆಲ್ ಪ್ರಸ್ತಾಪ’ದಿಂದ ದೇಶದ ಸಾಂಸ್ಕೃತಿಕ ಜೀವನದ ಮೇಲಾಗುವ ಪರಿಣಾಮಗಳ ಬಗ್ಗೆ ವಿಚಾರ ಮಾಡುವಾಗ ಪ್ರಮುಖವಾದ ಸಮಸ್ಯೆ ಎದುರಾಗುತ್ತದೆ. ಕೃಷಿ ಕ್ಷೇತ್ರದ ಮೇಲೆ, ಔಷಧಿ ಕ್ಷೇತ್ರದ ಮೇಲೆ, ಕೈಗಾರಿಕೆಗಳ ಮೇಲೆ ಈ ಡಂಕೆಲ್ ಪ್ರಸ್ತಾಪ ಬೀರುವ ಪ್ರಭಾವವನ್ನು ಚರ್ಚಿಸುವ ‘ಮಾದರಿ’ಯನ್ನು ಉಪಯೋಗಿಸಿಕೊಂಡು. ಸಾಂಸ್ಕೃತಿಕ ವಲಯದ ಮೇಲಾಗುವ ಪ್ರಭಾವಗಳನ್ನು ವಿವರಿಸಲಿಕ್ಕೆ ಸಾಧ್ಯವೇ ? ಎಂಬುದು.

ನರಸಿಂಹರಾಯರ ಸರ್ಕಾರದ ‘‘ಉದಾರೀಕರಣ ನೀತಿ’ಯ ಪರಿಣಾಮವಾಗಿ ಭಾರತದ ಕೆಳವರ್ಗದ ಜನರ ಆರ್ಥಿಕ ಜೀವನದ ಮೇಲಾಗುವ ಪರಿಣಾಮವನ್ನಾಧರಿಸಿ, ಅವರ ಸಾಮಾಜಿಕ ಜೀವನದಲ್ಲಿ ತಲೆದೋರುವ ಬಿಕ್ಕಟ್ಟನ್ನು ವಿವರಿಸುವ ಪ್ರಯತ್ನವನ್ನು ಪ್ರಫುಲ ಬಿದ್ವಾಯಿ ತಮ್ಮ ಲೇಖನವೊಂದರಲ್ಲಿ ಮಾಡಿದ್ದರು. ‘ಉದಾರೀಕರಣ’ಕ್ಕೆ ಮುಂಚೆ ಇದ್ದ ದಿನೋಪಯೋಗಿ ವಸ್ತುಗಳ ಬೆಲೆ (ದೆಹಲಿಯಲ್ಲಿ) ಗಳನ್ನು ಕೊಟ್ಟು. ಕನಿಷ್ಠ ಆದಾಯವಿರುವ ಕೆಳ ಮಧ್ಯಮ ವರ್ಗದ ನೌಕರನೊಬ್ಬ ಅದನ್ನು ನಿಭಾಯಿಸುತ್ತಿದ್ದ ಬಗೆಯನ್ನು ಪ್ರಫುಲ ಬಿದ್ವಾಯಿ ವಿವರಿಸುತ್ತಾರೆ: ನಂತರದ ‘ಉದಾರೀಕರಣ’ದ ಫಲವಾಗಿ ಆ ವಸ್ತುಗಳ ಬೆಲೆಯಲ್ಲಾದ ಏರಿಕೆಯ ಅಂಕಿ ಅಂಶಗಳನ್ನು ಕೊಟ್ಟು, ಹೆಚ್ಚಾಗದ ಆದಾಯದಲ್ಲಿ ಅದೇ ನೌಕರ ತಲುಪುವ ದಾರುಣ ಸ್ಥಿತಿ ವಿವರಿಸುತ್ತಾರೆ. ಕುಟುಂಬದ ಆರೋಗ್ಯದ ಮೇಲೆ, ಮಕ್ಕಳ ವಿದ್ಯಾಭ್ಯಾಸದ ಮೇಲೆ, ಕೊನೆಗೆ ಎರಡು ಹೊತ್ತಿನ ಊಟದ ಮೇಲೆ, ಈ ‘ಉದಾರೀಕರಣ’ ಕೊಡುವ ಪೆಟ್ಟನ್ನು, ನಿಖರವಾಗಿಯೇ, ಬಿದ್ವಾಯಿ ತೋರುತ್ತಾರೆ. ಟೈಮ್ಸ್ ಆಫ್ ಇಂಡಿಯಾದಲ್ಲಿ ಪ್ರಕಟವಾದ ಮತ್ತೊಂದು ವರದಿ ದೇಶದ ವಿವಿಧ ಭಾಗಗಳಲ್ಲಿ ವಾಸಿಸುವ. ಕನಿಷ್ಠ ಆದಾಯವಿರುವ, ಜನವರ್ಗದ ಮೇಲೆ ‘ಉದಾರೀಕರಣ’ದ ಫಲ ಸ್ವರೂಪವಾದ ಬೆಲೆ ಏರಿಕೆ, ಯಾವ ರೀತಿಯ ದುಷ್ಪರಿಣಾಮ ಬೀರುತ್ತದೆ ಎಂಬುದನ್ನು ಅಂಕಿ ಅಂಶಗಳ ಸಮೇತ ವಿವರಿಸುತ್ತದೆ. ಈ ಎರಡು ಬರಹಗಳು, ತತ್ಫಲವಾದ ಸಾಮಾಜಿಕ ಬಿಕ್ಕಟ್ಟಿನ ಕಡೆಗೂ ಗಮನ ಸೆಳೆಯುತ್ತವೆ.

ಇದೇ 'ಮಾದರಿ'ಯನ್ನು ಉಪಯೋಗಿಸಿಕೊಂಡು ಅಶೋಕ್ ಮಿತ್ರ ಸಹಾ ಬರೆದಿದ್ದಾರೆ. ಅವರು ತಮ್ಮ ಅಂಕಣವೊಂದರಲ್ಲಿ, 'ಹೊಸ ಆರ್ಥಿಕ ನೀತಿ' ಯಿಂದ ಮಧ್ಯಮ ವರ್ಗದ ಕುಟುಂಬವೊಂದರಲ್ಲಿ ಎದುರಾಗಿರುವ ಆರ್ಥಿಕ ಬಿಕ್ಕಟ್ಟು ಕುಟುಂಬದ ಗಂಡು-ಹೆಣ್ಣು 'ಸೂಳೆಗಾರಿಕೆ'ಗೆ ಜಾರಬೇಕಾದ ಅನಿವಾರ್ಯತೆ ತರುತ್ತದೆ ಎಂಬುದಾಗಿ ಬರೆದಿದ್ದಾರೆ. ಅದೇ ರೀತಿ, 'ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ'ಯಲ್ಲಿ ತಾವು ಬರೆಯುತ್ತಿದ್ದ ಅಂಕಣದಲ್ಲಿ, ಅಶೋಕ್ ಮಿತ್ರ, ಐಎಂಎಫ್ ಪ್ರೇರಿತ ಆರ್ಥಿಕತೆಯಿಂದ, ಥೈಲ್ಯಾಂಡ್, ವಿಶ್ವ ಪ್ರವಾಸಿಗರ ವೇಶ್ಯಾವಾಟಿಕೆಯ ಮೋಜಿನ ತಾಣವಾಗಿ, ಏಡ್ಸ್ ರೋಗದಿಂದ ನರಳುತ್ತಿರುವುದನ್ನು ವಿವರಿಸುತ್ತಾ, ಭಾರತ ಸಹ ಅಂತಹ ಕಾಮ ತಣಿಸುವ ತಾಣವಾಗುವ ದಿನ ದೂರವಿಲ್ಲ: ಆಗ, 'ದೇಶದ ಆರ್ಥಿಕ ಉನ್ನತಿಗಾಗಿ, ನಿಮ್ಮ ಹದಿಹರೆಯದ ಹೆಣ್ಣು ಮಕ್ಕಳನ್ನು ವೇಶ್ಯೆಯರನ್ನಾಗಿಸಿ' ಎಂದು ಸರ್ಕಾರ ಮಂತ್ರಾಲಯ ಹೊರಡಿಸುವ ಜಾಹಿರಾತು ನೀಡುತ್ತದೆ ಎಂದು ಕಟುವಾಗಿ ಬರೆದಿದ್ದಾರೆ.

ಅಶೋಕ್ ಮಿತ್ರ, ಬಿಸ್ವಾಸ್ ಬೆಳೆಸುವ ಈ 'ಮಾದರಿ' Base ಮತ್ತು Super Structure ಗಳ ನೇರ ಸಂಬಂಧವನ್ನು ಆಧರಿಸಿದ್ದು. ಅಂದರೆ ಆರ್ಥಿಕ ನೀತಿ, ನೇರವಾಗಿಯೇ ತನ್ನ ಸಾಮಾಜಿಕ ಪರಿಣಾಮವನ್ನು ಪ್ರತಿಪಾದಿಸುತ್ತದೆ ಎಂಬುದು. ಲ್ಯಾಟಿನ್ ಅಮೇರಿಕ ದೇಶಗಳು ಐ. ಎಂ. ಎಫ್./ವಿಶ್ವಬ್ಯಾಂಕ್ ಪ್ರೇರಿತ ನೀತಿಗಳಿಂದ ತಲುಪಿರುವ ಸ್ಥಿತಿಯ ಬಗ್ಗೆ ಹಾಗೂ ತತ್ಪರಿಣಾಮವಾಗಿ ಮೂಡಿರುವ ಸಾಮಾಜಿಕ ಅಸಮಾಧಾನದ ಬಗ್ಗೆ ತಿಳಿದಾಗ, ಈ 'ಮಾದರಿ' ಸಾಕಷ್ಟು ಪರಿಣಾಮಕಾರಿಯಾದದ್ದು ಅನಿಸುತ್ತದೆಯಾದರೂ. ಆದರೆ ನನ್ನ ಅನಿಸಿಕೆ ಪ್ರಕಾರ ಇದಕ್ಕೊಂದು ದೌರ್ಬಲ್ಯವಿದೆ. ಅದೇನೆಂದರೆ, ಬಹುರಾಷ್ಟ್ರೀಯ ಕಂಪೆನಿಗಳು ದೇಶದ ಕೆಲವೇ ಕೆಲವು ಸಂಖ್ಯೆಯ ಶ್ರೀಮಂತ ವರ್ಗದ ಹಿತಾಸಕ್ತಿಯನ್ನು ಕಾಪಾಡುವ ನೀತಿಯನ್ನು ಜಾರಿಗೊಳಿಸಿ, ಸರ್ಕಾರ ಪರವಾಗಿ ಕುಳಿತು ಬಿಡುತ್ತದೆ: ಬಹುಸಂಖ್ಯಾತ ಜನತೆಯ ಮೇಲಾಗುವ ಪರಿಣಾಮ ಮತ್ತು ಫಲ ಸ್ವರೂಪವಾದ ಸಾಮಾಜಿಕ ಅಸಮಾಧಾನದ ವಿಷಯದಲ್ಲಿ ಅದು ಮಧ್ಯ ಪ್ರವೇಶ ಮಾಡದೆ, ಪರಿಸ್ಥಿತಿ ತನ್ನ ಸಹಜ ಗತಿಗೆ ತಿರುಗಲು ಬಿಟ್ಟುಬಿಡುತ್ತದೆ ಎಂಬುದು. ಇಲ್ಲಿ, ನನ್ನ ಅರ್ಥ, ಸರ್ಕಾರ, ದುಷ್ಪರಿಣಾಮಗಳು ಕಂಡಾಕ್ಷಣ, ತನ್ನ ನೀತಿಯನ್ನು ಹಿಂತೆಗೆದುಕೊಳ್ಳುವಷ್ಟು ಪ್ರಾಮಾಣಿಕವಾಗಿರುತ್ತದೆ ಎಂದಲ್ಲ. ಆದರೆ, ಆಳುವ ಸರ್ಕಾರ, ತನ್ನ ನೀತಿಯನ್ನು, ಯಾವ ಜನತೆ ಬಾಧಿತವಾಗಿರುತ್ತದೋ, ಅದೇ ಜನತೆಗೆ 'ಮಾರುವಷ್ಟು' ಮತ್ತು ಜನರ 'ಒಪ್ಪಿಗೆ' (ಕನ್ಸೆಂಟ್) ಪಡೆಯುವಷ್ಟರ ಮಟ್ಟಿಗೆ ಮಧ್ಯ ಪ್ರವೇಶಿಸುವಷ್ಟು ಚಾಣಾಕ್ಷವಾಗಿರಬಲ್ಲುದು ಎಂಬುದು.

ಜನತೆ ಹ್ಯಾಗೆ ಈ ನೀತಿಯನ್ನು ಗ್ರಹಿಸಬೇಕು ಎಂಬುವನ್ನು 'ಉತ್ಪಾದಿಸಿ' ಕೊಡಬಲ್ಲ. ಈ ಮೂಲಕ ಅದು 'ಜನರ ಹಿತಾಸಕ್ತಿ' ಎಂಬ 'ಭ್ರಮೆ' ಹುಟ್ಟಿಸಿ ತನ್ನ ನೀತಿಗೆ ದೇಶದಲ್ಲಿ ವಿಸ್ತೃತ ಅವಕಾಶ (Space) ಕಲ್ಪಿಸಿ ಕೊಡಬಲ್ಲ ತಂತ್ರಗಳನ್ನು ಐ. ಎಂ. ಎಫ್. / ವಿಶ್ವಬ್ಯಾಂಕ್, ತನ್ನ ಶಿಷ್ಯವರ್ಗದ ಪ್ರಭುತ್ವಗಳಿಗೆ ಕಲಿಸಿಕೊಡುತ್ತವೆ ಎಂಬುದು. Base ಮತ್ತು Super Structure ಗಳ ನಡುವೆ ನೇರ ಕಾರ್ಯ-ಕಾರಣ ಸಂಬಂಧಕ್ಕೆ ಒತ್ತಾಯಿಸುವ, ಮೇಲೆ ಹೇಳಿದ 'ಮಾದರಿ', ಈ ಸೂಕ್ಷ್ಮಗಳನ್ನು ಮುಖ್ಯ ಮಾಡದೆ ಇರುವುದರಿಂದ. ಅದು ತೋರುವ ಶೋಷಣೆಯ ಸ್ವರೂಪ ಒಂದು ಮಟ್ಟಕ್ಕೆ 'ಉತ್ಪ್ರೇಕ್ಷಿತ' ಅನಿಸಿ. ಅಷ್ಟರ ಮಟ್ಟಿಗೆ ಅದು ದುರ್ಬಲವಾಗಿರುತ್ತದೆ ಎಂಬುದನ್ನು ಇಲ್ಲಿ ಗ್ರಹಿಸುವುದೊಳ್ಳೆಯದು.

ನಮಗೆ ತಕ್ಷಣಕ್ಕೆ ದೊರೆಯುವ ಎರಡನೇ ಮಾದರಿ 'ಪ್ರೋಸ್ಟ್ ಮಾಡರ್ನಿಷ್ಟ'ರದು. ಈ 'ಮಾದರಿ'ಯ ಪಾಂಡಿತ್ಯ, ಆಧುನಿಕತೆಯ ಅನಿಷ್ಟಗಳನ್ನು ಬಿಚ್ಚುವಲ್ಲಿ ಅದು ತೋರುವ ಉತ್ಸಾಹ ಮತ್ತು ಸಾಮರ್ಥ್ಯ ಎಷ್ಟು ಪರಿಣಾಮಕಾರಿಯಾದದ್ದೆಂದರೆ, ತಕ್ಷಣ ಈ ಮಾದರಿಯನ್ನು ಅನುಸರಿಸುವ ಅಭಿಮತಕ್ಕೆ ನಾವು ಒಳಗಾಗುತ್ತೇವೆ. ಬಂಡವಾಳಶಾಹಿ ಉತ್ಪಾದನೆಯಲ್ಲಿ ಸಕಲವೂ ಸರಕುಗಳಾಗಿ ಮಾರ್ಪಟ್ಟು, ಮನುಷ್ಯನ ಅಸ್ತಿತ್ವವೇ ನಿಕೃಷ್ಟತೆಗಿಳಿಯುವ ಪರಿಸರದಲ್ಲಿ, ಪ್ರೋಸ್ಟ್‌ಮಾಡರ್ನಿಷ್ಟರು ಕೊಡುವ ಆಧುನಿಕತೆಯ ಪರಾಮರ್ಶೆಯ ಮುಖ್ಯ ನೆಲೆ ಆಧುನಿಕತೆಯ ಪೂರ್ವದ ಜೀವನ ವ್ಯವಸ್ಥೆ. ಪರಕೀಯತೆ ತುಂಬುವ ಆಧುನಿಕ (ಬಂಡವಾಳಶಾಹಿ ಎಂದು ಓದಿಕೊಳ್ಳಿ) ಪರಿಸರದಲ್ಲಿ ಈ ಪರಾಮರ್ಶೆ, ಆತ್ಮೀಯವಾಗುವುದಕ್ಕೆ ಮುಖ್ಯ ಕಾರಣ, ಅದು 'ಸಾಮೂಹಿಕ ಪುರಾತನ ಪ್ರಜ್ಞೆ'ಯನ್ನು ಉದ್ದೀಪಿಸುವುದಾಗಿದೆ. ಆಧುನಿಕತೆಗೆ ಪೂರ್ವದ ಜೀವಂತ ನೆಲೆಗಳಿಂದ ನಾವು ಆಧುನಿಕತೆಯನ್ನು ಪ್ರತಿರೋಧಿಸಬೇಕೆನ್ನುವ ನಿಶ್ಚಯದ ವರೆಗೆ ಈ ಪರಾಮರ್ಶೆ ಮುಂದುವರೆಯುತ್ತದೆ. ಹೀಗಾಗಿ ಈ ಮಾದರಿಗೆ 'ಡಂಕೆಲ್ ಪ್ರಸ್ತಾವ'ದ ಪರಿಣಾಮವನ್ನು ವಿವರಿಸುವುದೆಂದರೆ, ಆಧುನಿಕತೆಯ ತನ್ನ ಕಟು ಪರಾಮರ್ಶೆಯನ್ನು ಕಟುವಾಗಿ ವಿಸ್ತರಿಸುವುದೆಂಬುದೇ ಆಗಿದೆ. 'ವಸಾಹತುಶಾಹಿ'ಯಿಂದ ಸ್ಥಾನ ಪಲ್ಲಟಗೊಂಡಿರುವ 'ದೇಶಿಯ' ಜೀವನ ಕ್ರಮದ ವಿಮರ್ಶೆ, ಹೆಚ್ಚು ಕಡಿಮೆ 'ನವ ವಸಾಹತುಶಾಹಿ'ಯಿಂದ ಈ ಬಿಕ್ಕಟ್ಟು ಉಲ್ಬಣಗೊಳ್ಳುವುದರ ವಿಮರ್ಶೆಯೂ ಆಗುತ್ತದೆ. [ಈ ನೆಲೆಗಳನ್ನು ಅರ್ಥೈಸಿಕೊಳ್ಳಲಿಕ್ಕೆ 'ರುಜುವಾತು' ಸಂಚಿಕೆ; ೩೭ ರ ಕೆಲವು ಲೇಖನಗಳನ್ನು ಓದಬಹುದು]. ಈ 'ಮಾದರಿ'ಯ ಗಂಭೀರವಾದ ಮಿತಿಯೆಂದರೆ, 'ಆಧುನಿಕತೆ', ಒಂದಲ್ಲ ಒಂದು ರೀತಿಯಲ್ಲಿ

ನಮ್ಮ ಜೀವನದ 'ಸಹಜ' ಭಾಗವಾಗಿದೆ ಎಂಬುದನ್ನು ಕಡೆಗಾಣಿಸುವುದು. ಆಧುನಿಕ ಜೀವನ ಅಂತರ್ಗತಗೊಳಿಸಿರುವ ಮೌಲ್ಯಗಳನ್ನು ವಿಮರ್ಶೆ ಮಾಡಬೇಕಾದರೆ, ಆಧುನಿಕವೇ ಆದ ಮಾನದಂಡಗಳು ಬೇಕು: ಆಧುನಿಕ ಪೂರ್ವ ಮೌಲ್ಯಗಳಿಂದ ಆಧುನಿಕತೆಯನ್ನು ಅಳೆಯುವುದು ಭೂತಗನ್ನಡಿಯ ಬಿಂಬವನ್ನೇ ಸಿಂಧುಗೊಳಿಸುವುದು ಎಂಬ ವೈರುಧ್ಯವನ್ನು. ಮಾದರಿ ಪೋಸ್ಟ್‌ಮಾಡರ್ನಿಷ್ಟರು ಗಮನಿಸಿಯೇಯಿಲ್ಲ. ಆಧುನಿಕತೆಯ ಪ್ರಭಾವ ಅನಿವಾರ್ಯವಾಗಿರುತ್ತದೆ ಎಂದು ನಂಬುವ ಈ ವಾದ, ಆಧುನಿಕತೆಯ ದ್ವಂದ್ವಮಾನಾತ್ಮಕ ಸ್ವರೂಪವನ್ನು, ತನ್ನೊಳಗೆ ತನ್ನ ವಿರೋಧಿಗಳನ್ನು ಹುಟ್ಟಿಸಿಕೊಳ್ಳುವ ಕ್ರಿಯೆಯನ್ನು ಗಣನೆಗೆ ತಂದುಕೊಳ್ಳುವುದಿಲ್ಲ: ಆಧುನಿಕತೆಯನ್ನಪ್ಪಿಯೂ ಅದರ ಬಂಡಾಯಗಾರರು ಹುಟ್ಟುವ ವೈರುಧ್ಯವನ್ನು ಗಂಭೀರವಾಗಿ ಪರಿಗಣಿಸದ ಈ 'ಮಾದರಿ' ಸಹಜವಾಗಿಯೇ. 'ಆಧುನಿಕತೆ' ಯನ್ನು ವಿವಿಧಾರ್ಥಗಳಲ್ಲಿ ಗ್ರಹಿಸದೆ, ಎಲ್ಲವನ್ನು ಒಟ್ಟಾಗಿ ಸೂಕ್ಷ್ಮಗಳನ್ನು ಮರೆತು 'ಲಂಪ್ಸ್' ಎಂದೇ ಸಾಮಾನ್ಯೀಕರಿಸುತ್ತದೆ. ಆಧುನಿಕತೆಯನ್ನು ತಮ್ಮ ವರ್ಗಹಿತಾಸಕ್ತಿಗಾಗಿ 'ಉತ್ಪಾದಿಸುವವರು' ಮತ್ತು ಈ ರೀತಿಯ 'ಉತ್ಪಾದನೆಗೆ' ಭಿನ್ನಮತ ತೋರುವವರು ಒಂದೇ ಎಂದಾದರೆ. ಅತ್ಯಂತ ಆಧುನಿಕ ಸಮಸ್ಯೆಯಾದ 'ಡಂಕೆಲ್ ಪ್ರಸ್ತಾವ' ದ ಪ್ರಭಾವವನ್ನು ಗ್ರಹಿಸುವುದು, ಒಂದೋ ತುಂಬಾ ಸರಳವಾದುದು. ಇಲ್ಲವೇ 'ಅರ್ಥಹೀನ' ವಾದವು. ಅದಕ್ಕಾಗಿಯೇ ಪ್ರಸ್ತುತ ಚರ್ಚೆಗೆ ಈ 'ಮಾದರಿ' ಉಪಯುಕ್ತ ಉಪಕರಣವಲ್ಲ ಎಂದು ನಾನು ವಾದಿಸುತ್ತೇನೆ.

ಈ ಅರ್ಥದಲ್ಲಿ, ಪ್ರಸ್ತುತ ಸಮಸ್ಯೆಯನ್ನು ಗ್ರಹಿಸಲಿಕ್ಕೆ 'ಸೂಕ್ತವಾದ ಮಾದರಿ' ಯನ್ನು ನಾವು 'ರಚಿಸಿ' ಕೊಳ್ಳಬೇಕಾಗಿದೆ. 'ರಚಿಸಿ' ಕೊಳ್ಳಬೇಕು ಎಂದು ಯಾಕೆ ಹೇಳುತ್ತೇನೆ ಎಂದರೆ ಈ ಗ್ರಹಿಕೆ ಸ್ವಯಂ ವೇದ್ಯವಾಗುವಂತಹುದು, ನೇರವಾಗಿ ಮೂರ್ತಿಗೊಳ್ಳುವಂಥದು ಅಲ್ಲ ಎಂಬ ಕಾರಣಕ್ಕಾಗಿ. ಇದರರ್ಥ, ಮೇಲೆ ತಿಳಿಸಿದ ಎರಡು 'ಮಾದರಿ' ಗಳನ್ನು ಹೊರಗಿಟ್ಟುಕೊಂಡು ಕೆಲಸ ಮಾಡುವುದಲ್ಲ, ಆ ಎರಡು ಮಾದರಿಗಳನ್ನು ಒಳಗೊಂಡೇ ಅವುಗಳೊಳಗಿನ ದೋಷಗಳನ್ನು ನಿವಾರಿಸಿಕೊಂಡೇ, ಪ್ರಸ್ತುತವೆನಿಸುವ 'ಮಾದರಿ' ಯನ್ನು ರಚಿಸಿಕೊಳ್ಳಬೇಕು ಎಂಬುದು ನನ್ನ ವಾದ. ಒಂದರ್ಥದಲ್ಲಿ ಇದು 'ಮಾದರಿ' ಯೋ ಆಗಿರದೇ ಸಮಸ್ಯೆಯನ್ನು ಮೂರ್ತವಾಗಿಸಿಕೊಳ್ಳುವ ಪ್ರಯತ್ನ ಮಾತ್ರ. ಇದಕ್ಕಿಂತ ಮುಂದೆ ಹೋಗಿ ಯಾವ ಮಹತ್ವಾಕಾಂಕ್ಷೆ ಸ್ಥಾನವನ್ನು ಈ ಪ್ರಯತ್ನ ಬೇಡಬಾರದು.

ಪಾತ್ರದಲ್ಲಿ ' ಡಂಕೆಲ್ ಪ್ರಸ್ತಾವ 'ದ ಪರಿಣಾಮವನ್ನು, ' ವಸಾಹತುಶಾಹಿಯು ' ದ ರೀತಿಗೆ ಅಥವ ' ನವ ವಸಾಹತುಶಾಹಿ ' ಯು ನಗ್ನ ರೂಪದಲ್ಲಿ ಪ್ರಭುತ್ವ ಸ್ಥಾಪಿಸುತ್ತದೆ. ಎಂದು ಹೇಳಲಾಗುತ್ತದೆ. ಹಾಗೆಯೇ, ' ವಸಾಹತುಶಾಹಿ ' ಯಂತೆ. ಪ್ರಸ್ತುತ ಚಿತ್ರಣ, ಒಂದು ಪ್ರತ್ಯೇಕ ಕಂಪನಿ ಅಥವಾ ಒಂದು ರಾಷ್ಟ್ರದ ರೂಪದಲ್ಲಿ ಬರದೆ, ವಿವಿಧ ಬಹುರಾಷ್ಟ್ರೀಯ ಕಂಪನಿಗಳ (MNC) ಹಿತಾಸಕ್ತಿಯನ್ನು ಪ್ರಚ್ಛನ್ನವಾಗಿಟ್ಟುಕೊಂಡ ಒಪ್ಪಂದದ ರೂಪದಲ್ಲಿ ಬರುತ್ತಿದೆ ಎಂಬುದರ ಕಡೆಗೆ, ಅರ್ಥ ಶಾಸ್ತ್ರಜ್ಞರು, ಅಂತಾರಾಷ್ಟ್ರೀಯ ಕಾನೂನು ತಜ್ಞರು ಗಮನ ಸೆಳೆಯುತ್ತಿದ್ದಾರೆ. [ಅಮಿಯ ಕುಮಾರ್ ಬಾಗ್ಚಿ, ' ಡಂಕೆಲ್ ಪ್ರಸ್ತಾವ ' ವನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಕೊಟ್ಟಿರುವ ' ಹಕ್ಕುಪತ್ರ ' ಎಂದೇ ಕರೆದಿದ್ದಾರೆ]. ಇನ್ನು ಹೆಚ್ಚು ಅಪಾಯಕಾರಿಯಾದದ್ದೆಂದರೆ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಾನೂನು ಬದ್ಧಗೊಳಿಸಲ್ಪಟ್ಟ ಸಂಸ್ಥೆಯೊಂದರ ಮುಖಾಂತರ ಬಹುರಾಷ್ಟ್ರೀಯ ಕಂಪನಿಗಳ ಪ್ರಭುತ್ವ ಸ್ಥಾಪನೆಯಾಗುವುದು. ಇದರ ಪರಿಣಾಮವೆಂದರೆ ೧) ಶೋಷಿಸುವವರು ನೇರವಾಗಿ ಪೂರ್ಣ ರೂಪದಲ್ಲಿ ಸಾಮಾನ್ಯರ ಕಣ್ಣೆದುರಿಗೆ ದೊರೆಯದಿರುವುದು. ೨) ' ಶೋಷಣೆ '. ' ಸಹಿ ಹಾಕಿದ ಎಲ್ಲ ರಾಷ್ಟ್ರಗಳ ಲಾಭಕ್ಕಾಗಿ ' ಎಂಬ ' ಒಪ್ಪಿಗೆ ' ಯೊಡನೆ ಬರುವುದು ಇದು ನಿಜವಾಗಿಯೂ ಅಂತಾರಾಷ್ಟ್ರೀಯ ಪ್ರಭುಗಳು ಸಾಧಿಸಿದ ಪರೋಕ್ಷ ಕ್ರಾಂತಿ(ಪ್ಯಾಸಿವ್ ರವೆಲ್ಯೂಷನ್.)೧ ಹೀಗಾಗಿ ' ಡಂಕೆಲ್ ಪ್ರಸ್ತಾವ ' ದ ಪರಿಣಾಮಗಳೆಲ್ಲವೂ. ಮುಖಕ್ಕೆ ರಾಚುವಂತೆ. ನೇರವಾಗಿಯಲ್ಲದೆ, ' ನ್ಯಾಯಬದ್ಧತೆ ' ಯ ಪವಿತ್ರ ವಸ್ತ್ರಗಳಲ್ಲಿ ಬರುತ್ತವೆ ಎಂಬುದನ್ನು ಗಮನಿಸಬೇಕು. ಹೀಗಾಗಿ. ಅವು ಹೇರುವ ' ದಾಸ್ಯ ' ನಿಧಾನವಾಗಿ ಆವರಿಸಿಕೊಳ್ಳುತ್ತ, ದೀರ್ಘ ಕಾಲದಲ್ಲಿ. ' ನಿಜರೂಪ ' ತೋರಿಸಿಕೊಳ್ಳುವ ಸಾಧ್ಯತೆಗಳ ಕಡೆ ನಮ್ಮ ಗಮನ ಹರಿಯಬೇಕು; ಅಷ್ಟು ಹೊತ್ತಿಗಾಗಲೇ ಆ ' ದಾಸ್ಯ ' ನಮ್ಮ ಜೀವನದ ಸಹಜ ಭಾಗವಾಗಿ ಹೋಗಿ ಬಿಡುವ ಎಲ್ಲ ಸಾಧ್ಯತೆಗಳು ಇರುವುದರಿಂದ, ಅದು ಕೂಡ ನಮ್ಮ ಜೀವನದ ಸಹಜ ಅಂಗವೇ ಆಗಿಬಿಡುವ ಸರ್ವಸಾಧ್ಯತೆಗಳನ್ನು ನಾವು ಮುಂಗಾಣಬೇಕು. ಅದಕ್ಕಾಗಿಯೇ, ' ಡಂಕೆಲ್ ಪ್ರಸ್ತಾವ ' ದ ಪರಿಣಾಮಗಳು ನಿಜಸ್ವರೂಪದಲ್ಲಿ ತೋರಿಕೊಳ್ಳದಿದ್ದರೂ, ಅದನ್ನೊಂದು ' ಸಮಸ್ಯೆ ' ಯನ್ನಾಗಿಸಿ ಅದರ ವಿರುದ್ಧ ಸಂಘರ್ಷಕ್ಕಿಳಿಯುವ ಅನಿವಾರ್ಯತೆ ಇದೆ. ಈ ಸಂದರ್ಭದಲ್ಲಿ ತಕ್ಷಣಕ್ಕೆ ನಾನು ಎರಡು ಉದಾಹರಣೆಗಳನ್ನು ಕೊಡಬಯಸುತ್ತೇನೆ. ಒಂದು ' ಇಂಗ್ಲೀಷ್ ' ನ ಸ್ಥಾನಮಾನದ ಬಗ್ಗೆ ನಾವು ರೂಢಿಸಿಕೊಂಡಿರುವ ಕಲ್ಪನೆಗಳು. ಎರಡನೇಯದು ಮಹಿಳೆಯ ಸ್ಥಾನಮಾನದ ಬಗ್ಗೆ ನಾವು ಇವತ್ತಿಗೂ ಅನುಸರಿಸಿಕೊಂಡು ಬರುತ್ತಿರುವ ರೂಢಿ. ' ಇಂಗ್ಲಿಷ್ 'ಗೆ ಅಗ್ರಸ್ಥಾನವನ್ನು ನಾವು ಪ್ರಶ್ನಾತೀತವೆಂದೇ ನಂಬು

ತ್ತೇವೆ: ಮಾಹಿತಿಯೂ, ವಿಷ್ಟೇ ವಿಮೋಚನೆಗೊಂಡರೂ. ಒಂದು ಕಟ್ಟಳೆಗೆ ಬದ್ಧರಾಗಿರುವ ಬಂದೀ ಆಗಿರುತ್ತೇವೆ. ಮಾನವನ ಜೀವನದ ಕಾರ್ಯ-ಕಾರಣಗಳಲ್ಲಿ, ಈ ಬೂರ್ಜ್ವಾದಿ ಲೂಟಿ ನೇರವಾಗಿ ವಿದಿತವಾಗದಿದ್ದರೂ, ಅವು ನಮ್ಮ ಜೀವನ ದನ್ನು ಸಾಧ್ಯವಟ್ಟಿಗೆ ದುರ್ಬಲಗೊಳಿಸಿವೆ. ಹೀಗಾಗಿ, ಇಂಗ್ಲೀಷನ್ನು, ಮಾಹಿತಿಯ ಸ್ಥಾನಮಾನವನ್ನು, ಪ್ರಜ್ಞಾಪೂರ್ವಕವಾಗಿಯೇ ಒಂದು ‘ಸಮಸ್ಯೆ’ಯನ್ನಾಗಿಸಿ, ನಾವು ಸಂಘರ್ಷಕ್ಕಿಳಿಯ ಬೇಕಾಗಿದೆ.೨ ಒಟ್ಟರ್ಥದಲ್ಲಿ ‘ಡಂಕೆಲ್ ಪ್ರಸ್ತಾವ’ದಿಂದ ಒದಗಿರುವ ಸಾಂಸ್ಕೃತಿಕ ಸಮಸ್ಯೆಗಳೂ ಇದೇ ತೆರನಾಗಿದ್ದು. ಆ ಸಮಸ್ಯೆಗಳನ್ನು ಮೂರ್ತವಾಗಿ ರೂಪಿಸಿಕೊಂಡು ಸಂಘರ್ಷಕ್ಕಿಳಿಯಬೇಕಾಗಿದೆ ಎಂಬುದು ನನ್ನ ಅಭಿಮತವಾಗಿದೆ.

‘ಡಂಕೆಲ್ ಪ್ರಸ್ತಾವ’ದಿಂದ ಸಾಂಸ್ಕೃತಿಕ ಕ್ಷೇತ್ರದ ಮೇಲಾಗುವ ಪರಿಣಾಮ ಚರ್ಚಿಸುವಾಗ ಡಂಕೆಲ್ - ಪೂರ್ವ ಸಾಂಸ್ಕೃತಿಕ ಪರಿಸ್ಥಿತಿಯೇನು ?’ ಅಲ್ಲಿರುವ ಅಂಶಗಳು ಯಾವುವು ? ಸಮಾಜದ ಯಾವ್ಯಾವ ವಿಭಾಗಗಳು ಯಾವ ರೀತಿ ಪ್ರಭಾವಕ್ಕೊಳಗಾಗಿವೆ ? ಯಾವ್ಯಾವ ವರ್ಗ, ಎಷ್ಟೆಷ್ಟು ಅವಕಾಶಗಳನ್ನು ಗಳಿಸಿ/ಉಳಿಸಿಕೊಂಡಿವೆ ? ವಿವಿಧ ವರ್ಗಗಳ ಭಾಗವಹಿಸುವಿಕೆಯ ಹಿಂದಿರುವ ಚಾರಿತ್ರಿಕ, ರಾಜಕೀಯ, ಆರ್ಥಿಕ, ಸಾಮಾಜಿಕ ಕಾರಣಗಳೇನು ? ಇವೆಲ್ಲ ಪ್ರಶ್ನೆಗಳಿಗೆ ಉತ್ತರಿಸಿಕೊಂಡಾಗ ಮಾತ್ರ ಡಂಕೆಲೋತ್ತರ ಪರಿಸ್ಥಿತಿ ಇವುಗಳಲ್ಲಾಗುವ ಬದಲಾವಣೆಗಳೇನು, ಬೀಳುವ ಹೊಡೆತಗಳ್ಯಾವವು ಎಂಬುದನ್ನು ಚರ್ಚಿಸಲಿಕ್ಕೆ ಸಾಧ್ಯವಾದೀತು. ಸಾಂಸ್ಕೃತಿಕ ವಲಯದ ಎಲ್ಲ ಸೂಕ್ಷ್ಮಗಳಿಗೂ ಒಂದೇ ಉತ್ತರ ಸಾಕಾಗುತ್ತದೆ ಎಂಬುದು ಸರಳೀಕರಣವಾಗುತ್ತದೆ. ಈ ಕಾರಣವಾಗಿಯೇ ಜನ ಜೀವನದ ಸಂಸ್ಕೃತಿಯ ಮೇಲೆ ಪ್ರಭಾವ ಬೀರುವ ಪ್ರತಿಯೊಂದು ವಲಯಗಳನ್ನು ಪ್ರತ್ಯೇಕ ಪರಿಶೀಲನೆಗೊಳಪಡಿಸದೆ ವಿಧಿಯಿಲ್ಲ. ಅದು ಅತ್ಯಂತ ವಿಸ್ತಾರವಾದ ಕೆಲಸ-ಕೂಡ. ನನ್ನ ಉದ್ದೇಶ ‘ಡಂಕೆಲ್’ ಪ್ರಭಾವವನ್ನು ಹ್ಯಾಗೆ ಗ್ರಹಿಸಬೇಕೆಂಬ ಚರ್ಚೆಯತ್ತ ಗಮನ ಸೆಳೆಯುವುದಾಗಿರುವುದರಿಂದ, ಒಂದು ಉದಾಹರಣೆಯನ್ನಷ್ಟೇ ಚರ್ಚೆಯ ವಿಷಯವನ್ನಾಗಿಸಿಕೊಳ್ಳುತ್ತೇನೆ. ಸಂಸ್ಕೃತಿ, ಸಾಂಸ್ಕೃತಿಕ ಎಂದಾಕ್ಷಣ ನಮ್ಮ ಮೆದುಳಿನಲ್ಲಿ ಮಿಂಚುವ ಕಲೆ, ಸಾಹಿತ್ಯ, ನೃತ್ಯ ಇತ್ಯಾದಿಗಳನ್ನು ಬಿಟ್ಟು ಇವುಗಳ ಮೇಲೆ ಪ್ರಭಾವ ಬೀರುವ ಒಂದು ವಲಯವಾಗಿರುವ ‘ಸಾಕ್ಷರತೆ’ಯ ವಿಷಯವನ್ನು ನಾನು ಚರ್ಚೆಗೆತ್ತಿಕೊಳ್ಳುತ್ತೇನೆ.

ನನ್ನ ಅರ್ಥದಲ್ಲಿ, ‘ಸಾಕ್ಷರತೆ’ ಎಂದರೆ, ಆಧುನಿಕ ಜೀವನದ ವ್ಯವಹಾರದಲ್ಲಿ **ಸಕ್ರಿಯವಾಗಿ** ಭಾಗವಹಿಸುವುದನ್ನು ಕಲಿಯುವುದು. (‘ಸಕ್ರಿಯ’ ಎಂಬುದಕ್ಕೆ

ಒಪ್ಪಬೇಕು: ಯಾಕೆಂದರೆ, ಬೇಕೆಂದರೂ / ಬೇಡವೆಂದರೂ, ಆಧುನಿಕತೆಯೊಳಗೆ ಎಲ್ಲರೂ ಪಾಲ್ಗೊಂಡಿರುತ್ತಾರೆ). ಆಧುನಿಕ ಉತ್ಪಾದನೆಯು ಬೃಹತ್ ಪ್ರಮಾಣದ್ದಾಗಿರುವುದರಿಂದ, ಅದು ವಿಸ್ತೃತ ಜನ ಸಮುದಾಯವನ್ನು ಸಾಕ್ಷರಗೊಳಿಸದೆ ಬೆಳೆಯಲಾರದು. ಇದು ಆಧುನಿಕ ಪೂರ್ವ ಸಮಾಜ ಕ್ರಿಯೆಗೆ ವಿರುದ್ಧವಾದುದು. ಈ ಕಾರಣಕ್ಕಾಗಿಯೇ ಆಧುನಿಕ ಸಮಾಜದಲ್ಲಿ 'ಸಾಕ್ಷರತೆ' ಎಂಬುದು ಪ್ರಗತಿಯನ್ನಳೆಯುವ ಮಾನದಂಡ. ಇದರಲ್ಲಿ ನಿಸ್ವಾರ್ಥವಾದುದು, ಪವಿತ್ರವೆನಿಸಿಕೊಳ್ಳುವಂತಹದೂ ಏನೂ ಇಲ್ಲ; ಆಧುನಿಕ ಉತ್ಪಾದನಾ ಕ್ರಮದಿಂದ ಲಾಭಗಳಿಸುವ ವರ್ಗಕ್ಕೆ ಇದು ಅನಿವಾರ್ಯವಾದ ಯೋಜನೆ. ಭಾರತ ಸ್ವಾತಂತ್ರ್ಯಗಳಿಸಿದ ನಂತರ ತನ್ನ ಅಭಿವೃದ್ಧಿಗಾಗಿ, ಆಧುನಿಕ ಉತ್ಪಾದನಾ ಕ್ರಮವನ್ನು ಅನುಸರಿಸಲು ನಿರ್ಧರಿಸಿದ್ದರಿಂದ, 'ಸಾಕ್ಷರತೆ' ಅದಕ್ಕೆ ಒಂದು ಮುಖ್ಯ ಅಜೆಂಡಾವಾಗಬೇಕಾಯ್ತು; ಈ ಕಾರಣವಾಗಿ ಪ್ರಾಥಮಿಕ ಶಿಕ್ಷಣದ ಹಕ್ಕು ಸಂವಿಧಾನದಲ್ಲಿ ಸ್ಥಾನ ಪಡೆಯಿತು. ಬಹುಶಃ, ಆಧುನಿಕ ಉತ್ಪಾದನೆಯ ಯೋಜನೆಗಳು ಬಿರುಸುಗೊಂಡಿದ್ದರೆ. 'ಸಾಕ್ಷರತೆ'ಯು ಮಟ್ಟವೂ ಬಿರುಸಿನಿಂದ ಏರುತ್ತಿತ್ತು. ಈ ಅರ್ಥದಲ್ಲಿ ಆಧುನಿಕ ಉತ್ಪಾದನೆ ಬೆಳೆಯಲು ಏನೆಲ್ಲ ಅಡೆತಡೆಗಳಿವೆಯೋ, ಅವು ಸಾಕ್ಷರತೆಯ ವೇಗವನ್ನು ಅಷ್ಟು ಮಟ್ಟಿಗೆ ಕುಂಠಿತಗೊಳಿಸಿವೆ. (ಈ ಸಂಬಂಧಗಳು ನಾನು ವಿವರಿಸಿರುವಷ್ಟು ಸರಳವೂ. ನೇರವೂ ಆಗಿಲ್ಲ ಎಂಬ ಅರಿವು ನನಗಿದೆ. ಚರ್ಚೆಗೆ ಬೇಕಾದಷ್ಟನ್ನು ಮಾತ್ರ ಸರಳೀಕರಿಸಿ ಕೊಡುತ್ತಿದ್ದೇನೆ. ಉದಾಹರಣೆಗೆ: ಅತ್ಯಂತ ಹೆಚ್ಚು ಅಕ್ಷರಸ್ಥರನ್ನು ಹೊಂದಿದ ಕೇರಳ, ಆಧುನಿಕ ಉತ್ಪಾದನೆಯ ಪ್ರಮುಖ ಕೇಂದ್ರವಲ್ಲ!) ಹಾಗೆಯೇ, ಆಧುನಿಕ ಉತ್ಪಾದನೆಯ ಕೇಂದ್ರ ಸ್ಥಾನದಲ್ಲಿ ಸರಕಾರವಿರಬೇಕೆಂಬ ನೀತಿಯನ್ನು ಒಪ್ಪಿಕೊಂಡಿದ್ದರಿಂದ, ಜನರನ್ನು ಸಾಕ್ಷರರನ್ನಾಗಿಸುವ ಹೊಣೆಯೂ ಸರ್ಕಾರದ್ದೇ ಆಗಿತ್ತು. ಈ ವಿಶಿಷ್ಟತೆಯನ್ನು ನಾವು ಗಮನಿಸಬೇಕು. ಆಧುನಿಕ ಉತ್ಪಾದನೆಯಲ್ಲಿ ಕೇಂದ್ರ ಸ್ಥಾನ ಪಡೆದುಕೊಂಡ ಪ್ರಭುತ್ವ, ಇದು ದೇಶದ ಪ್ರಗತಿಗೆ, ಜನರ ಒಳಿತಿಗೆ ಎಂದು ಸಾರಿದ ಕಾರಣ, ಎಲ್ಲ ವಿಭಾಗದ ಜನರಿಗೆ ಒಳಿತಾಗುವ ರೀತಿಯ ಸಾಕ್ಷರತೆಯನ್ನು ಪ್ರಸಾರ ಮಾಡುವ ಜವಾಬ್ದಾರಿ ಹೊತ್ತುಕೊಳ್ಳುವ ಅನಿವಾರ್ಯತೆಗೊಳಗಾಯ್ತು. ದೇಶದ ೪೭ ವರ್ಷದ ಜೀವನದಲ್ಲಿ ಆಧುನಿಕ ಉತ್ಪಾದನೆ ಮತ್ತು ಸಾಕ್ಷರತೆ, ಈ ಎರಡೂ ಯೋಜನೆಗಳಲ್ಲಿ, ಸಾಕಷ್ಟು ಲೋಪ-ದೋಷಗಳು, ವಿಕೃತಿಗಳು, ಸ್ವ ಹಿತಾಸಕ್ತಿಗಳು ತುಂಬಿಕೊಂಡಿದ್ದರೂ, ಒಂದು ಧನಾತ್ಮಕ ಅಂಶ ಇದರಲ್ಲಡಗಿದೆ: ಭಾರತದ ಎಲ್ಲ ಸ್ತರಗಳ ಜನರನ್ನು ಸರ್ಕಾರ ಪ್ರತಿನಿಧಿಸುತ್ತದೆ ಎಂಬುದು ಸಂವಿಧಾನದ ಉದ್ದೇಶವಾಗಿದ್ದರಿಂದ, ಆಧುನಿಕ ಯೋಜನೆಯಲ್ಲಿ ತಮಗೆ 'ಅವಕಾಶ' (Space) ಬೇಡುವ ಮತ್ತು ಸಾಧಿಸಿಕೊಳ್ಳುವಂತೆ ಕೆಳ

ಜಾತಿ ವರ್ಗಗಳು ಪ್ರೇರೇಪಿತವಾದವು. ಈ ರೀತಿಯ ಮಧ್ಯ ಪ್ರವೇಶಕ್ಕೆ ಅವಕಾಶ ಒದಗಿದ್ದರಿಂದಲೇ 'ಸಾಕ್ಷರತೆ'ಗೆ ಅದರ ಮೂಲಾರ್ಥಕ್ಕಿಂತ ವಿರುದ್ಧಾರ್ಥವೂ ಒದಗಿಬಂದಿದೆ. : ಆಧುನಿಕ ಉತ್ಪಾದನೆಯಲ್ಲಿ ಪಾಲ್ಗೊಳ್ಳುವ ಅಥವಾ ಬಳಸಿಕೊಳ್ಳಲ್ಪಡುವ ಕೆಳವರ್ಗ ಜಾತಿಯ ಜನರು, ಅದರ ಪ್ರತಿಫಲದಲ್ಲಿ ನ್ಯಾಯಬದ್ಧ ಪಾಲು ಸಿಗುತ್ತಿಲ್ಲವೆಂಬುದನ್ನು. ಅದಕ್ಕೆ ಕಾರಣವೇನೆಂಬುದನ್ನು ಅರ್ಥಮಾಡಿಕೊಳ್ಳುವ ಶಕ್ತಿ ಪಡೆಯುವುದು. [ಬ್ರೆಕ್ಟ್‌ನ 'ತಾಯಿ' ನಾಟಕದ ಹಾಡಿನ ಮೂಲ ಪ್ರೇರಕೆಯೇ ಇದು.] ಈ ಸಾಮಾಜಿಕ ಯೋಜನೆಯಲ್ಲಿ, ಈ ಎರಡನೆಯ ಅರ್ಥಕ್ಕೆ ಅವಕಾಶ, ಮಾನ್ಯತೆ ಒದಗಿರುವುದು ತನ್ನಿಂದ ತಾನೇ ಏನು ಅಲ್ಲ: ಅದು ಒದಗಿ ಬಂದಿರುವುದು ಆಧುನಿಕ ಉತ್ಪಾದನೆ ತಂದಿಟ್ಟ ಬಿಕ್ಕಟ್ಟಿನ ತೀವ್ರ ಪರಾಮರ್ಶೆಯಿಂದ ಮತ್ತು ತತ್ಫಲವಾಗಿ ರೂಪುಗೊಂಡ ಸಾಮಾಜಿಕ ಸಂಘರ್ಷಗಳಿಂದ. ಇದಕ್ಕೆ ೧೯ನೇ ಶತಮಾನದ ದ್ವಿತೀಯಾರ್ಧದಿಂದಲೇ ಪ್ರಾರಂಭವಾದ ಇತಿಹಾಸವಿದೆ. ಈ ನೂರಕ್ಕೂ ಮಿಕ್ಕಿ ವರ್ಷಗಳಲ್ಲಿ ಸಾಧಿಸಿರುವುದು. 'ಸಾಕ್ಷರತೆ'ಯ ಈ ಅರ್ಥಕ್ಕೆ 'ಅವಕಾಶ' ಮತ್ತು ಮಾನ್ಯತೆ. ಅಂದರೆ. ಈ ಅರ್ಥ ಫಲ ಕೊಡಬೇಕೆಂದರೆ. ಇದಕ್ಕೆ ದೊರೆತಿರುವ ಅವಕಾಶ ವಿಸ್ತರಿಸುತ್ತ ಹೋಗಬೇಕು: ಅದನ್ನು ಸಾಧಿಸಬಯಸುವ ಸಾಮಾಜಿಕ ಚಳುವಳಿಗೆ ಅವಕಾಶ ವಿಸ್ತರಿಸುತ್ತ ಹೋಗಬೇಕು. ಈ ಹಂತದಲ್ಲಿ ನಾವಿದ್ದೇವೆ. [ಇಲ್ಲಿ. ಆಧುನಿಕ ಉತ್ಪಾದನೆಯ ಕೇಂದ್ರದಲ್ಲಿ ಸರ್ಕಾರವಿರಬೇಕೆಂಬ ಅವಿಮರ್ಶಾತ್ಮಕ ಸಮರ್ಥನೆಯನ್ನು ನಾನು ಕೊಡಲು ಪ್ರಯತ್ನಿಸಿಲ್ಲ. ಎಲ್ಲ ವಿಕೃತಿಗಳ ನಡುವೆ ಅರಾಜಕವಲ್ಲದ ಉತ್ಪಾದನೆ. ವಿವಿಧ ವಿಭಾಗಗಳಿಗೆ ಕಲ್ಪಿಸಿಕೊಟ್ಟಿರುವ ಅವಕಾಶಗಳ ಕಡೆ ಸೂಚಿಸಿದ್ದೇನೆ. ಮತ್ತು ಇದು ಕೂಡ ಸ್ವಾತಂತ್ರ್ಯ ಹೋರಾಟಗಳ ಕಾಲದಿಂದಲೂ ಬೆಳೆದುಬಂದಿರುವ ವಿವಿಧ ಹಿತಾಸಕ್ತಿಗಳ ಸಂಘರ್ಷದ ಫಲವೆಂಬುದನ್ನೂ ಸೂಚಿಸಬಯಸುತ್ತೇನೆ.]

ಹೀಗೆ ನಾವು ಸಾಕ್ಷರತೆಯನ್ನು ಅರ್ಥೈಸಿಕೊಳ್ಳುವುದಾದರೆ. 'ಡಂಕೆಲ್ ಪ್ರಸ್ತಾವ' ದಿಂದ ಇದರ ಮೇಲಾಗುವ ಪರಿಣಾಮವೇನು ? ಸಾಕ್ಷರತೆ ಎಂಬುದೇ. ಅದರ ಎಲ್ಲ ಅರ್ಥಗಳಲ್ಲೂ ನಾಶವಾಗುತ್ತದೆಯೇ ?

ಈಗಾಗಲೇ, ಕೈಗಾರಿಗೆ, ಕೃಷಿ, ಔಷಧಿ ಕ್ಷೇತ್ರಕ್ಕೆ ಸಂಬಂಧಿಸಿ 'ಡಂಕೆಲ್' ವೀಕ್ಷಕರು, ವಿಮರ್ಶಕರು ಸಾಕ್ಷ್ಯಾಧಾರಗಳ ಸಹಿತ ವಾದಿಸಿರುವುದರ ಸಾರಾಂಶವೆಂದರೆ : ಜಗತ್ತಿನ ಶೇ. ೬೦ ರಷ್ಟು ಅಧುನಿಕ ಉತ್ಪಾದನೆ, ವಿತರಣೆ. ಜಗತ್ತಿನ ಪ್ರಮುಖ ಬಹು-ರಾಷ್ಟ್ರೀಯ ಕಂಪನಿಗಳ ಏಕಸ್ವಾಮ್ಯವಾಗುತ್ತದೆ. ಈ ಬ. ರಾ. ಕಂ. ಗಳು ನಿರ್ದಿಷ್ಟ ರಾಷ್ಟ್ರದ ಕಾನೂನುಕಟ್ಟಳೆಗಳಿಗೆ ಒಳಪಡಬೇಕಾಗಿಲ್ಲ ಅಥವ ಗೌರವಿಸಬೇಕಾಗಿಲ್ಲ;

ಈ ಬ. ರಾ. ಕಂ. ಗಳ ಹಿತಾಸಕ್ತಿ ಕಾಪಾಡುವ ಅಮೇರಿಕಾದಂತಹ ಸರ್ಕಾರಗಳ ಬೆಂಬಲದಿಂದ ನೂತನವಾಗಿ ಸ್ಥಾಪಿತವಾಗುವ 'ಜಾಗತಿಕ ವ್ಯಾಪಾರ ಸಂಸ್ಥೆ' (WTO) ಯಲ್ಲಿ ತಮ್ಮ ಲಾಭಕ್ಕನುಗುಣವಾದ ಕ್ರಮಗಳನ್ನು ಜಾರಿಗೊಳಿಸಿ ಕೊಳ್ಳಬಹುದಾಗಿದೆ. ಮತ್ತೆ, ಇಂತಹ ಏಕಸ್ವಾಮ್ಯದಿಂದ ತುಳಿತಕ್ಕೊಳಗಾಗುವರು ಎಲ್ಲ ದೇಶಗಳ ಕೆಳವರ್ಗದ ಬಡ ಜನತೆ.

ಈ ಊಹೆಗಳು (ಹೈಪೋಥಿಸಿಸ್) ನಿಜವಾಗುವುದಾದರೆ, ಭಾರತದಲ್ಲಿ ಕೂಡ, ಸರಕಾರದ ನೀತಿಯನ್ನು ಮೀರಿದ, ಮಾರುಕಟ್ಟೆ ಲಾಭವನ್ನು ಲಕ್ಷ್ಯದಲ್ಲಿಟ್ಟುಕೊಂಡ ಅತ್ಯಂತ ಅಯೋಜಿತ (Unplanned) ವಾದ ಆಧುನಿಕ ಉತ್ಪಾದನೆ ಮೇಲುಗೈ ಸಾಧಿಸುತ್ತದೆ. ಈ ರೀತಿ ಮಾರುಕಟ್ಟೆ ನಿರ್ಧಾರಿತ ಉತ್ಪಾದನೆಗೆ ಅನುಕೂಲಕರವಾಗುವಂತಹ 'ಸಾಕ್ಷರತೆ'ಯನ್ನ ವಾಸ್ತವದಲ್ಲಿ ಬೆಂಬಲಿಸಲಾಗುತ್ತದೆ. ಸರಿ, ಹಾಗಾದರೆ ಸಾಕ್ಷರತೆ ತನ್ನ ಮೂಲಾರ್ಥದಲ್ಲಿ (ಅಂದರೆ ಆಧುನಿಕ ಉತ್ಪಾದನೆ ವ್ಯವಹಾರದಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುವುದರ ಬಗೆಗಿನ ಜ್ಞಾನ ಮುಂದುವರೆಯುವುದಷ್ಟೇ ಅಲ್ಲ, ಇನ್ನೂ ಹೆಚ್ಚು ಸಮರ್ಥವಾಗಿ ಕಾರ್ಯ ನಿರ್ವ)ಹಿಸುತ್ತದೆ. ಇಂತಹ ಪರಿಸ್ಥಿತಿಯಿಂದ ಎರಡು ಅಪಾಯಗಳು [ಇದನ್ನು ಭಾರತದ ಕೆಳವರ್ಗ/ಜಾತಿ/ಬುಡಕಟ್ಟುಗಳ ಪಕ್ಷಕ್ಕೆ ಬದ್ಧ–ಪಾರ್ಟಿಸಾನ್–ಆಗಿಯೇ ಹೇಳುವುದು] ತಲೆದೋರುತ್ತವೆ :

೧) ಈ ಇಡೀ ಯೋಜನೆಯನ್ನು ನಿರ್ವಹಿಸುವುದು, ಈಗಿರುವಂತೆ, ಜನರಿಗೆ ಉತ್ತರಿಸಬೇಕಾದ ಸರ್ಕಾರವಲ್ಲದೆ, ಅಗೋಚರವಾದ, ನಿರ್ದಿಷ್ಟ ಕಾನೂನು-ಸಂವಿಧಾನಗಳ ಹಿಡಿತಕ್ಕೆ ಸಿಕ್ಕದ ಬ. ರಾ. ಕಂ. ಗಳ ಮಾರುಕಟ್ಟೆ ಸೂತ್ರಗಳಿರುವುದರಿಂದ, ಸಾಕ್ಷರತೆಯನ್ನು ವಿಭಿನ್ನಾರ್ಥದಲ್ಲಿ [ಆಧುನಿಕ ಉತ್ಪಾದನೆಯಲ್ಲಿ ತಮ್ಮ ಸ್ಥಾನ, ಶೋಷಣೆಯನ್ನು ಅರ್ಥಮಾಡಿಕೊಂಡು, ಸಮಾನತೆ ಬೇಡುವ ಅರಿವು] ಅರ್ಥೈಸಿ, ಆ ಅರ್ಥಕ್ಕೆ ಸಮಸ್ಥಾನ, ಮಾನ್ಯತೆ ಬೇಡುವ ವರ್ಗಗಳು ತಮ್ಮ ಅವಕಾಶ (space) ವನ್ನು ಸಂಪೂರ್ಣ ಕಳೆದುಕೊಳ್ಳುತ್ತವೆ. ಅವಕಾಶ ಕಲ್ಪಿಸಲು ಒತ್ತಾಯ ತರಬಹುದಾದ ಸಂವಿಧಾನಿಕ ವೇದಿಕೆಗಳು ನಿರುಪಯುಕ್ತವೂ, ತೋರಿಕೆಗಿರುವಂತಹವೂ ಆಗುವ ಎಲ್ಲ ಸಾಧ್ಯತೆಗಳು ಇವೆ. (ಭೂಪಾಲ್ ಅನಿಲ ದುರಂತದ ಸಂತ್ರಸ್ತರು ಅನುಭವಿಸುತ್ತಿರುವ ಬವಣೆಗಳನ್ನು ಇಲ್ಲಿ ನೆನೆಸಿಕೊಳ್ಳಿ). ಇದು, ನಿಖರವಾಗಿ, ಒಂದು ಕಾಲು ಶತಮಾನಕ್ಕಿಂತಲೂ ಹೆಚ್ಚು ಕಾಲಾವಧಿಯಲ್ಲಿ ಸಾಮಾಜಿಕ ಹೋರಾಟ ನಡೆಸಿಕೊಂಡು ಗಳಿಸಿದ ಅವಕಾಶವನ್ನು, ಹಠಾತ್ತನೆ ಕಳೆದುಕೊಳ್ಳುವುದಾಗಿದೆ.

೨) ಮೊದಲನೆಯದಾಗಿ (ತನ್ನ ಆಧಾರ್ಯದಲ್ಲಿ) ಧ್ವನಿಯಾದುದು. ಬ. ರಾ. ಕಂ. ಗಳ ಪಾರಮ್ಯ ಸ್ಥಾಪಿತ ವಾಗಿದೆ. ಅವುಗೆ ಅನುಕೂಲ ಕರವಾದ ಅವಕಾಶವನ್ನು [illegible] ಮಾಡುವ [illegible]. ರಚಿಸುವರೆ. ಆ ನಿರಂತ ನುವಿಕೆ, [illegible]. ರಾಜ್ಯವನ್ನು [illegible] ಆಗಿರುವೆ. ಆಗೋ- ಚಿರವು. ಒಳಗಾದ ಕಾರ್ಯ [illegible]. ತನ್ನ ಬಿಡಿಕಾಲ್ಲಿ ರುವ. ಧಾರಿ ಪ್ರಭಾವಶಾಲಿಯಾದ ಸಂಪರ್ಕ ಮಾಧ್ಯಮಗಳ ಮೂಲಕ, ತನ್ನ ಹಿತ ಕಾಪಾಡುವಂತವನ್ನು ನ್ಯಾಯಬದ್ಧಗೊಳಿಸುವ. ಎಲ್ಲರೂ ಅತ್ಯಂತ ಸಹಜ ವೆಂದೇ ಸ್ವೀಕರಿಸುವಂತೆ ಮಾಡುವ ಕ್ರಮ. ಈ ತಂತ್ರಗಳು ಎಷ್ಟರಮಟ್ಟಿಗೆ ಜನರನ್ನು ಆವರಿಸುತ್ತವೆಂದರೆ. ಜನ. ಸಾಮಾಜಿಕ ನ್ಯಾಯಕ್ಕಾಗಿ. ಶೋಷಣೆಯ ವಿರುದ್ಧ ಹೋರಾಟ ಮಾಡುವುದರಲ್ಲಿ ಸಂಪೂರ್ಣ ನಿರಾಸಕ್ತರಾಗುತ್ತಾರೆ ಮತ್ತು ಆ ರೀತಿಯ ಸಂಘರ್ಷ [illegible] ಅಸಾಧ್ಯವಾದ. ಅನಾಗರಿಕ ಕ್ರಿಯೆಯೆಂದೇ ನಂಬುತ್ತಾರೆ. (ಅಮೇರಿಕಾದಲ್ಲಿ. ಕ್ರಿಯೆಯನ್ನು ಸಹ. ಇಂತಹ ಮನೋಭಾವನೆ ಉತ್ಪಾದಿಸುವಲ್ಲಿ ಉಪಯೋಗಿಸಲಾಗುತ್ತದೆ ಎಂದು ನ್ಯೂಮ್ ಚೋಮ್‌ಸ್ಕಿ ವಾದಿಸು ತ್ತಾರೆ. ಅವರು. ಈ ಪ್ರಕ್ರಿಯೆಯನ್ನು 'ಅನುಮತಿಯ ತಯಾರಿಕೆ–Manufacturing consent ಎಂದೇ ಕರೆದಿದ್ದಾರೆ.).

ಈ ಉದಾಹರಣೆಯು ನಮಗೆ ನಾವು ವಾದಿಸಬಯಸಿದ್ದಿಷ್ಟು : ಆಧುನಿಕ ಶೋಷಕರ ಅಸ್ತ್ರಗಳು ಎಷ್ಟು ಸೂಕ್ಷ್ಮವಾದಂತವು. ಒರಟಾದ. ನಾಗ್ರ ಘಟಿಸುವ. ಅಸ್ತ್ರಗಳಿಗಿಂತ ಸಾವಿರ ಪಾಲು ಅಪಾಯಕಾರಿಯಾದಂತವು ಆಗಿವೆ. ನಾವು ಒಂದು ಮಂದದಲ್ಲಿ ಭಾವಿಸಿದಂತೆ. ಜನರಿಗೆ, ಇವರ ಶೋಷಣೆಯ ಫಲ ನೇರವಾಗಿ ಅನುಭವಕ್ಕೆ ಬಂದು. ಬಂದೇ ಬಿಡುತ್ತದೆ. ಶತ್ರುವಿನ ವಾತಾವರಣ ಮೂಡುವುದಿಲ್ಲ. ಹೀಗಾಗಿ ಸ್ಪಷ್ಟವಾಗಿ ಗುರುತಿಸಬಹುದಾದಂತಹ 'ಈಸ್ಟ್ ಇಂಡಿಯ ಕಂಪನಿ'ಯ ಫರಂಗಿಯವರ ರೂಪದಲ್ಲಿ ಬರುವುದಿಲ್ಲ. ನಿಯರ್‌ಸಾಹಿಬ್‌ಗಳು ಮಾಂಸ ಖಂಡಗಳುಳ್ಳ ಮೂರ್ತರೂಪದಲ್ಲಿ ನಮಗೆ ಸಿಗಲಾರರು. ಅದಕ್ಕಾಗಿ ಪ್ರಣಬ್ ಮುಖರ್ಜಿ ಪತ್ರಕರ್ತರಿಗೆ. 'ಡಂಕೆಲ್ ಪ್ರಸ್ತಾವ'ಕ್ಕೆ ಒಪ್ಪಿಗೆ ನೀಡಲು ಹೋಗುವಾಗ ಕೊಟ್ಟ ಸಂದರ್ಶನವೊಂದರಲ್ಲಿ ಹೇಳಿದರು. : "ನಾವು ಸಹಿ ಮಾಡಿದ ನಂತರವೂ, ಭಾರತದ ಹಳ್ಳಿಗಳಲ್ಲಿ ಬೇವಿನ ಕಡ್ಡಿಯಿಂದ ಹಲ್ಲುಜ್ಜುವುದಕ್ಕೆ ಯಾವ ಅಡ್ಡಿಯೂ ಇರುವುದಿಲ್ಲ ಎಂಬುದು ಜನಕ್ಕೆ ಗೊತ್ತಾದಾಗ, ವಿರೋಧಿಗಳ ಪ್ರಚಾರ ಎಷ್ಟು ದುರುದ್ದೇಶಪೂರಿತವಾದುದು ಎಂದು ಗೊತ್ತಾಗುತ್ತದೆ." ಬೇವಿನ ಕಡ್ಡಿಯ ಉದಾಹರಣೆಯನ್ನು ಉತ್ತುಂಗಕ್ಕೇರಿಸಿದ್ದು ನಾವೇ (ಅಂ-

ಪರ ಡಂಕೆಲ್ ವಿರೋಧಿಗಳು). ಮುಂದೊಮ್ಮೆ ಭಾರತದಲ್ಲಿ ಅದು ಒಂದು ವೈನಿಕ ಮಾತ್ರವಾಗುತ್ತವೆ ಎಂದೇ ಜನರನ್ನು ನಂಬಿಸುತ್ತೇವೆ. ಬ.ರಾ.ಕಂ.ಗಳಿಗೆ ಬೇರಿನ ಶಕ್ತಿಯನ್ನು ನಮ್ಮ ಬಾಯಿಯಿಂದಲೇ. ಬೇರಿನ ವಿಷದ ಗುಣವನ್ನು ಗುಪ್ತವಾಗಿ ಸಾಗಿಸುವ ತಂತ್ರ ಗೊತ್ತಿರುವಾಗ, ಶಕ್ತಿ ಕಿತ್ತು ರಂಪ ಮಾಡುವ ಮೂರ್ಖರಲ್ಲ. ಅದು ಪ್ರಣಾಬ್ ಮುಖರ್ಜಿಯವರಿಗೆ ಗೊತ್ತು: ಹಾಗಾಗಿ ನಾವು ಹೊರಡಿಸಿದ 'ಸಂಕೇತ' (Symbol)ನ್ನು, ಅದೇ ಅರ್ಥದಲ್ಲಿ ನಮ್ಮ ಮೇಲೆ ಹರಿಯಬಿಡಬಲ್ಲರು! ಅಂದರೆ, ಪ್ರಭಾವ ಸ್ವಯಂಚಾಲಿತವಾಗುತ್ತದ ಎಂದು ನಾವು ವಾದಿಸುವಷ್ಟು. ಡಂಕೆಲ್ ಪರ ವಾದಿಗಳಿಗೆ ಜನರ ಮಧ್ಯೆ ಸ್ಥಾನ ಕಲ್ಪಿಸಿಕೊಡುತ್ತೇವೆ. ಅದಕ್ಕೆ ಬದಲಾಗಿ 'ಡಂಕೆಲ್' ನಂತಹ ಬ. ರಾ. ಕಂ. ಗಳು ಹೇಗೆ ನಮ್ಮ ನಡುವೆ ಒಪ್ಪಿಗೆಯ ಸ್ಥಾನ ಗಳಿಸಿಕೊಳ್ಳುವ ಪ್ರಯತ್ನ ಮಾಡುತ್ತವೆ ಎಂದು ತೋರಿಸುವುದು, ಅಷ್ಟರ ಮಟ್ಟಿಗೆ ಅವರ ಅವಕಾಶವನ್ನು ಕಡಿಮೆ ಮಾಡುತ್ತವೆ. ಹೀಗೆ ವಾದಿಸುವಾಗ ನಮ್ಮ ರಾಜಕೀಯ ಹೋರಾಟಗಳಿಗೆ ಅರ್ಥವೇ ಇಲ್ಲ ಎಂದು ಹೇಳುವುದಿಲ್ಲ. (ಹಾಗೆ ಹೇಳುವುದು ಅತ್ಯಂತ ಮೂರ್ಖತನ ಎಂದೇ ನಾನು ಭಾವಿಸುತ್ತೇನೆ). ಆದರೆ ನಾನು ಮೇಲೆ ಹೇಳಿದ ರೀತಿಯಲ್ಲಿ 'ಡಂಕೆಲ್' ಜನರ ಮಧ್ಯೆ ಸ್ಥಾನ ಗಳಿಸುತ್ತ ಹೋದರೆ. ನಮ್ಮ ರಾಜಕೀಯ ಹೋರಾಟಗಳು ದುರ್ಬಲವಾಗಿ ಹೋಗುವ ಸಾಧ್ಯತೆಗಳಿವೆ. ಇದು ಜನರ ಮಧ್ಯೆ 'ಸ್ಥಾನ'ಕ್ಕಾಗಿ ನಡೆಯುವ ಕದನ, ಅದು ಎಂದೂ ತಂತಾನೆ ನಮಗೆ ಲಭ್ಯವಾಗದು. ನಾವು ಅದನ್ನು ಗಳಿಸಬೇಕು. 'ಡಂಕೆಲ್' ಸ್ಥಾಪಿಸುವ 'ಯಜಮಾನಿಕೆ' (ಹೆಗಮನಿ) ವಿರುದ್ಧ ನಾವು ಪ್ರತಿ ಶಕ್ತಿ (ಕೌಂಟರ್ ಹೆಗಮನಿ) ಯಾಗಬೇಕು. ಅದಕ್ಕೆ ನಾವು 'ಯಜಮಾನ' ರಷ್ಟೇ ಸೂಕ್ಷ್ಮ ಪ್ರಕಾರ ಶೈಲಿಗಳಲ್ಲಿ ಪಳಗಬೇಕು. ಅದು ಸುಲಭವಲ್ಲವೆಂದೂ ನನಗೆ ಗೊತ್ತು: ಅದಕ್ಕಾಗಿಯೇ ಚರ್ಚೆಯೊಂದನ್ನು ಪ್ರಾರಂಭಿಸುವ ಪ್ರಯತ್ನ ಮಾಡಿದ್ದೇನೆ.

ಟಿಪ್ಪಣಿ :

೧. ನಾನು ಇಲ್ಲಿ ಬಳಸಿಕೊಂಡಿರುವ ಸೈದ್ಧಾಂತಿಕ ಗ್ರಹಿಕೆಗಳೆಲ್ಲ 'ಪ್ರತಿಭಾವಂತ ಮಾರ್ಕ್ಸ್‌ವಾದಿ ಅಂಟೋನಿ ಗ್ರಾಮ್ಷಿಯದ್ದು. ಆತನ 'ರೂಲ್ ಬೈ ಕನ್ಸೆಂಟ್'. 'ಪ್ಯಾಸಿವ್ ರೆವಲ್ಯೂಷನ್'. 'ವಾರ್ ಆಫ್ ಪೊಸಿಷನ್ಸ್'. 'ಕೌಂಟರ್ ಹೆಗಮನಿ' ಇತ್ಯಾದಿ ಗ್ರಹಿಕೆಗಳನ್ನು ಧಾರಾಳವಾಗಿ ಉಪಯೋಗಿಸಿಕೊಂಡಿದ್ದೇನೆ.

೨. ಈ ಗ್ರಹಿಕೆಯನ್ನು, 'ಜರ್ನಲ್ ಆಫ್ ಆರ್ಟ್ಸ್ ಅಂಡ್ ಐಡಿಯಾಸ್'ನ (ಸಂಚಿಕೆ ೨೪–೨೫) ನಲ್ಲಿ ಪ್ರಕಟವಾಗಿರುವ, ವಿವೇಕ್ ಧಾರೇಶ್ವರ್ ಅವರ

ಲೇಖನದಿಂದ ಪಡೆದಿದ್ದೇನೆ. ಈ ಲೇಖನದ ಸೂಕ್ಷ್ಮಗಳನ್ನು ನನಗೆ ಅರ್ಥೈಸಿದ ವರು, ಜಿ. ರಾಜಶೇಖರ್. ಅವರಿಗೆ ನಾನು ಋಣಿಯಾಗಿದ್ದೇನೆ.

೩. 'ಪೋಸ್ಟ್ ಮಾಡರ್ನಿಸ್ಟ್' ವಾದವನ್ನು ಪ್ರಸ್ತಾಪಿಸುವಾಗ ಕನ್ನಡದಲ್ಲಿ ಬಂದ ಬರಹಗಳನ್ನಷ್ಟೇ ನಾನು ಗಮನಿಸಿದ್ದೇನೆ.

'ಆವೇಗ' ಸಂಸ್ಕೃತಿ ಮತ್ತು ಸಂಗೀತ

ಈಚಿನ ದಿನಗಳಲ್ಲಿ ಐ. ಎಂ. ಎಫ್., ವರ್ಲ್ಡ್ ಬ್ಯಾಂಕ್, ನವ ವಸಾಹತುಶಾಹಿ ಇತ್ಯಾದಿಗಳ ಬಗ್ಗೆ ಸಾಕಷ್ಟು ಟೀಕೆ, ವಿಮರ್ಶೆಗಳನ್ನು ಕೇಳಿದ್ದೇನೆ. ಈ ವಿಷಯಕ್ಕೂ ಸಂಗೀತಕ್ಕೂ ಏನಾದರೂ ಸಂಬಂಧವಿದೆಯೇ ಎಂದರೆ ಖಂಡಿತವಾಗಿ ಇದೆ. ಪ್ರತಿಯೊಂದು ಸಂಸ್ಕೃತಿಯೂ ಸ್ವತಂತ್ರವಾದ, ಅನನ್ಯವಾದ ಸಂಗೀತ ರೂಪವನ್ನು ಹೊಂದಿರುತ್ತದೆ. ಇದು ಎಂದೂ ಬದಲಾಗದೆ ಕೇವಲ ಶುದ್ಧ ರೂಪದಲ್ಲೇ ಉಳಿಯಬೇಕೆನ್ನುವುದು ಮೂರ್ಖತನ. ಮಡಿವಂತಿಕೆಯ ಮಾತಾಗುತ್ತದೆ. ಆದರೆ ಸಮಾಜಗಳು, ಸಂಸ್ಕೃತಿಗಳು ಹೇಗೆ ಬೆಳೆಯುತ್ತಾ ಪರಸ್ಪರ ಕೊಡುಕೊಳ್ಳುವಿಕೆಯ ಮೂಲಕ ಬಹಳಷ್ಟು ಮಟ್ಟಿಗೆ ಮಿಶ್ರ ಶ್ರೀಮಂತವಾಗುತ್ತಾ ಬಂದಿವೆಯೊ, ಸಂಗೀತ ರೂಪಗಳೂ ಹಾಗೆಯೇ ನಡೆದುಕೊಂಡು ಬಂದಿವೆ. ಯಾವೊಂದು ಸಂಸ್ಕೃತಿಯೂ ಒಂಟಿಯಾಗಿ ಉಳಿಯಲಾರದು. ನಮ್ಮ ಇತಿಹಾಸದಲ್ಲಿ ಈ ರೀತಿಯ ವಿನಿಮಯ ಅನಿವಾರ್ಯವಷ್ಟೆ ಅಲ್ಲ, ಅಪೇಕ್ಷಣೀಯವೂ ಹೌದು. ನಾವು ಈ ಹಿಂದೆ ಹಲವಾರು ಜೀವದಾಯಕ ಸಮ್ಮಿಲನಗಳನ್ನು ಕಂಡಿದ್ದೇವೆ. ಆದರೆ ಇಂದಿನ ಪರಿಸ್ಥಿತಿ ಮಾತ್ರ ತೀವ್ರ ಗಂಭೀರ ಹಾಗೂ ಅಪಾಯಕಾರಿ. ಹಿಂದೆ ಬದಲಾವಣೆಗಳು, ವಿನಿಮಯಗಳ ಪ್ರಕ್ರಿಯೆ ದೀರ್ಘ ಕಾಲಾವಧಿಯಲ್ಲಿ ನಡೆಯುತ್ತಿತ್ತು. ಬಹಳಷ್ಟು ಮಟ್ಟಿಗೆ ಆ ಪ್ರಕ್ರಿಯೆಯ ಅಂತಿಮ ಫಲ ಬೆಳೆಯುವ ಕ್ರಿಯೆಯು ಎಲ್ಲ ಎಡರು ತೊಡರುಗಳನ್ನು ಮೀರಿಕೊಂಡು ಒಂದು ಗಟ್ಟಿ ರೂಪವನ್ನು ಪಡೆದುಕೊಂಡಿರುತ್ತಿತ್ತು. ಆ ಪ್ರಕ್ರಿಯೆ ಸಂಮಿಲನವಾಗಿರುತ್ತಿತ್ತೇ ಹೊರತು ಸಮ್ಮೋಹನವಾಗೋ, ಆಕ್ರಮಣವಾಗೋ ಆಗುತ್ತಿರಲಿಲ್ಲ. ಹಿಂದೆ ಚೀನಾ ಮತ್ತು ಜಪಾನ್ ದೇಶಗಳ ಆಸ್ಥಾನಗಳಲ್ಲಿ ಭಾರತೀಯ ಸಂಗೀತಗಾರರು ಆಶ್ರಯ–ಪ್ರೋತ್ಸಾಹ ಪಡೆದುಕೊಂಡ ಉದಾಹರಣೆಗಳಿವೆ. ಪರರಾಜ್ಯ ದೇಶಗಳನ್ನು ಗೆದ್ದುಕೊಂಡ ರಾಜರು ಅಲ್ಲಿಯ ಕಪ್ಪಕಾಣಿಕೆಯ ಜೊತೆಗೆ ಅಲ್ಲಿಯ ಸಂಗೀತವನ್ನೂ ತಮ್ಮಲ್ಲಿಗೆ ತಂದುಕೊಳ್ಳುತ್ತಿದ್ದರು. ಆದರೆ ಸಂಗೀತ ಸಂಸ್ಕೃತಿಯ ವಿನಿಮಯವೆಲ್ಲ ಸಮಾನತೆಯ ಸ್ತರದಲ್ಲಿ ನಡೆಯುತ್ತಿತ್ತು. ಇಂದು ಆಧುನಿಕ ವಿಜ್ಞಾನ ಹಾಗೂ ತಂತ್ರಜ್ಞಾನದ ಕಾಲದಲ್ಲಿ ಮಾತ್ರ ಬದಲಾವಣೆಯಾಗಿದೆ. ಯಾವ ಸಮ್ಮಿಲನಕಾಲ ಪಕ್ವವಾದದ್ದು ಎಂದು ಹೇಳುವುದೇ ಅಸಾಧ್ಯವಾಗಿ ಹೋಗಿದೆ. ಎಲ್ಲ ವಿನಿಮಯ ಕ್ರಿಯೆಗಳೂ ಹೆಚ್ಚು ಹೆಚ್ಚು ತೀವ್ರಗತಿಯಲ್ಲಿ ನಡೆಯುತ್ತಿರುವಾಗ ಯಾವುದು ಜೀರ್ಣವಾಗಿದೆ, ಯಾವುದು ಇಲ್ಲ, ಯಾವುದು

ಯೋಗ್ಯವಾದದ್ದು, ಯಾವುದು ಅಲ್ಲ ಎಂಬ ಅತಿಮುಖ್ಯ ಪ್ರಶ್ನೆಗಳನ್ನು ಕೇಳಲೂ ಸಾಧ್ಯವಿಲ್ಲ. [illegible] ನಮ್ಮ [illegible] ವಿವೇಚನೆಗಳನ್ನು ಅಷ್ಟು ನಿಷ್ಕ್ರಿಯಗೊಳಿಸಿದ್ದು [illegible] ಸಂಬಂಧವಾದ ಸರ್ವ ರೀತಿಯ ಕೇಂದ್ರೀಕರಣ [illegible] ಮತ್ತು ಮತ್ತೆಲ್ಲೂ 'ಅಮೇರಿಕ ಸಂಸ್ಕೃತಿ'ಯನ್ನಾಗಿ ಮಾರ್ಪಾಡಿಸುತ್ತಿದೆ. ಇಂದು ವಿನಿಮಯ ನಡೆಯುತ್ತಿರುವುದು [illegible]. [illegible] 'ಅಮೇರಿಕ ಸಂಸ್ಕೃತಿ'ಯ ಆಕ್ರಮಣ. [illegible] ಸಮಾನ ಗೌರವದಿಂದಲ್ಲ. [illegible], ನಮ್ಮ ಮೇಲೆ ಇಂದು ಅಗಾಧ ಆಕ್ರಮಣ ನಡೆಸುತ್ತಿರುವ ಸ್ಟಾರ್ ಟಿ. ವಿ., [illegible] [illegible]. ವರ್ಲ್ಡ್-ಬ್ಯಾಂಕ್, ಬಹುರಾಷ್ಟ್ರೀಯ ಸಂಸ್ಥೆಗಳು, ಪಶ್ಚಿಮದ [illegible] ರಾಷ್ಟ್ರಗಳ ಒಂದು ಮುಖವಲ್ಲದೆ ಬೇರೇನೂ ಅಲ್ಲ.

ಆಧುನಿಕ ತಂತ್ರಜ್ಞಾನ ನಮಗೆ ಯಾವ ಮನುಷ್ಯ ಸ್ಪರ್ಶವೂ ಇಲ್ಲದ ಸಂಗೀತವನ್ನು 'ಉತ್ಪಾದಿಸ' ಬಲ್ಲ 'ಸಿಂಥೆಸೈಜರ್', [illegible] ಯಂತ್ರಗಳನ್ನು ಕೊಟ್ಟಿದೆ. [illegible]. ಇಲ್ಲಿ [illegible] ಜೋಶಿ, ಎಂ. ಎಸ್. ಸುಬ್ಬುಲಕ್ಷ್ಮಿ, [illegible] ಖಾನ್. ಅವರುಗಳ ನಿಜ ಅಸ್ತಿತ್ವದ [illegible] ವ್ಯಕ್ತಿ ವಿಶಿಷ್ಟ ಶೈಲಿಯಲ್ಲಿಯೇ ಸಂಗೀತವನ್ನು ಕೇಳಬಹುದು. [illegible] ಎಲ್ಲ ರೀತಿಯ ಸಂಗೀತಗಳನ್ನು ಕೇವಲ ಒಂದು ಬಟನ್ ಒತ್ತುವುದರ ಮೂಲಕ ಸ್ವಂತವಾಗಿಸಿಕೊಳ್ಳಬಹುದು. ನನ್ನ [illegible] ನನ್ನ ಮನೆಗೆ ಬಂದ. [illegible] ನನ್ನ ಸಿತಾರನ್ನು ಕಂಡು ಕುತೂಹಲ [illegible] ಕೇಳಿದ. '[illegible], ಇದನ್ನು ಸ್ಟಾರ್ಟ್ (ಸ್ವಿಚ್ ಆನ್) ಮಾಡುವುದು ಹೇಗೆ?' ಅವನ ಮಟ್ಟಿಗೆ ಸಿತಾರ್ ಕೂಡ ಪ್ಲಗ್ ಹಾಕಿ, ಬಟನ್ ಒತ್ತಿ, ಸ್ಟಾರ್ಟ್ ಮಾಡುವ ಒಂದು ವಸ್ತುವಾಗಿತ್ತು. ಯಂತ್ರಗಳು ನಮ್ಮ [illegible] ಬಿಟ್ಟಿವೆ. ಹಿಂದೆ [illegible] ಗಟ್ಟಲೆ ಸಮಯ ಪ್ರಯತ್ನಿಸಬೇಕಿತ್ತು. [illegible] ಸ್ವಿಚ್ಚನ್ನು ಒತ್ತಿಬಿಟ್ಟರೆ ಸಾಕು. [illegible] ಇಂಥದೇ ಒಂದು ಸಾಧನವನ್ನು ನೀವು ನೋಡಿರಬಹುದು. ಕೆಲವು ವಿಶಿಷ್ಟ ರೀತಿಯ ಪೇಂಟಿಂಗ್ ಪುಸ್ತಕಗಳಿರುತ್ತವೆ. ಚಿತ್ರಗಳಲ್ಲಿ ಪ್ರಖ್ಯಾತ ಕಲಾವಿದರ ಕೃತಿಗಳಿರುತ್ತವೆ. ಆದರೆ ಒಂದೂ ಕಾಣಿಸುವುದಿಲ್ಲ. ಎಲ್ಲ ಬಿಳಿಯ ಹಾಳೆ. ನೀವು ನೀರಲ್ಲದ್ದಿದ ಬ್ರಷ್

ಒಂದನ್ನು ಹಾಳೆಯ ಮೇಲೆ ಅಡಿಸಿದರೆ ಮಾತ್ರ ಅಲ್ಲಿ ಅಡಗಿದ್ದ ಬಣ್ಣಗಳು ತಾವೇ ತಾವಾಗಿ [illegible]. [illegible] '[illegible]' [illegible] ಅನುಭವಿಸ ಬಹುದು. ನಮ್ಮ ಕಾಲದ [illegible]. ಇಡೀ ವಿಶ್ವ ಒಂದಾಗು ಬೇಕು, ಒಂದೇ ಊರಾಗಬೇಕು. ವಿಶ್ವಕ್ಕೆಲ್ಲ ಒಂದೇ ಮಾದರಿಯ ಜೀವನ ಶೈಲಿ-ಸಂಸ್ಕೃತಿ-[illegible] ಮತ್ತು ಮಾನಗಳನ್ನು [illegible]ತ್ತೇವೆ. [illegible] ಪ್ರಕೃತಿಯ ಮತ್ತು ಮಾನವ ಸಂಸ್ಕೃತಿಯ [illegible]ರುವುದು [illegible]ಲ್ಲಿ. ಇಲ್ಲದಿದ್ದರೆ ಪ್ರಕೃತಿ ಇಷ್ಟು ಅಗಾಧ ವೈವಿಧ್ಯದ [illegible] ಪ್ರಾಣಿಗಳನ್ನು ಸೃಷ್ಟಿಸಬೇಕಾಗಿರಲಿಲ್ಲ. ಹಾಗೆಯೇ ಮನುಷ್ಯ ಇಷ್ಟು [illegible] ಸಂಸ್ಕೃತಿ-ಸಂಗೀತ-ರೂಪಗಳನ್ನು ಅನ್ವೇಷಿಸಿ ಕೊಳ್ಳಬೇಕಾಗಿರಲಿಲ್ಲ. [illegible] ಒಂದೆಡೆ ಹೇಳುತ್ತಾನೆ. "ಭಾಷೆಯು [illegible] ಅನುಭವಾಭಿವ್ಯಕ್ತಿಯ ಮಾಧ್ಯಮವೂ ಹೌದು'. ಇದು ಸಂಗೀತದ ಮಟ್ಟಿಗೂ ಸತ್ಯ. ವಸ್ತು ಮತ್ತು ರೂಪಗಳ ಅವಿನಾಭಾವ ಸಂಬಂಧವನ್ನು ಈ ಮಾತು ಮನಗಾಣಿಸಿಕೊಡುತ್ತದೆ. ನಾವು ಸ್ವತಂತ್ರ ವ್ಯಕ್ತಿತ್ವವನ್ನು [illegible] ನಮ್ಮ ಹತ್ತಿರದ ನಮ್ಮದೇ ಆದ [illegible]ವನ್ನು ಅದರ [illegible] ಅರ್ಥ ಮಾಡಿಕೊಳ್ಳುವುದು ಅತ್ಯಂತ [illegible]. ಭಾಷೆಯು [illegible] ಅನುಭವವನ್ನು, ಚಿಂತನೆ ಯನ್ನು ಪೀಳಿಗೆಯಿಂದ ಪೀಳಿಗೆಗೆ ಸಂವಹಿಸುವುದಷ್ಟೇ ಅಲ್ಲದೆ ಪ್ರತಿಯೊಬ್ಬನ ವೈಯಕ್ತಿಕ ಅನುಭವದ ಸ್ವರೂಪ ಮತ್ತು ಸತ್ವಗಳನ್ನು ನಿರ್ಧರಿಸುತ್ತಲೂ ಇರು ತ್ತದೆ. ಸಂಗೀತ ಕೂಡ ಭಾಷೆಯಂತೆಯೇ ಕೆಲಸ ಮಾಡುತ್ತದೆ. ನಾವು ಜೀವನ ವನ್ನು ಗ್ರಹಿಸುವ ರೀತಿಯನ್ನು ಪ್ರಭಾವಿಸುತ್ತಿರುತ್ತದೆ. ಪ್ರತಿಯೊಂದು ಸಂಗೀತ ರೂಪವೂ ಒಂದು ಕಿಟಕಿಯಿದ್ದಂತೆ. ಪ್ರತಿಯೊಂದು ಸಂಸ್ಕೃತಿಯೂ ತನ್ನ ವಿಶಿಷ್ಟ ಕಿಟಕಿಯ ಮೂಲಕ [illegible]ವನ್ನು ಕಾಣುತ್ತಿರುತ್ತದೆ. ಒಂದು ಕಿಟಕಿಯ ಮೂಲ. ಕಾಣುವ ನೋಟ [illegible] ಸೀಮಿತವಾದದ್ದು. ಅಷ್ಟೇ ಬೇರೆ ನೋಟಕ ನಾವು ಬೇರೆ ಬೇರೆ [illegible] ಹುಡುಕಬೇಕೆನ್ನುವುದು ಎಷ್ಟು ಮುಖ್ಯವಾದದ್ದೋ ನಮ್ಮ ಸ್ವಂತ ಕಿಟಕಿಯನ್ನು [illegible] ನಡೆಯಬೇಕೆನ್ನು ವುದೂ ಅಷ್ಟೇ ಮುಖ್ಯವಾದದ್ದು. ಬೇರೆ ಕಿಟಕಿಗಳ [illegible] ಭಾಗ್ಯವೂ ಇರಲಿ, ಆದರೆ ನಮ್ಮ ಕಿಟಕಿಯ [illegible] ನಮ್ಮ ದೃಷ್ಟಿಯ ಕೇಂದ್ರವಾಗಲಿ. ಆಗ ಮಾತ್ರ ವಿಭಿನ್ನ ಸಂಗೀತ ರೂಪಗಳ ನಡುವೆ ಸಮಾನತೆಯ ಸ್ತರದ ಮೇಲೆ ಸಮನ್ವಯ. [illegible] ಸಾಧ್ಯವಾಗುವುದು. ಆಗ ಮಾತ್ರ [illegible]. [illegible], [illegible]ಗಳನ್ನು [illegible] ನಮ್ಮ ಸ್ವಂತದ ಸಂಗೀತ-ಸಂಸ್ಕೃತಿ-ವ್ಯಕ್ತಿತ್ವ ಬೆಳೆಯಬಲ್ಲವು. ಪರ್ಯಾಯ ಸಂಸ್ಕೃತಿಯ ಹುಡುಕಾಟದಲ್ಲಿ ಸಂಗೀತ ತನ್ನ ಕೊಡುಗೆಯನ್ನು ನೀಡುವುದು ಈ ರೀತಿಯಲ್ಲಿ.

(ನೀನಾಸಂ-ಮಾತುಕತೆ)

ಜಿ. ಎನ್. ಮೋಹನ

ಡಂಕೆಲ್ ಮತ್ತು ಸ್ಯಾಟಲೈಟ್ ಟಿ ವಿ

ದಕ್ಷಿಣ ಆಫ್ರಿಕಾದಲ್ಲಿ ದೊಡ್ಡ ಬದಲಾವಣೆಗೆ ಬೆಳಕಿನ ಕಿರಣಗಳು ಮೂಡಿವೆ. ದಶಕಗಳ ಕಾಲ ವರ್ಣದ್ವೇಷದಿಂದ ಬಳಲಿದ ದಕ್ಷಿಣ ಆಫ್ರಿಕಾದಲ್ಲಿ ನೆಲ್ಸನ್ ಮಂಡೇಲಾ ನೇತೃತ್ವದ ಕಪ್ಪು ಜನರ ಸರ್ಕಾರ ಅಧಿಕಾರಕ್ಕೆ ಬಂದಿದೆ. ಈ ಹೊಸ ಸರ್ಕಾರದ ಆಗಮನದೊಂದಿಗೆ 'ರೇಡಿಯೋ ಪ್ರಿಟೋರಿಯಾ' ಕೂಡಾ ಇಲ್ಲಿ ತಲೆ ಎತ್ತಿದೆ. ನೆಲ್ಸನ್ ಮಂಡೇಲಾರ ಕಪ್ಪು ಜನರ ಆಶೋತ್ತರವನ್ನು ಧಿಕ್ಕರಿಸುವ ಈ ಬಾನುಲಿ ಆಫ್ರಿಕಾದ ಪ್ರತ್ಯೇಕ ಪ್ರಿಟೋರಿಯಾಗಾಗಿ ಒತ್ತಾಯಿಸಲಾರಂಭಿಸಿದೆ. ಕಪ್ಪು ಜನರ ಮೇಲೆ ಹಲ್ಲೆ ನಡೆಸುವಂತೆ ತನ್ನ ಪಾರ್ಟಿಗಳಲ್ಲಿ ಕರೆ ನೀಡುತ್ತಿದೆ. ನೆಲ್ಸನ್ ಮಂಡೇಲಾ ಸರ್ಕಾರ ಈ ರೇಡಿಯೋ ಕೇಂದ್ರವನ್ನು ಮುಚ್ಚಿಸಲಿದೆ ಎಂಬ ಪಾರ್ಟಿ ಪತ್ರಿಕೆ ಕಟ್ಟು ಬಲಪಂಥೀಯ ಬಿಳಿಯರು ರಸ್ತೆಗಳಲ್ಲಿ ಗನ್ ಹಿಡಿದು ನಿಲ್ಲುವಂತೆ ಪ್ರೇರೇಪಿಸಿದೆ. ಇದ್ದಕ್ಕಿದ್ದಂತೆ ತಲೆ ಎತ್ತಿರುವ ಈ ಬಾನುಲಿ 'ರೇಡಿಯೋ ಪ್ರಿಟೋರಿಯಾ'ದಲ್ಲಿ ಸದಾ ಮೊಳಗುವುದು ಅಮೇರಿಕನ್ ಗೀತೆ.

ಭಾರತಕ್ಕೆ ಸ್ಯಾಟಲೈಟ್ ಟಿವಿಯ ಆಗಮನವನ್ನು ಒಂದು 'ದಾಳಿ' ಎಂದು ನಿವೃತ್ತ ನ್ಯಾಯಮೂರ್ತಿ ವಿ. ಆರ್. ಕೃಷ್ಣಯ್ಯರ್ ಬಣ್ಣಿಸಿದ್ದಾರೆ. ಭಾರತದ ಮೇಲೆ ಸ್ಯಾಟಲೈಟ್ ಟಿವಿ ಬಾನಿನ ಆಕಾಶಮಾರ್ಗವಾಗಿ ದಾಳಿ ಆರಂಭವಾಗಿದ್ದರೆ, ವಿದೇಶಿ ಪತ್ರಿಕೆಗಳು ಭೂಮಾರ್ಗವಾಗಿ ದಾಳಿ ನಡೆಸಲು ಹೊಂಚು ಹಾಕಿವೆ ಎಂದು ಕೃಷ್ಣಯ್ಯರ್ ಎಚ್ಚರಿಕೆ ನೀಡಿದ್ದಾರೆ. ಸ್ಯಾಟಲೈಟ್ ಟಿವಿಯ ದಾಳಿಕೋರತನ ಅರ್ಥವಾಗಬೇಕಾದರೆ 'ರೇಡಿಯೋ ಪ್ರಿಟೋರಿಯಾ'ದ ಮುನ್ನುಡಿ ಅಗತ್ಯ.

'ಯುದ್ಧಗಳ ತಾಯಿ' ಎಂದು ಬಣ್ಣಿಸಲ್ಪಟ್ಟ ಅಮೇರಿಕಾ-ಇರಾಕ್ ಯುದ್ಧ ಕೇವಲ ಬಾಂಬ್‌ಗಳ ಮೂಲಕ ಮಾತ್ರವಲ್ಲ ಮಾಧ್ಯಮಗಳ ಮೂಲಕವೂ ಹೇಗೆ ಯುದ್ಧ ನಡೆಸಬಹುದು ಎಂಬ ಅಂಶವನ್ನು ಮನದಟ್ಟು ಮಾಡಿಕೊಟ್ಟಿತು. ಮಾಧ್ಯಮದ ಅಪಾರ ಶಕ್ತಿಯನ್ನು ವಿಶ್ವಕ್ಕೆ ಪರಿಚಯ ಮಾಡಿಕೊಟ್ಟ ಸಿ ಎನ್ ಎನ್ ಜಗತ್ತಿನ ಬಹು ಭಾಗಕ್ಕೆ ಸ್ಯಾಟಲೈಟ್ ಟಿವಿಯ ರುಚಿ ಹಿಡಿಸಿದೆ. 'ಯುದ್ಧಕ್ಕೆ ಕರಗ ಹೊತ್ತ ದಾನವರ ಹಾಡಿನ' ಟಿವಿಯು ಅಂಗಳಕ್ಕೆ ಹೆಜ್ಜೆ ಹಾಕಿದ್ದಾಳೆ.

ಮೀಡಿಯಾ ಮ್ಯಾಗ್ನೆಟ್, ಮೀಡಿಯಾ ಮುಘಲ್, ಮೀಡಿಯಾ ಜಾರ್ ಎಂದೇ ಬಣ್ಣಿಸಲ್ಪಟ್ಟ ಸ್ಟಾರ್ ಟಿವಿಯ ಮಾಲೀಕ ರೂಪರ್ಟ್ ಮುರ್ಡೋಕ್ ಅವರ ಪ್ರಕಾರ ಸ್ಯಾಟಲೈಟ್ ಟಿವಿಯ ಮುಖ್ಯ ಗುರಿ 'Infotainment' : ಜನರಿಗಿರುವ ಸುದ್ದಿ [information] ಮತ್ತು ಮನರಂಜನೆ (Entertainment) ಯ ದಾಹವನ್ನು ತಣಿಸುವುದು. ಈ Infotainment ನ ಸೂತ್ರವನ್ನು ಜಗತ್ತಿನ ಯಾವ ಸ್ಯಾಟಲೈಟ್ ಟಿವಿ ಸಂಸ್ಥೆಗಳೂ ತಳ್ಳಿಹಾಕಿಲ್ಲ.

ಆದರೆ ನಮ್ಮ ಆತಂಕ ಇರುವುದು ಮುರ್ಡೋಕ್, ಟೆಡ್ ಟರ್ನರ್, ಪಿಯರ್ಸನ್ ರವರ ಸ್ಟಾರ್, ಸಿಎನ್‌ಎನ್, ಬಿಬಿಸಿ, ಸ್ಕೈ ಟಿವಿ, ೨೦ ಥ್ ಸೆಂಚುರಿ ಫಾಕ್ಸ್, ಫಾಕ್ಸ್‌ಬ್ರಾಡ್‌ಕ್ಯಾಸ್ಟಿಂಗ್ ಕಂಪನಿ, ಬಿ ಸ್ಕೈ ಬಿ, ಪಾಕ್ ಏಷನ್‌ಗಳು ನೀಡುವ 'ಸುದ್ದಿ' ಮತ್ತು 'ಮನರಂಜನೆ' ಯಲ್ಲಿ.

'ಸುದ್ದಿ' ಮತ್ತು 'ಮನರಂಜನೆ' ಗೆ ಅಮೇರಿಕಾ ನೀಡಿರುವ ವ್ಯಾಖ್ಯಾನವನ್ನು ಅರ್ಥಮಾಡಿಕೊಂಡವರಿಗೆ ಸ್ಯಾಟಲೈಟ್ ಟಿವಿಗಳು ನಿರ್ವಹಿಸುವ ಕೆಲಸ ಸ್ಪಷ್ಟವಾಗಿ ಅರ್ಥವಾಗುತ್ತದೆ. ಸುದ್ದಿ ಇಂದು ಕೇವಲ ಸುದ್ದಿಯಾಗುಳಿದಿಲ್ಲ. ಮನರಂಜನೆ ಇಂದು ಕೇವಲ ಮನರಂಜನೆಯಾಗುಳಿದಿಲ್ಲ. ಬಾಂಬ್‌ಗಳಂತೆ, ಸ್ಟಾರ್‌ವಾರ್ ಒಂದು ಮಹತ್ವದ ರಾಜಕೀಯ ದಾಳವಾಗಿದೆ,

ಅಮೇರಿಕಾದ ಟ್ರೂಮನ್ ಅವರು 'ನಾವು ಬಿಲಿಯ ಡಾಲರ್‌ಗಟ್ಟಲೆ ಹಣವನ್ನು ಗನ್ ಬಾಂಬ್‌ಗಳ ಮೇಲೆ ಖರ್ಚು ಮಾಡಿದ್ದೇವೆ: ಹಾಗೆಯೇ ಪ್ರಚಾರದ ಮೇಲೆ ಕೂಡಾ' ಎನ್ನುತ್ತಾರೆ.

ಇತ್ತೀಚಿನ ದಶಕಗಳ ಮಹತ್ವದ ದಂಗೆ ಎಂದೇ ಮಾಧ್ಯಮಗಳಿಂದ ಬಣ್ಣಿಸಲ್ಪಟ್ಟ ತಿಯಾನನ್‌ಮನ್ ಚೌಕದಲ್ಲಿ ನಡೆದ ಚೀನಾ ವಿದ್ಯಾರ್ಥಿಗಳ ಮುಷ್ಕರದ ಸಂದರ್ಭದಲ್ಲಿ 'ಮುಷ್ಕರದಲ್ಲಿ ಭಾಗವಹಿಸಿ. ನಾಯಕರ ಭಾಷಣಗಳಿರುವ ಪತ್ರಿಕೆಗಳನ್ನು ಸುಟ್ಟುಹಾಕಿ' ಎಂದು ಬೀಜಿಂಗ್ ವಿಶ್ವವಿದ್ಯಾಲಯದ ಮುಂದೆ ಇದ್ದ ಭಿತ್ತಿಪತ್ರಗಳು ಕರೆ ನೀಡಿದವು. ವಿಶೇಷವೆಂದರೆ ಈ ಎಲ್ಲಾ ಭಿತ್ತಿಪತ್ರಗಳೂ 'ವಾಯ್ಸ್ ಆಫ್ ಅಮೇರಿಕಾ' ದ ವಾರ್ತೆಯನ್ನು ಇಲ್ಲಿ ಉದ್ಧರಿಸಿದ್ದವು.

'ಮುಕ್ತ ಮಾಧ್ಯಮಕ್ಕೆ ಮತ್ತೊಂದು ಹೆಸರು ಅಮೇರಿಕಾ' ಎಂಬ ಜಗತ್ತಿನ ಇತರ ಭಾಗಗಳಲ್ಲಿರುವ ಕಲ್ಪನೆಯನ್ನು ಅಮೇರಿಕಾದ ಖ್ಯಾತ ಮಾಧ್ಯಮ ತಜ್ಞ

ನೋಮ್ ಚೋಮ್‌ಸ್ಕಿ ಮತ್ತು ಇ. ಎಸ್. ಹರ್ಮನ್ ಅಲ್ಲಗಳೆಯುತ್ತಾರೆ. ಅಮೇರಿಕಾದ ಸಮೂಹ ಮಾಧ್ಯಮಗಳ ಕಾರ್ಯನಿರ್ವಹಣೆಯನ್ನು ಸುದೀರ್ಘ ಕಾಲ ವಿಶ್ಲೇಷಣೆ ನಡೆಸಿರುವ ಇವರು 'ಸರ್ಕಾರದ ವಿಶೇಷ ಹಿತಾಸಕ್ತಿಗಳಿಗೆ ಬೆಂಬಲ ದೊರಕಿಸಿಕೊಡುವುದೇ ಇಲ್ಲಿನ ಮಾಧ್ಯಮಗಳ ಆದ್ಯ ಕರ್ತವ್ಯ' ಎನ್ನುತ್ತಾರೆ. ಮಾಧ್ಯಮಗಳ ಮಾಲೀಕರು 'ನಮ್ಮದು ಪೂರ್ವಾಗ್ರಹವಿಲ್ಲದ, ವಸ್ತುನಿಷ್ಠ ದೃಷ್ಟಿಕೋನ' ಎಂದು ಹೇಳಿಕೊಳ್ಳುತ್ತಾರೆ. ಆದರೆ ಜನ ಏನು ಓದಬೇಕು, ನೋಡಬೇಕು, ಕೇಳಬೇಕು. ಚಿಂತಿಸಬೇಕು ಎಂಬುವನ್ನು ಇಂದು ಸರ್ಕಾರ ನಿರ್ಧರಿಸುತ್ತದೆ. ಮೇಲಿಂದ ಮೇಲೆ ಪ್ರಚಾರ ನಡೆಸುವುದರ ಮೂಲಕ ಸಾರ್ವಜನಿಕ ಅಭಿಪ್ರಾಯ ರೂಪಿಸುತ್ತದೆ ಎನ್ನುತ್ತಾರೆ.

ನೀವು ಎಷ್ಟು ಹೆಚ್ಚು ದೊಡ್ಡ ಸುಳ್ಳು ಹೇಳುತ್ತೀರೋ ಅದನ್ನು ಹೆಚ್ಚು ಜನ ನಂಬುವ ಸಾಧ್ಯತೆಯುಂಟು ಎನ್ನುತ್ತಾನೆ ಹಿಟ್ಲರನ ಪ್ರಚಾರ ಮಂತ್ರಿ ಗೋಬೆಲ್ಸ್. ಇದಕ್ಕೆ ಅಮೇರಿಕಾ ಮತ್ತೆ ಮತ್ತೆ ಹೇಳುವ ತಂತ್ರವನ್ನೂ ಸೇರಿಸಿದೆ. ಸುಳ್ಳನ್ನು ನೂರು ಬಾರಿ ಹೇಳಿದರೆ ಸತ್ಯವಾಗುವಂತೆ.

ಅಮೇರಿಕಾದ ಪ್ರತಿಯೊಂದು ಸಂಸ್ಥೆಯೂ ಮಾಧ್ಯಮಗಳನ್ನೂ. ಸುದ್ದಿ ಸಂಸ್ಥೆಗಳನ್ನೂ ತನ್ನ ಹಿಡಿತದಲ್ಲಿಟ್ಟುಕೊಂಡರೆ ಕೆಲಸ ಸಲೀಸಾದಂತೆ ಎಂದೇ ಭಾವಿಸಿವೆ. ನೋಮ್ ಚೋಮ್‌ಸ್ಕಿ, ಅಮೇರಿಕಾದ ರಕ್ಷಣಾ ಸಂಸ್ಥೆಗಳು ತಮ್ಮ ಹತೋಟಿಯಲ್ಲಿಟ್ಟುಕೊಂಡಿರುವ ಮಾಧ್ಯಮಗಳ ಬಗ್ಗೆ ಬೆಚ್ಚಿ ಬೀಳಿಸುವ ಅಂಕಿ ಅಂಶಗಳನ್ನು ನೀಡಿದ್ದಾರೆ. ಅಮೇರಿಕಾದ ವಾಯುದಳವೊಂದೇ ೧೪೦ ಪತ್ರಿಕೆಗಳನ್ನೂ, ೩೪ ರೇಡಿಯೋ, ೧೭ ಟಿವಿ ಸ್ಟೇಷನ್‌ಗಳನ್ನೂ, ಮಾಹಿತಿ ಹಂಚುವ ೪೫,೦೦೦ ಕೇಂದ್ರಗಳನ್ನೂ ಹೊಂದಿದ್ದರೆ ಪೆಂಟಗನ್ ೧,೨೦೩ ಪತ್ರಿಕೆಗಳನ್ನು ಪ್ರಕಟಿಸುತ್ತದೆ. ಅಮೇರಿಕಾದ ವಾರ್ತಾ ಸಂಸ್ಥೆ ಯುಎಸ್‌ಐಎಸ್ ಒಂದೇ ಇಂದು ೮೮೫ ಮಿಲಿಯ ಡಾಲರ್‌ಗಳನ್ನು ಕೇವಲ ಸುದ್ದಿ ಪ್ರಚಾರಕ್ಕೆ ಬಳಸುತ್ತಿದೆ.

'ನಮ್ಮ ವಿದೇಶಿ ನೀತಿಗಳಲ್ಲಿ ನಾವು ಸುದ್ದಿ ಸಂಸ್ಥೆಗಳನ್ನು ಆರಂಭಿಸುವಂತೆ ಹೇಳುತ್ತೇವೆ. ಮಿಲಿಟರೀಕರಣ ಹಾಗೂ ಆರ್ಥಿಕ ಸಹಾಯದಂತೆ ಪ್ರಚಾರ ನಮ್ಮ ಅವಿಭಾಜ್ಯ ಅಂಗ. ನಾವು ನಮ್ಮ ಮಾತು ಇಡೀ ಪ್ರಪಂಚದಲ್ಲಿ ಕೇಳುವಂತೆ ಮಾಡಬೇಕು' ಎನ್ನುತ್ತಾರೆ ಟ್ರೂಮನ್.

ತಮ್ಮ ಮಾತು ಇಡೀ ಜಗತ್ತು ಕೇಳುವಂತೆ ಮಾಡುವಲ್ಲಿ ಅಮೇರಿಕಾ ಯಶಸ್ವಿಯಾಗಿದೆ. ೧೯೭೬ ರ ಹೊತ್ತಿಗೆ ಇಡೀ ಪ್ರಪಂಚಕ್ಕೆ ವಿತರಣೆಯಾಗುವ ಸುದ್ದಿಗಳಲ್ಲಿ ಶೇ ೭೫ ಭಾಗ ಅಮೇರಿಕಾ ಮೂಲದ್ದಾಗಿತ್ತು. ಜಗತ್ತಿಗೆ ಸುದ್ದಿ ವಿತರಿಸುತ್ತಿರುವ ೧೦ ಮುಖ್ಯ ಸುದ್ದಿ ಸಂಸ್ಥೆಗಳ ೩೪ ಮಿಲಿಯ ಪದಗಳಷ್ಟು ಸುದ್ದಿಯಲ್ಲಿ ಅಮೇರಿಕಾದ ಪಾಲು ೨೮ ಮಿಲಿಯ ಪದ. ಅಮೇರಿಕಾದ ಅಸೋಸಿಯೇಟೆಡ್ ಪ್ರೆಸ್ (ಎಪಿ) ಒಂದೇ ವಿಶ್ವಾದ್ಯಂತ ೯,೫೦೦ ಪತ್ರಿಕೆಗಳಿಗೆ ಸುದ್ದಿ ಒದಗಿಸುತ್ತದೆ.

ಸುದ್ದಿಯ ಪ್ರವಾಹ ಸದಾ ಏಕ ಮುಖವಾಗಿರುವಂತೆ ಅಮೇರಿಕಾ ನೋಡಿಕೊಂಡಿದೆ. ೧೯೭೭ ರಲ್ಲಿ ಶ್ರೀಲಂಕಾದಲ್ಲಿ ನಡೆದ ಸಮೂಹ ಮಾಧ್ಯಮಗಳ ತಜ್ಞರ ಸಭೆಯ ಪ್ರಕಾರ ಎಪಿ ಪ್ರತಿ ದಿನ ೯೦ ಸಾವಿರ ಪದಗಳಷ್ಟು ಸುದ್ದಿ ವಿತರಿಸಿ ಅದಕ್ಕೆ ಪ್ರತಿಯಾಗಿ ಹಿಂದುಳಿದ ರಾಷ್ಟ್ರಗಳಿಂದ ಕೇವಲ ೧೯ ಸಾವಿರ ಪದಗಳನ್ನು ಪಡೆಯುತ್ತದೆ. ಈ ೧೯ ಸಾವಿರ ಪದಗಳಲ್ಲಿ ಶೇ. ೨೫ ರಷ್ಟೂ ಅಲ್ಲಿನ ಮಾಧ್ಯಮಗಳಲ್ಲಿ ಬಳಕೆಯಾಗುವುದಿಲ್ಲ ಎಂಬುದು ಗಮನಿಸಬೇಕಾದ ಅಂಶ.

ಈ ಸುದ್ದಿ ಸಂಸ್ಥೆಗಳ ಮತ್ತೊಂದು ಅಪಾಯಕಾರಿ ಮುಖವೆಂದರೆ ಅಮೇರಿಕಾದ ಗುಪ್ತಚಾರ ಸಂಸ್ಥೆಗಳೇ ಸುದ್ದಿ ಸಂಸ್ಥೆಗಳನ್ನು ನಡೆಸುವುದು. ಅಮೇರಿಕಾದ ಸಮೂಹ ಮಾಧ್ಯಮ ವಿಶ್ಲೇಷಣಾ ಸಂಸ್ಥೆಯ ವಿಲಿಯಂ ಸ್ಕಾಪ್ ಹೇಳುವಂತೆ ಸಿಐಎ ಇಂದು ಪ್ರಪಂಚದಾದ್ಯಂತ ನೂರಾರು ಪತ್ರಕರ್ತರನ್ನು ಹೊಂದಿದೆ. ಇದು ಅಮೇರಿಕಾದ ವಿದೇಶಿ ವರದಿಗಾರರ ಸಂಖ್ಯೆಗಿಂತ ಹೆಚ್ಚು. 'ಇಂಟರ್ ನ್ಯಾಷನಲ್' ಹೆರಾಲ್ಡ್ ಟ್ರಿಬ್ಯೂನ್' ಪ್ರಕಾರ ಸಿಐಎ ೮೦೦ ಸುದ್ದಿಸಂಸ್ಥೆಗಳನ್ನು ನಡೆಸುತ್ತಿದೆ,

ಖ್ಯಾತ ಪತ್ರಕರ್ತ ಕುಲದೀಪ ನಯ್ಯರ್ ಅವರು 'ಸರ್ಕಾರದ ಹೇಳಿಕೆ ಪ್ರಕಾರ ಅನೇಕ ಗೂಢಚಾರರು 'ಪತ್ರಕರ್ತರು' ಮತ್ತು 'ಸಂಶೋಧಕರು' ಎಂದು ಹೇಳಿಕೊಂಡು ಬರುತ್ತಾರೆ. ಸಂಶೋಧಕರ ಹೆಸರಿನಲ್ಲಿ ಬರುವವರನ್ನು ಸೂಕ್ಷ್ಮ ಪ್ರದೇಶಗಳಿಗೆ ಬಿಡದೆ ನಿಗ್ರಹಿಸಬಹುದಾದರೂ ಪತ್ರಕರ್ತರ ಹೆಸರಿನಲ್ಲಿ ಬರುವವರ ಬಗ್ಗೆ ಕ್ರಮ ಕೈಗೊಳ್ಳಲು ಸರ್ಕಾರ ಅಸಹಾಯಕವಾಗಿದೆ ಎನ್ನುತ್ತಾರೆ.

ಭಾರತದ ಮಾಧ್ಯಮಗಳು ಈ 'ಸುದ್ದಿ' ಎಷ್ಟು ಸರಿ ಎಂಬುದನ್ನು ಪರಿಶೀಲಿಸುವ ವ್ಯವಸ್ಥೆಯನ್ನೇ ಹೊಂದಿಲ್ಲ. ಅಮೇರಿಕಾ ಕಣ್ಣುಗಳ ಮೂಲಕ ವಿಶ್ವವನ್ನು ನೋಡಲು ಈ ಮಾಧ್ಯಮಗಳು ಪ್ರೇರೇಪಿಸುತ್ತಲೇ ಬಂದಿವೆ. ಚಾರ್ಲ್ಸ್ ಮತ್ತು

ಪಯಾಸಾರ ಮಾಡುವೆ. ೨೪ನೇ ಸಂಖ್ಯೆಯಲ್ಲಿ ಭಾರತದಲ್ಲಿ ಪ್ರತಿ ನಿಮಿಷಕ್ಕೆ, ಇಬ್ಬರು ಮಕ್ಕಳು ಸಾಯುತ್ತಿದ್ದಾರೆ ಎಂಬ ಯುನಿಸೆಫ್‌ನ ವರದಿ ಸುದ್ದಿಯಾಗದೇ ಹೋಗುವುದು ಈ ಕಾರಣಕ್ಕಾಗಿ. ನಮ್ಮ ಪತ್ರಿಕೆಗಳ ಪ್ರತೀ ನೂರು ಕಾಲಂ ಸೆಂ. ಮೀ. ಸುದ್ದಿಯಲ್ಲಿ ಒಂದು ಅಮೇರಿಕಾದ್ದು ಎಂಬುದು ಭಾರತದ ಮಾಧ್ಯಮ ಗಳ ಸರಿಯಾದ ಚಿತ್ರಣವನ್ನು ನೀಡುವುದು. ಮಾಧ್ಯಮಗಳ ಹಿಡಿತದಲ್ಲಿರುವ ಇರುವ ಇಲ್ಲಿನ ಪತ್ರಿಕೆಗಳು ಜಾಗ ಮತ್ತು ಅವಕಾಶವಾಗಿ 'ಜನಾದರಣೆ' ಪಕ್ಕವಾಗ ಮತ್ತೆ ಸುದ್ದಿ ಸಂಗ್ರಹಕ್ಕೆ ಹಣ ಹೂಡುವ ಕ್ರಮವನ್ನೇ ತೆಗೆದು ಕೊಳ್ಳುವುದಿಲ್ಲ. ದೂರದರ್ಶನದ 'ನ್ಯೂಸ್‌ವಾಚ್' ಪ್ರಕಾರ ಭಾರತದ ಪತ್ರಿಕೆ ಗಳು ಲಾಭದ ಶೇ. ೩ ರಷ್ಟನ್ನು ಸುದ್ದಿ ಸಂಗ್ರಹಕ್ಕಾಗಿ ಬಳಸುವುದಿಲ್ಲ.

ಅಮೇರಿಕಾ ಸುದ್ದಿಯಾಗ ಬೇಕಾದ ಕಾರಣ ಅತ್ಯಂತ ಭಿನ್ನ. ನಿಕರಾಗುವಾ, ಅಮೇರಿಕಾ ಬೆಂಬಲದ ಐಲ್‌ಸಾಲ್ವಡರ್ ಗ್ವಾಟಮಾಲಕ್ಕಿಂತ ಹೆಚ್ಚು ಪ್ರಜಾ ಪ್ರಭುತ್ವವನ್ನು ಹೊಂದಿದೆ. ನಿಕರಾಗುವಾದ ಸರ್ಕಾರ ತನ್ನ ಪ್ರಜೆಗಳನ್ನು ಐಲ್‌ಸಾಲ್ವಡರ್, ಗ್ವಾಟಮಾಲ ಸರ್ಕಾರಗಳಂತೆ ಕೊಲೆ ಮಾಡುವುದಿಲ್ಲ. ನಿಕರಾ- ಗುವಾ ಸಾಮಾಜಿಕ - ಆರ್ಥಿಕ ಸುಧಾರಣೆಗೆ ಸಾಕಷ್ಟು ಪ್ರಾಮುಖ್ಯತೆ ನೀಡಿದೆ ಎಂಬುದನ್ನು ಮಾಧ್ಯಮಗಳು ಮುಚ್ಚಿಡುವುದಕ್ಕೆ ಬಯಸುತ್ತದೆ ಎನ್ನುತ್ತಾರೆ ಚೋಮ್‌ಸ್ಕಿ.

ಈ ವಿದೇಶಿ ಸ್ಯಾಟಲೈಟ್ ಟಿವಿ ಭಾರತಕ್ಕೆ ಕಾಲಿಡುವ ಮುನ್ನವೇ ಇದ್ದ ಪರಿಸ್ಥಿತಿ. ಸ್ಯಾಟಲೈಟ್ ಟಿವಿಯ ಆಗಮನದಿಂದ ಸುದ್ದಿ, ಮನರಂಜನೆಯ ಚಿತ್ರಣ ಮತ್ತಷ್ಟು ಬದಲಾಗಿದೆ.

ಚೀನಾದಲ್ಲಿ ಕಳೆದ ವರ್ಷ ಮಾವೋತ್ಸೆ ತುಂಗರವರ ಜನ್ಮಶತಾಬ್ದಿ ಆಚರಿಸು ವಾಗಲೇ ಬಿಬಿಸಿ ಮಾವೋ ಹಲವು ಮಹಿಳೆಯರೊಂದಿಗೆ ಅಕ್ರಮ ಲೈಂಗಿಕ ಸಂಪರ್ಕ ಹೊಂದಿದ್ದರು ಎಂಬ ಮಾವೋ ಡಾಕ್ಯುಮೆಂಟರಿಯನ್ನು ಪ್ರಸಾರ ಮಾಡಿತು. ಚೀನಾ ಬಿಬಿಸಿ ವಿರುದ್ಧ ಪ್ರತಿಭಟನೆ ವ್ಯಕ್ತಪಡಿಸಿತಲ್ಲದೆ ಡಾಕ್ಯು- ಮೆಂಟರಿಯಲ್ಲಿ ಬಳಸಿದ್ದ ಚಿತ್ರಗಳು, ಸಂದರ್ಶನಗಳು ಹೇಗೆ ಒಂದಕ್ಕೊಂದು ಸಂಬಂಧವಿಲ್ಲದ್ದು ಎಂಬುದನ್ನು ಸಾಬೀತು ಪಡಿಸಿತು. ರಾಜಕೀಯ ಪ್ರೇರಿತ ಬಿಬಿಸಿ ಮಾಧ್ಯಮದ ನೀತಿ ಸಂಹಿತೆಯನ್ನು ಉಲ್ಲಂಘಿಸಿದೆ ಎಂದು ಖಂಡಿಸಿತು.

ಇದೇ ಫೆಬ್ರುವರಿಯಲ್ಲಿ ಭಾರತದ ಅಣು ವಿದ್ಯುತ್ ಕಾರ್ಯಕ್ರಮ ಕುರಿತು ಅಮೇರಿಕಾದ ಸಿಬಿಎಸ್ ಟಿವಿ ಡಾಕ್ಯುಮೆಂಟರಿಯನ್ನು ಪ್ರಸಾರ ಮಾಡಿತು. ಈ

ಕಾರ್ಯಕ್ರಮ ಉದ್ದೇಶಪೂರ್ವಕವಾಗಿಯೂ ತೀವ್ರ ರೀತಿಯಲ್ಲಿ ವಿಕೃತಗೊಳಿಸಲಾಗಿದೆ ಎಂದು ಪರಮಾಣು ಇಂಧನ ನಿಯಂತ್ರಣ ಮಂಡಳಿ (ಎಇಆರ್‌ಬಿ) ಆರೋಪಿಸಿದೆ. ಸಿಬಿಎಸ್ ಟಿವಿ ತಂತ್ರ ನನ್ನ ಸಂದರ್ಶನವನ್ನು ವಿಕೃತಗೊಳಿಸಿದ್ದಾರೆಂದು ಮಂಡಳಿ ಅಧ್ಯಕ್ಷ ಡಾ. ಎ. ಗೋಪಾಲಕೃಷ್ಣನ್ ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ.

ಇವು ಸ್ಯಾಟಿಲೈಟ್ ಟಿವಿ ನೀಡಬಹುದಾದ ಸ್ಯಾಂಪಲ್‌ಗಳು ಮಾತ್ರ. ಹುಟ್ಟಿನಿಂದ ಆಸ್ಟ್ರೇಲಿಯಾದವನಾದರೂ ನಂತರ ಆಯ್ಕೆಯಿಂದ ಅಮೇರಿಕಾದ ಪ್ರಜೆಯಾದ ಸ್ಟಾರ್ ಟಿವಿಯ ರೂಪರ್ಟ್ ಮುರ್ಡೋಕ್ 'ಅಮೇರಿಕಾ ನೀತಿ ನನ್ನ ನೀತಿ' ಎನ್ನುತ್ತಾರೆ. ಮುರ್ಡೋಕ್ ಬ್ರಿಟನ್ ಮತ್ತು ಆಸ್ಟ್ರೇಲಿಯಾದ ಸರ್ಕಾರಗಳನ್ನು ಅಲುಗಾಡಿಸಲು ಯಶಸ್ವಿಯಾಗಿದ್ದಾರೆ. ಆಸ್ಟ್ರೇಲಿಯಾ ಸರ್ಕಾರ ಚುನಾವಣೆ ಬಂದಾಗ ಸಂಪೂರ್ಣ ಮುರ್ಡೋಕ್‌ರಿಗೆ ಶರಣಾಗುತ್ತಿತ್ತಲ್ಲದೆ ಮುರ್ಡೋಕ್‌ರವರ ಮಾಧ್ಯಮ ದಾಹ ಹಿಂಗಿಸಲು ರಾಷ್ಟ್ರದ ಕಾನೂನು ಮೀರಿ ಸಹಾಯ ಮಾಡುತ್ತಿತ್ತು. ಬ್ರಿಟನ್ ರಾಜ ಪ್ರಭುತ್ವದ ವಿರುದ್ಧ ಭಾರೀ ಸಿಟ್ಟು ಹೊಂದಿದ್ದ ಮುರ್ಡೋಕ್ ಮಾರ್ಗರೆಟ್ ಥ್ಯಾಚರ್ ಬೆಂಬಲಕ್ಕೆ ನಿಂತು ರಾಜ ಪ್ರಭುತ್ವದಲ್ಲಿ ಸಾಕಷ್ಟು ಒಡಕು ಉಂಟು ಮಾಡಲು ಕಾರಣರಾದರು. ಇತ್ತೀಚೆಗೆ ಭಾರತಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ 'ಪ್ರಿನ್ಸ್ ಚಾರ್ಲ್ಸ್ ಮತ್ತು ಡಯಾನ ಸಂಬಂಧ ಮುರಿಯುವ ಎಲ್ಲಾ ದಾಖಲೆಗಳೂ ನನ್ನಲ್ಲಿದ್ದವು' ಎಂದು ತಿಳಿಸಿದ್ದರು.

ಮುರ್ಡೋಕ್‌ರವರ ಮಾಧ್ಯಮ ಸಾಮ್ರಾಜ್ಯವನ್ನು ತಿಳಿದರೆ ಮಾತ್ರ ಮೇಲಿನ ಮಾತುಗಳು ಅತಿಶಯೋಕ್ತಿ ಎನಿಸಲಾರವು. ಮೂರು ಖಂಡಗಳಲ್ಲಿ ೧೫೦ ಪತ್ರಿಕೆಗಳು. ಚಲನಚಿತ್ರವನ್ನು ಅಗಾಧ ಸಂಖ್ಯೆಯಲ್ಲಿ ತಯಾರಿಸುವ ೨೦ ಸೆಂಚುರಿ ಫಾಕ್ಸ್, ಫಾಕ್ಸ್ ಬ್ರಾಡ್‌ಕ್ಯಾಸ್ಟಿಂಗ್ ಕಂಪನಿ, ಬಿಸ್ಕೈಬಿ, ೫೦ ಕ್ಕೂ ಹೆಚ್ಚು ಟಿವಿ ಕಂಪನಿಗಳು, ಇಟಾಕ್ ನ್ಯೂಸ ಎಲೆಕ್ಟ್ರಾನಿಕ್ ಸೇವಾ ಸಂಸ್ಥೆ, ಟೈಮ್ಸ್ ನೆಟ್‌ವರ್ಕ್ ಸುದ್ದಿ ಸಂಸ್ಥೆ, ನ್ಯೂಸ್ ಪ್ರಿಂಟ್ ಮಿಲ್‌ಗಳು, ೧೪ ಮುದ್ರಣ ಕಂಪನಿಗಳು, ವಿಮಾನಯಾನ, ಸಾರಿಗೆ ಸಂಸ್ಥೆ, ಪುಸ್ತಕ ಪ್ರಕಾಶನ ಸಂಸ್ಥೆಗಳನ್ನು ಹೊಂದಿರುವ ಮುರ್ಡೋಕ್‌ಗೆ ಇಡೀ ಪ್ರಪಂಚದಲ್ಲಿ ಬಿತ್ತರವಾಗುವ ಸುದ್ದಿ ತನ್ನದಾಗಿರಬೇಕು ಎಂಬ ಹಂಬಲ. ಸ್ಟಾರ್ ಟಿವಿ ಈಗ ಪ್ರಸಾರ ಮಾಡುತ್ತಿರುವ ಬಿಬಿಸಿ ಸುದ್ದಿ ಚಾನಲ್ ಇನ್ನು ಒಂದು ವರ್ಷದಲ್ಲಿ ಎತ್ತಂಗಡಿಯಾಗಲಿದ್ದು ಇಲ್ಲಿ ಮುರ್ಡೋಕರದ್ದೇ ಸ್ಕೈ ನ್ಯೂಸ್ ಚಾನಲ್ ಪ್ರಸಾರ ಆರಂಭಿಸುತ್ತದೆ. ಮತ್ತೊಂದು ರೀತಿಯ ಸುದ್ದಿ ಲಭಿಸದಂತೆ ಮಾಡುವ ಮುರ್ಡೋಕ್ ಇಡೀ ಜಗತ್ತನ್ನು ತನ್ನ ಅಭಿಪ್ರಾಯಕ್ಕೆ ತಕ್ಕಂತೆ ರೂಪಿಸಬಲ್ಲ.

ಮನರಂಜನೆ ಇಂದು ಕೇವಲ ಮನರಂಜನೆಯಾಗಿ ಉಳಿದಿಲ್ಲ. ಮನರಂಜನೆಯ ಹೆಸರಿನಲ್ಲಿ 'ಮಾನಸಿಕ ಯುದ್ಧ'ವನ್ನೇ ನಡೆಸಲಾಗುತ್ತಿದೆ ಎಂದು ಮನಃಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾರೆ. ಸುದ್ದಿಯ ಮೂಲಕ ಹಂಚಲ್ಪಡುವ ಪೂರ್ವಾಗ್ರಹ ಮನರಂಜನೆಯ ಮೂಲಕವೂ ವಿತರಣೆಯಾಗುತ್ತದೆ. ನಾವು ನೋಡುವ ಸಿನೆಮಾ, ಕೇಳುವ ಸಂಗೀತ, ಓದುವ ಪುಸ್ತಕಗಳೂ ಈ ರಾಜಕೀಯದಿಂದ ಹೊರತಾಗಿಲ್ಲ.

ಅತ್ಯಂತ ಜನಪ್ರಿಯವಾದ ಜೇಮ್ಸ್‌ಬಾಂಡ್, ರ‍್ಯಾಂಬೋಗಳು ಸದಾ ಯುದ್ಧ ನಡೆಸುವುದು ಅಮೇರಿಕಾದ ವಿರೋಧಿ ರಾಷ್ಟ್ರಗಳಲ್ಲಿ. ಸೋವಿಯತ್ ಸೇನೆಯನ್ನು ಚಚ್ಚುವುದೆಂದರೆ ಇಬ್ಬರಿಗೂ ಅಪಾರ ಉತ್ಸಾಹ ಅಮೇರಿಕಾದಂತೆ. ಕಾಮಿಕ್ಸ್‌ಗಳ ಮೂಲಕವೂ ಎಳೆಯ ವಯಸ್ಸಿನಿಂದಲೇ ಮಕ್ಕಳ ಮಿದುಳನ್ನು ತೊಳೆಯುವ ಕೆಲಸ ಆರಂಭವಾಗುತ್ತದೆ. ಖ್ಯಾತ ಚಿತ್ರಕಾರ ಕೆಚಮ್ ಸೃಷ್ಟಿಸಿದ ಡೆನಿಸ್ ದಿ ಮೆನೇಸ್ ಸರಣಿ ಇದಕ್ಕೆ ಉದಾಹರಣೆ: ಬಿಳಿಯ ಬಣ್ಣದ ಡೆನಿಸ್ ತನ್ನ ಕಪ್ಪು ಗೆಳೆಯ ಜಾಕ್‌ಸನ್ ಜೊತೆ ಓಟದ ಸ್ಪರ್ಧೆಗಿಳಿದು ಸೋಲುತ್ತಾನೆ. ತಾನು ಸೋತದ್ದರಲ್ಲಿ ಏನೋ ಬಣ್ಣದ ಸಮಸ್ಯೆ ಇದೆ ಎಂದು ಹೇಳುತ್ತಾನೆ. ಈ ಕಾಮಿಕ್‌ಸ್ಟ್ರಿಪ್ ಅನೇಕ ದೇಶಗಳ ಕೋಪಕ್ಕೆ ತುತ್ತಾಯಿತು. ಫ್ಯಾಂಟಮ್ ಮಾಂಡ್ರೇಕರನ್ನು ೧೯೬೫ ರಲ್ಲಿಯೇ ಕಾಮಿಕ್ಸ್ ಕುರಿತ ಅಂತಾರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ 'ವಸಾಹತುಶಾಹಿಗಳ ಪ್ರತಿನಿಧಿಗಳು' ಎಂದು ಖಂಡಿಸಲಾಗಿತ್ತು. ಫ್ಲಾಷ್ ಗಾರ್ಡನ್ ನಾಟ್ಸಿ ಬುದ್ಧಿಯವ ಎಂದು ಜರೆದಿದ್ದರು. ಅಮೇರಿಕಾದ ಬಹುತೇಕ ಥ್ರಿಲರ್‌ಗಳೂ ಸಹಾ ಈ ರಾಜಕೀಯವನ್ನು ನಡೆಸುತ್ತಲೇ ಬಂದಿದೆ.

ದೂರದರ್ಶನ ಉಂಟುಮಾಡುವ ಪ್ರಭಾವಗಳ ಬಗ್ಗೆ ಸಾಕಷ್ಟು ಸಂಶೋಧನೆಗಳು ನಡೆದಿವೆ. ದೂರದರ್ಶನ ಕಾರ್ಯಕ್ರಮಗಳನ್ನು ವೀಕ್ಷಿಸಲು ಪತ್ರಿಕೆ ಓದುವಷ್ಟು ಶ್ರಮ ಬೇಕಿಲ್ಲ ಎಂಬುದು ದೂರದರ್ಶನ ಕಾಯಿಲೆ ವ್ಯಾಪಕವಾಗಿ ಹರಡಲು ಇರುವ ಮತ್ತೊಂದು ಕಾರಣ.

ಕೆನಡಾದ ಖ್ಯಾತ ಮನಶಾಸ್ತ್ರಜ್ಞ ಡಾ. ಟನ್ನಿಸ್ ಮ್ಯಾಕ್‌ಬೆತ್ ವಿಲಿಯಮ್ಸ್ ಕೆನಡಾದಲ್ಲಿ ನಡೆಸಿದ 'ನೋಟೆಲ್' ಪ್ರಯೋಗ ಟಿವಿಯ ಬಹುಮುಖ ಪ್ರಭಾವಗಳತ್ತ ಗಮನ ಸೆಳೆದಿದೆ. ಕೆನಡಾದಲ್ಲಿ ಟಿವಿ ಕಾರ್ಯಕ್ರಮ ವೀಕ್ಷಿಸದ ಗುಂಪು ಮತ್ತು ವೀಕ್ಷಿಸುವ ಗುಂಪಿನ ವಿಶ್ಲೇಷಣೆ ನಡಸಿದಾಗ ಟಿವಿ ನೋಡದ ಗುಂಪು

ಅತ್ಯಂತ ಕ್ರಿಯಾಶೀಲವಾಗಿದ್ದು, ಸಮಸ್ಯೆಗಳನ್ನು ಪರಿಪರಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದು, ಪ್ರತಿಭಾವಂತರಾಗಿದ್ದರು. ಎರಡು ವರ್ಷಗಳಕಾಲ ಈ ಗುಂಪು ಟಿವಿ ನೋಡಲು ಅನುವು ಮಾಡಿಕೊಟ್ಟ ನಂತರ ಮತ್ತೆ ವಿಶ್ಲೇಷಣೆ ನಡೆಸಿದಾಗ ಈ ಗುಂಪು ದೈಹಿಕವಾಗಿ, ಮಾತಿನಲ್ಲಿಯೂ ಸಿಡುಕುತನವನ್ನು ಮೈಗೂಡಿಸಿಕೊಂಡಿದ್ದರು. ಓದುವ ಪ್ರತಿಭೆ ಸಂಪೂರ್ಣವಾಗಿ ಮಂಕಾಗಿತ್ತು. ಡಾ. ವಿಲಿಯಮ್ಸ್ ಪ್ರಕಾರ ದೂರದರ್ಶನ ರೆಡಿಮೇಡ್ ಆಲೋಚನೆಗಳಿಗೆ ಈ ಜನಾಂಗವನ್ನು ಒಗ್ಗಿಸಿತ್ತು. ಒಂದೇ ರೀತಿಯ ವರ್ತನೆ, ಮಾನಸಿಕ ಶೂನ್ಯತೆ ಎರಡನ್ನೂ ಈ ಟಿವಿ ಕೊಡುಗೆಯಾಗಿ ನೀಡಿತ್ತು.

ಅಮೇರಿಕಾದ ಸಾಹಿತಿ ಮೇರಿವಿನ್ ಟಿವಿಯನ್ನು 'ಮಾದಕ ಲೋಕದ ಪೆಡ್ಲಾರಿ' ಎಂದೇ ಕರೆಯುತ್ತಾರೆ. ಮಾದಕ ದ್ರವ್ಯ ವ್ಯಸನಿಗಳು ಪಠಿಸುವ ಸೇವಿಸು–ಅನುಭವಿಸು–ಮರೆತುಬಿಡು ಸೂತ್ರವನ್ನೇ ಟಿವಿ ನೋಡುಗರೂ ಅನುಸರಿಸುತ್ತಾರೆ. ಟಿವಿ ನೋಡಲು ಆರಂಭಿಸುತ್ತಾರೆ, ಮರುಳಾಗುತ್ತಾರೆ, ಇಡೀ ಜಗತ್ತನ್ನು ಮರೆಯುತ್ತಾರೆ ಎನ್ನುತ್ತಾರೆ.

ಟಿವಿ ವೀಕ್ಷಣೆಯ ವಿರುದ್ಧ ವ್ಯಾಪಕ ಆಂದೋಲನವನ್ನೇ ಆರಂಭಿಸಿರುವ ಜೆರ್ರಿ ಮ್ಯಾಂಡರ್ ಸತತ ಟಿವಿ ವೀಕ್ಷಣೆ ಹಿಪ್ನಾಟಿಸಂ ಸ್ಥಿತಿಗೆ ನೋಡುಗನನ್ನು ಒಯ್ಯುತ್ತದೆ. ಪ್ರಮಾದೀನ ಸ್ಥಿತಿಯಲ್ಲಿರುವಾಗಲೇ ನೋಡುಗನ ಮನಸ್ಸಿನೊಳಗೆ ಸಂದೇಶಗಳನ್ನು ಮನರಂಜನೆಯ ಹೆಸರಿನಲ್ಲಿ ತುರುಕುತ್ತಾ ಹೋಗಲಾಗುತ್ತದೆ. ಬೆರಳೆಣಿಕೆಯ ಮಂದಿ ಹಲವರನ್ನು ಹತೋಟಿಗೆ ತೆಗೆದುಕೊಳ್ಳಲು ದಾರಿ ಮಾಡಿಕೊಡಲಾಗುತ್ತದೆ ಎನ್ನುತ್ತಾರೆ,

ಟಿವಿ ವೀಕ್ಷಣೆಯನ್ನು ಅಫೀಮಿನಂತೆ ಪರಿವರ್ತಿಸಿ ಭ್ರಮಾದೀನ ಸ್ಥಿತಿಗೆ ಜನರನ್ನು ದವಾನಿಸುವ ರಾಜಕೀಯದ ಬಗ್ಗೆ ಸಾಕಷ್ಟು ಬೆಳಕು ಬೀಳಬೇಕಾಗಿದೆ. ಸ್ಯಾಟಲೈಟ್ ಟಿವಿ ಚಾನಲ್‌ಗಳು ೨೪ ಗಂಟೆಯೂ ಹಲವಾರು ರೀತಿಯ ಕಾರ್ಯಕ್ರಮಗಳನ್ನು ಕೊಡುತ್ತಲೇ ಜನರು ನಾಲ್ಕು ಗೋಡೆಯೊಳಗೆ ಯಾರೋ ಒಬ್ಬಿಬ್ಬರು ತುರುಕುವ ವಿಚಾರದೊಳಗೆ ಬಂದಿಯಾಗುವಂತೆ ಮಾಡುತ್ತದೆ. ಎಲ್ಲಾ ವಿಶ್ವಕಪ್ ಫುಟ್‌ಬಾಲ್‌ಗಳನ್ನೂ, ಟೆನಿಸ್ ಪಂದ್ಯಗಳನ್ನೂ, ಕ್ರಿಕೆಟ್ ಆಟವನ್ನೂ ನೇರ ಪ್ರಸಾರ ಮಾಡುವಲ್ಲಿ ಹುದುಗಿರುವ ರಾಜಕೀಯವೂ ಇದೆ. ಕೊಲ್ಲಿ ಯುದ್ಧ ಫುಟ್‌ಬಾಲ್ ಫೈನಲ್ಸ್‌ನಂತಾಗುತ್ತದೆ.

ಮನಶಾಸ್ತ್ರಜ್ಞರು ಸುದ್ದಿಗಳಲ್ಲಿ ಅತ್ಯಂತ ಅಪಾಯಕಾರಿಯಾದದ್ದು **Black information** ಎನ್ನುತ್ತಾರೆ. ಸುದ್ದಿಯಾಗಲಿ, ಮನರಂಜನೆಯಾಗಲಿ ಅದರ

ಒಂದೆ ಒಂದು hidden Agenda ಇರುತ್ತದೆ. ನೋಡುಗರಿಗೆ ಗೊತ್ತಾಗದಂತೆ ಅವರಿಗೆ ತುಂಬಬೇಕಾದ (inject) ವಿಚಾರವನ್ನು ಸೀರಿಯಲ್‌ಗಳ ಮೂಲಕವಾಗಲೀ, ಕ್ರೀಡೆ ಮೂಲಕವಾಗಲೀ ಜಾಹೀರಾತಿನ ಮೂಲಕವಾಗಲೀ ಈ ಅಜೆಂಡಾವನ್ನು ತುರುಕುತ್ತಾ ಹೋಗಲಾಗುತ್ತದೆ. ಈ ಅಜೆಂಡಾ ಭಾಗವಾಗಿಯೇ ರ್‍ಯಾಂಬೋ ಜೇಮ್ಸ್ ಬಾಂಡ್‌ಗಳೂ ಕೆಲಸ ಮಾಡುತ್ತಾರೆ.

ಈ ಅಜೆಂಡಾದ ಬಗ್ಗೆಯೇ ಚೋಮ್‌ಸ್ಕಿ ಮೇಲಿಂದ ಮೇಲೆ ಎಚ್ಚರಿಕೆ ನೀಡುತ್ತಾರೆ. ಅದು ಅಂತಾರಾಷ್ಟ್ರೀಯ ಸಂಸ್ಥೆಯಿರಲಿ ಇಲ್ಲವೇ ತನಗೆ ಅಹಿತವಾದ ಒಂದು ಆಡಳಿತ ಪಕ್ಷವಿರಲಿ ಅದರ ವಿರುದ್ಧ ಈ ಎಲ್ಲಾ ಕಾರ್ಯಕ್ರಮಗಳನ್ನೂ ಬಳಸಲಾಗುತ್ತದೆ. 'ಇವೆಲ್ಲವೂ ದೇಶಕ್ಕಾಗಿ ನಮ್ಮ ಒಳಿತಿಗಾಗಿ' ಎಂಬ ಭಾವನೆಯನ್ನು ಬಿತ್ತಿ ತಮ್ಮ ಕೆಲಸವನ್ನು ಸಾಧಿಸಿಕೊಳ್ಳಲಾಗುತ್ತದೆ ಎನ್ನುತ್ತಾರೆ.

ಈ ಅಜೆಂಡಾವನ್ನು ಜನರಿಗೆ ಮುಟ್ಟಿಸಲೆಂದೇ 'ಪ್ರೈಮ್ ಟೈಮ್' ರಾಜಕೀಯವನ್ನೂ ನಡೆಸಲಾಗುತ್ತದೆ. ಅತ್ಯಂತ ಹೆಚ್ಚು ಜನರು ಟಿವಿ ವೀಕ್ಷಿಸುವ ವೇಳೆಯಲ್ಲಿ ಬೇಕೆಂದೇ ಈ ಅಜೆಂಡಾದ ಮೂಲಗಿನ ಸಂಸ್ಕೃತಿಯ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲಾಗುತ್ತದೆ. ಸ್ಯಾಟಲೈಟ್ ಟಿವಿಯ ಪರಿಭಾಷೆಯಲ್ಲಿ ಹೇಳುವ ಮಾತದು ಇದು 'Getting the eyeballs'.

ಸ್ಯಾಟಲೈಟ್ ಟಿವಿಗೆ ಬೇಕಾಗಿರುವುದು ಕೇವಲ ನೋಡುವ ಕಣ್ಣುಗಳು ಮಾತ್ರವೇ ಹೊರತು ವಿಚಾರಮಾಡುವ ಮಿದುಳಲ್ಲ.

ಸ್ಯಾಟಲೈಟ್ ಚಾನಲ್‌ಗಳಿಗೆ ಇರುವ ಮುಖ್ಯ ಭಯ ರಿಮೋಟ್ ಕಂಟ್ರೋಲ್‌ನದ್ದು. ಟಿವಿ ನೋಡುಗ ಒಂದು ಚಾನಲ್ ಸ್ವಲ್ಪ ಸಪ್ಪೆ ಅನಿಸಿದರೂ ಒಂದೇ ಒಂದು ಅದುಮುವಿಕೆಯಲ್ಲಿ ಚಾನಲ್‌ಗಳನ್ನೇ ಬದಲಿಸಿಬಿಡಬಲ್ಲ. ಎಲ್ಲಿ 'eyeball' ಗಳನ್ನು ಕಳೆದುಕೊಂಡು ಬಿಡುತ್ತೇವೋ ಎಂಬ ಭಯದಿಂದಾಗಿಯೇ ಪ್ರತಿಯೊಂದು ಚಾನಲ್ ಸದಾ ಮೇಲಿಂದ ಮೇಲೆ ಅದ್ಭುತ ಕಾರ್ಯಕ್ರಮಗಳನ್ನು ನೀಡಲು ಬಯಸುತ್ತದೆ.

ಈ ಅದ್ಭುತದ ಮ್ಯಾಜಿಕ್ ಸಾಧಿಸಲು ಸ್ಯಾಟಲೈಟ್ ಚಾನಲ್‌ಗಳಿಗೆ ಸಿಗುವುದು ಹಿಂಸೆ ಮತ್ತು ಸೆಕ್ಸ್ ಮಾತ್ರ.

ಮಕ್ಕಳಿಗಾಗಿಯೇ ತಯಾರಿಸುವ ಕಾರ್ಯಕ್ರಮದಲ್ಲಿ ಒಂದು ಗಂಟೆಯಲ್ಲಿ ೩೨ ಹಿಂಸೆಯ ದೃಶ್ಯಗಳನ್ನು ತೋರಿಸಲಾಗುತ್ತಿವೆ ಎಂದು ಆ್ಯನ್‌ಬರ್ಗ್ ಸಂವಹನ ಸಂಸ್ಥೆ ತಿಳಿಸಿದೆ. ೧೦ ಸ್ಯಾಟಲೈಟ್ ಚಾನಲ್‌ಗಳನ್ನು ಅಧ್ಯಯನ ಮಾಡಿದ ಮಾಧ್ಯಮ ಮತ್ತು ಸಾರ್ವಜನಿಕ ವ್ಯವಹಾರ ಕೇಂದ್ರ ೧೮ ಗಂಟೆಯಲ್ಲಿ ೧೮೦೦ ಹಿಂಸೆಯ ದೃಶ್ಯಗಳನ್ನು ತೋರಿಸಲಾಗುತ್ತಿವೆ ಎಂದಿದೆ. ಅಮೇರಿಕಾದ ಮಕ್ಕಳು ೧೬ ನೆ ವಯಸ್ಸಿಗೆ ಬರುವ ವೇಳೆಗೆ ೧೮ ಸಾವಿರ ಗಂಟೆಗಳನ್ನು ಟಿವಿ ಮುಂದೆ ಕಳೆಯುವರು. ಈ ೧೮ ಸಾವಿರ ಗಂಟೆಗಳಲ್ಲಿ ೩೩,೦೦೦ ಕೊಲೆಗಳನ್ನು ೨,೦೦,೦೦೦ ಹಿಂಸಾ ದೃಶ್ಯಗಳನ್ನು ಈ ಮಕ್ಕಳು ನೋಡಿರುತ್ತಾರೆ.

ಅಮೇರಿಕಾದಲ್ಲಿ ಮಕ್ಕಳು ಈಗ ಗನ್‌ಗಳನ್ನು ಕೈಗೆತ್ತಿಕೊಳ್ಳುತ್ತಿದ್ದಾರೆ. ಶಾಲೆಯಲ್ಲಿ ಮಕ್ಕಳ ನಡುವೆ ನಡೆಯುವ ಪುಟ್ಟ ಕಿತ್ತಾಟವೂ ಕೊಲೆಯಲ್ಲಿ ಪರ್ಯವಸಾನಗೊಳ್ಳುತ್ತಿವೆ.

ಈ ಹಿಂಸೆ ಸ್ಯಾಟಲೈಟ್ ಚಾನಲ್‌ಗಳ ಮೂಲಕ ಭಾರತವನ್ನೂ ಪ್ರವೇಶಿಸಿದೆ. ರೆಸಲಿಂಗ್ ಪಂದ್ಯಗಳ ಹೆಸರಲ್ಲಿ ವರ್ಲ್ಡ್ ರೆಸಲಿಂಗ್ ಫೆಡರೇಷನ್ (WWF ಈಗ WF) ಹಿಂಸೆಗೆ ಪ್ರಚೋದನೆ ನೀಡುತ್ತದೆ. ಕಾಮಿಕ್ಸ್ ಚಾನಲ್‌ಗಳಲ್ಲಿಯೂ ಅದೇ. ಸ್ಯಾಟಲೈಟ್ ಚಾನಲ್‌ಗಳು ಹಿಂಸೆಗೆ ನೀಡುವ ವಿಶೇಷವನ್ನು ಗಮನಿಸಿಯೇ ಮಕ್ಕಳನ್ನು ಆಕರ್ಷಿಸಲು ಮಕ್ಕಳ ಪುಸ್ತಕದ ಅಂಕಿತಗಳಲ್ಲಿ ರೆಸಲಿಂಗ್ ವ್ಯಕ್ತಿಗಳನ್ನು ನಿಲ್ಲಿಸುತ್ತಾರೆ.

ಸೆಕ್ಸ್, ಸ್ಯಾಟಲೈಟ ಟಿವಿಯ ಮತ್ತೊಂದು ಮುಖ್ಯಮಂತ್ರ, ಸ್ಯಾಟಲೈಟ್ ಟಿವಿ ಭಾರತಕ್ಕೆ ಪ್ರವೇಶಿಸಿದ ಕೆಲವೇ ವರ್ಷಗಳಲ್ಲಿ 'ಎಂಟಿವಿ ಪೀಳಿಗೆ' ಆರಂಭವಾಗಿವೆ. ವಿದೇಶಿ ಚಾನಲ್‌ಗಳಲ್ಲಿ ಸೆಕ್ಸ್‌ಗಾಗಿಯೇ ಪ್ರತ್ಯೇಕ ಚಾನಲ್‌ಗಳಿವೆ. ಅವೂ ನಮ್ಮ ಮನೆಯಂಗಳಕ್ಕಿಳಿಯುವ ಕಾಲ ದೂರವಿಲ್ಲ. ಎಂಟಿವಿಗೆ ಮಾರು-ಹೋದ ಯುವಜನಾಂಗವನ್ನು ಕಂಡು ಆತಂಕಿತರಾದ ತಂದೆತಾಯಂದಿರು ಈ ಚಾನಲ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. "ಈ ಅಸಮಾಧಾನವನ್ನು ನಾನು ಮನಗಂಡಿದ್ದು ಭಾರತೀಯ ಸಂಸ್ಕೃತಿಗೆ ಪರಕೀಯವಾದ ಈ ಕಾರ್ಯಕ್ರಮಕ್ಕೆ ತಡೆ ಹಾಕುತ್ತೇನೆ" ಎಂದು ಹೇಳಿಕೆ ಕೊಟ್ಟ ಮುರ್ಡೋಕ್ ಎಂಟಿವಿಗೆ ಕೊನೆ ಹಾಡಿದ್ದಂತೂ ನಿಜ. ಆ ಬದಲಿಗೆ ಈಗ ವಿಟಿವಿ ಚಾನಲ್ ಆರಂಭವಾಗಿದೆ. ಪೋಷಕರು ಮತ್ತೆ ಆತಂಕಕ್ಕೀಡಾಗಿದ್ದಾರೆ. ಹೆಸರು ಮಾತ್ರ ಬದಲಾಗಿದೆ ಎಂಬ ದೂರು ಅವರದ್ದು. ಭಾರತ ಸಂಸ್ಕೃತಿಯ ರಕ್ಷಕನಂತೆ ಹೇಳಿಕೆಕೊಟ್ಟ ಮುರ್ಡೋಕ್ ಎಂಟಿವಿ ನಿಲ್ಲಿಸಲು ಮುಂದಾದದ್ದು ಎಂಟಿವಿ ಕಬಳಿಸಲು. ಮುರ್ಡೋಕ್ ನಡೆಸಿದ

ತಂತ್ರ ಸಫಲವಾಗಲಿಲ್ಲ ಎಂಬ ಕಾರಣಕ್ಕೆ ಈ ವರ್ಷದ ಅಂತ್ಯದಲ್ಲಿ ಮತ್ತೊಂದು ಸ್ಯಾಟಲೈಟ್ ಮೂಲಕ ಎಂಟಿವಿಯೂ ಮತ್ತೆ ಭಾರತ ಪ್ರವೇಶಿಸಲಿದೆ.

ಪಾಪ್ ರಾಕ್ ರ್‍ಯಾಪ್ ಸಂಗೀತ ವಿದೇಶಗಳಲ್ಲಿನ ಕುಟುಂಬಗಳ ಸಾಮರಸ್ಯವನ್ನೇ ಕದಡಿದೆ ಎಂಬ ಆರೋಪ ಮನಶ್ಶಾಸ್ತ್ರಜ್ಞರದ್ದು. ಪಾಪ್ ರಾಕ್ ಲೈಂಗಿಕತೃಷಿಯನ್ನು ತಣಿಸುವ ಸಾಧನವಾಗಿ ಬದಲಾಗಿದ್ದು ಈ ಸಂಗೀತ ಆಲಿಸುವ ಕುಟುಂಬಗಳು ಲೈಂಗಿಕ ಅತೃಪ್ತಿಯಿಂದ ಒಡೆಯುತ್ತಿವೆ ಎನ್ನುತ್ತಾರೆ. ಈಗ ಭಾರತಕ್ಕೆ ಪಾಪ್‌ರಾಕ್ ರ್‍ಯಾಪ್‌ಗಳ ಮಹಾಪೂರವೇ ಸ್ಯಾಟಲೈಟ್ ಚಾನಲ್‌ಗಳ ಮೂಲಕ ಹರಿದು ಬರಲಿದೆ. ಕೇವಲ ಬೆರಳೆಣಿಕೆಯ ಲೈಂಗಿಕ ಪತ್ರಿಕೆಗಳು ಹೆಂಡತಿಯರನ್ನು ಬದಲಾಯಿಸುವ ಜಾಲವನ್ನು ಮಧ್ಯಮವರ್ಗದ ಮನೆಗಳಿಗೆ ತಂದಿದೆ ಎಂದು ಇತ್ತೀಚೆಗೆ 'ಇಂಡಿಯಾ-ಟುಡೇ' ಸಮೀಕ್ಷೆ ತಿಳಿಸಿದೆ. ಈ ಚಾನಲ್ ಸಂಗೀತಗಳು ಏನು ಮಾಡಲು ಸಾಧ್ಯ ಎಂಬುದರತ್ತ ಇದು ಬೊಟ್ಟುಮಾಡುತ್ತದೆ.

"ವಿದೇಶಿ ಸ್ಯಾಟಲೈಟ್ ಸಂಸ್ಥೆಗಳು ಈಗ ನಮ್ಮೆಲ್ಲರ ನಡುಮನೆಯನ್ನು ಆಕ್ರಮಿಸಿಕೊಂಡಿವೆ. ಸ್ಥಳೀಯ ಸಂಸ್ಕೃತಿ, ಮನಸ್ಸು ನಾಶಮಾಡುವ ಶಕ್ತಿ ಇವುಗಳಿಗಿವೆ. ಇದೊಂದು ಇನ್ನೊಂದು ಬಗೆಯ ಕೆಟ್ಟ ರೀತಿಯ ಆಳ್ವಿಕೆಯಾಗಿ ಪರಿಣಮಿಸುತ್ತದೆ" ಎನ್ನುತ್ತಾರೆ ಯು. ಆರ್. ಅನಂತಮೂರ್ತಿ. ಆಘಾತಕಾರಿ-ಯಾದ ಸಂಗತಿಗಳು ದೃಶ್ಯ ಮಾಧ್ಯಮದಲ್ಲಿ ಆಕರ್ಷಕ ಮತ್ತು ರಂಜಕವಾಗಿ ಪರಿಣಮಿಸುವ ಅಪಾಯವಿದೆ ಎನ್ನುತ್ತಾರೆ.

ಸ್ಯಾಟಲೈಟ್ ಟಿವಿ ಒಂದು ಪ್ರಗತಿಪರ ಚಿತ್ರ ತೋರಿಸುತ್ತಲೇ ಅದರ ಮಧ್ಯೆ ಆ ಆಶಯಕ್ಕೆ ಅತ್ಯಂತ ವಿರೋಧವಾದ ಜಾಹಿರಾತುಗಳನ್ನು ಪ್ರದರ್ಶಿಸುತ್ತಾ ಪರಿಣಾಮವನ್ನು ನಿರ್ವೀರ್ಯಗೊಳಿಸುತ್ತವೆ ಎಂಬ ಅಂಶವನ್ನು ಅನಂತಮೂರ್ತಿ ಮಂಡಿಸುತ್ತಾರೆ.

ಒಂದು ಸುದ್ದಿ. ಒಂದು ಧಾರಾವಾಹಿಯ ನಡುವೆ ಜಾಹಿರಾತುಗಳನ್ನು ಪ್ರದರ್ಶಿಸುವ ಹೊಸ 'ಶೈಲಿ'ಯೊಂದು ಈಗ ಆರಂಭವಾಗಿದೆ. ಈ ಶೈಲಿಯನ್ನು ಮನಶ್ಶಾಸ್ತ್ರಜ್ಞರು ತಳ್ಳಿ ಹಾಕುತ್ತಾರೆ. ಇಡೀ ಒಂದು ಕಾರ್ಯಕ್ರಮವನ್ನು ನೋಡುಗ ಬಿಡಿಬಿಡಿಯಾಗಿ ಆಯ್ದುಕೊಂಡು ಮನಸ್ಸಿನಲ್ಲಿ ಅದಕ್ಕೆ ಒಂದು ರೂಪು ನೀಡುತ್ತಾನೆ. ಆದರೆ ಅದೇ ಕಾರ್ಯಕ್ರಮವನ್ನು ಬಿಡಿಬಿಡಿಯಾಗಿ ನೀಡಿದರೆ ಅದು ಪ್ರತಿಕೂಲ ಪರಿಣಾಮ ಉಂಟುಮಾಡುತ್ತದೆ ಎನ್ನುತ್ತಾರೆ.

ಸ್ಯಾಟಲೈಟ್ ಟಿವಿ ಸಾಹಿತ್ಯ, ಸಂಗೀತವನ್ನು ಮಾತ್ರವಲ್ಲ ಭಾಷೆಯನ್ನೂ ಬದಲಿಸುವ ಕೆಲಸ ಮಾಡುತ್ತದೆ. ಆಕ್ಸ್‌ಫರ್ಡ್ ಇಂಗ್ಲಿಷ ಸ್ಥಾನದಲ್ಲಿ ಅಮೇರಿಕನ್ ಇಂಗ್ಲಿಷ್ ನೆಲೆಯೂರುತ್ತಿದೆ. 'ಇದು ಏಡ್ಸ್ ನಂತರದ ಮಹಾ ಕಾಯಿಲೆ' ಎಂದು ಭಾಷಾತಜ್ಞರು ಬಣ್ಣಿಸಿದ್ದಾರೆ. ಇಡೀ ಇಂಗ್ಲಿಷ್ ಭಾಷೆಯಿಂದ 'ಟಿ' ಮಾಯವಾಗುತ್ತಿದೆ. ಟಿವಿ ಯುವಜನರ ಮನಸ್ಸು ಕಲಕುವ ಬಗೆಯ ಬಗ್ಗೆ ಭಾಷಾತಜ್ಞರು ಆತಂಕ ವ್ಯಕ್ತಪಡಿಸುತ್ತಾರೆ. ಅಮೇರಿಕಾ ತನ್ನ ಶೈಲಿಯನ್ನು ಹೇಗೆ ಒಂದೇ ಒಂದು ಚಾನೆಲ್ ಮುಖಾಂತರ ಜಗತ್ತಿನ ಮೇಲೆ ಹೇರಲು ಸಾಧ್ಯ ಎಂಬುದಕ್ಕೆ ಇದು ಒಳ್ಳೆಯ ಉದಾಹರಣೆ.

ಇಂದು ಆಕಾಶದಲ್ಲಿ ಈ ಎಲ್ಲ ಚಾನೆಲ್‌ಗಳನ್ನು ನಮ್ಮತ್ತ ತೂರುವ ಹಲವಾರು ಉಪಗ್ರಹಗಳು ಮನೆ ಮಾಡಿವೆ. ಇನ್ನು ಕೆಲವೇ ವರ್ಷಗಳಲ್ಲಿ ಈ ಉಪಗ್ರಹಗಳ ಸಂಖ್ಯೆ ಗಣನೀಯವಾಗಿ ಹೆಚ್ಚಲಿವೆ. ಉಪಗ್ರಹಗಳ ಸಂಖ್ಯೆ ಹೆಚ್ಚಾಯಿತು ಎಂದರೆ ದಾಳಿ ಮಾಡುವ ಚಾನೆಲ್‌ಗಳ ಸಂಖ್ಯೆ ಹೆಚ್ಚಿತು ಎಂದೇ ಅರ್ಥ.

ಒಂದು ದೇಶದ ಉಪಗ್ರಹಗಳು ಮತ್ತೊಂದು ದೇಶದ ಮೇಲೆ ಹದ್ದಿನ ಕಣ್ಣಿಡಲು ಸಾಧ್ಯ. ಬೇಹುಗಾರಿಕೆ ನಡೆಸಲು ಉಪಗ್ರಹಗಳು ತಮ್ಮ ಶತ್ರು ರಾಷ್ಟ್ರದ ಚಿತ್ರಗಳನ್ನು ತೆಗೆದು ರವಾನಿಸಬಲ್ಲವು. ಕಾರಿನ ನಂಬರ ಪ್ಲೇಟ್ ಸಹ ನಿಖರವಾಗಿ ಮೂಡಬಲ್ಲಂತೆ ಚಿತ್ರ ತೆಗೆಯುವ ಸಾಮರ್ಥ್ಯ ಈ ಉಪಗ್ರಹಗಳಿಗಿದೆ. ಈ ಸಾಮರ್ಥ್ಯವೇ 'ಉಪಗ್ರಹ ರಾಜಕೀಯ'ಕ್ಕೆ ಮೊದಲಿನಿಂದಲೂ ದಾರಿ ಮಾಡಿದೆ. ಸಂಶೋಧಕರ ಹೆಸರಿನಲ್ಲಿ ಇತರ ರಾಷ್ಟ್ರಗಳಲ್ಲಿ ಗೂಢಚಾರಿಕೆ ನಡೆಸುವಂತೆಯೇ ಈ ಉಪಗ್ರಹಗಳು ಅಭಿವೃದ್ಧಿಯ ಹೆಸರಿನಲ್ಲಿ ಬೇಹುಗಾರಿಕೆ ನಡೆಸಲು ಸಾಧ್ಯ. ಸ್ಯಾಟಲೈಟ್ ಚಾನೆಲ್‌ಗಳಿಗಾಗಿ ಎಂಬ ನೆಪದಲ್ಲಿ ಸಮರ್ಥ ಚಿತ್ರವನ್ನು ಒದಗಿಸುವ ಸಾಧ್ಯತೆ ಇದೆ. ಇಂದು ಆಕಾಶದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸುಮಾರು ೩೦೦ ಉಪಗ್ರಹಗಳ ಪೈಕಿ ೧೮೦ ಅಮೇರಿಕಾದ್ದಾದರೆ ಉಳಿದ ೧೨೦ ಇತರ ಎಲ್ಲ ರಾಷ್ಟ್ರಗಳದ್ದು.

ಮುರ್ಡೋಕ್ ಭಾರತ ಪ್ರವೇಶಿಸುತ್ತಿರುವ ರೀತಿ ಗಾಬರಿ ಹುಟ್ಟಿಸುತ್ತದೆ. ಡೇರೆಯೊಳಗೆ ಮುಖ ತೂರಿಸಿದ ಒಂಟೆಯ ಕಥೆಯಂತೆ ಮುರ್ಡೋಕ್ ಸಹ ಭಾರತವನ್ನು ಆಕ್ರಮಿಸುವ ಯೋಜನೆಯನ್ನು ಕ್ರಮಬದ್ಧವಾಗಿ ರೂಪಿಸಿದ್ದಾರೆ. ಇತ್ತೀಚೆಗೆ ಮುರ್ಡೋಕ್ ಭಾರತಕ್ಕೆ ಭೇಟಿ ನೀಡಿದಾಗ ರಾಜಕೀಯ ನಾಯಕರು ಮತ್ತು ಕಾರ್ಯಕ್ರಮ ನಿರ್ಮಾಣ ಸಂಸ್ಥೆಗಳ ಭೇಟಿಗಿಂತಲೂ ಹೆಚ್ಚು ಆದ್ಯತೆಯನ್ನು ಕೇಬಲ್ ಟಿ.ವಿ. ಆಪರೇಟರ್‌ಗಳಿಗೆ ನೀಡಿದರು. ಇದುವರೆಗೂ ಡಿಶ್ ಆ್ಯಂಟೆನಾಗಳ

ಮೂಲಕ ಸ್ಯಾಟಲೈಟ್ ಕಾರ್ಯಕ್ರಮ ಪಡೆಯುತ್ತಿರುವ ಕೇಬಲ್ ಸಂಸ್ಥೆಗಳಿಗೆ ಈಗ ಮುರ್ಡೋಕ್ ವಿಸಿಟಿಂಗ್ ಕಾರ್ಡ್ ಅಳತೆಯ ಪುಟ್ಟ ಕಾರ್ಡ್‌ನಿಂದ ಕಾರ್ಯಕ್ರಮ-ವನ್ನು ಡಿಕೋಡ್ ಮಾಡುವ ತಂತ್ರಜ್ಞಾನ ನೀಡುವುದಾಗಿ ಹೇಳಿದ್ದಾರೆ. ಇಡೀ ಭಾರತದಲ್ಲಿ ಸ್ಟಾರ್‌ನದ್ದೇ ಕೇಬಲ್ ಜಾಲ ರೂಪಿಸುವುದಕ್ಕೆ ತಮ್ಮ ಆದ್ಯತೆ ಎಂದು ಅವರು ಪತ್ರಿಕಾ ಸಂದರ್ಶನದಲ್ಲಿ ಘೋಷಿಸಿದ್ದಾರೆ.

ಇದು ಅತ್ಯಂತ ಅಪಾಯಕಾರಿ. ಡಿಶ್ ಆ್ಯಂಟೆನಾವನ್ನು ಕೇಬಲ್ ಆಪರೇಟರ್‌ಗಳು ಕೈಬಿಡುವಂತೆ ಮಾಡುವಲ್ಲಿ ಮುರ್ಡೋಕ್ ಯಶಸ್ವಿಯಾದರೆ ಅವರು ಭಾರತದಲ್ಲಿ ಏಕಚಕ್ರಾಧಿಪತ್ಯ ಸ್ಥಾಪಿಸಿದಂತೆಯೇ. ಈಗಿನ ಡಿಶ್ ಆ್ಯಂಟೆನಾಗಳಿಂದ ಸ್ಟಾರ್ ನೀಡುವ ಕಾರ್ಯಕ್ರಮ ಬೇಸರವೆನಿಸಿದರೆ, ಆ್ಯಂಟೆನಾವನ್ನು ಸ್ವಲ್ಪ ಬೇರೆ ಉಪಗ್ರಹದತ್ತ ತಿರುಗಿಸಿದರೆ ಸಾಕು ಬೇರೆ ಚಾನೆಲ್‌ಗಳ ಕಾರ್ಯಕ್ರಮ ಸಿಗುತ್ತದೆ. ಈ ಆಯ್ಕೆಯನ್ನು ಇಲ್ಲವಾಗಿಸಿ, ಭಾರತದ ನೋಡುಗರು ಸ್ಟಾರ್‌ಗೆ ಮಾತ್ರ ಕಣ್ಣು ನೆಡುವಂತೆ ಮಾಡಲು ಮುರ್ಡೋಕ್ ಡಿಕೋಡ್ ಕಾರ್ಡ್ ತಂತ್ರಜ್ಞಾನವನ್ನು ಮುಂದು ಮಾಡಿದ್ದಾರೆ. ಅದೇ ಸಮಯದಲ್ಲಿ ಈಗಾಗಲೇ ಕೇಬಲ್ ಜಾಲವನ್ನು ಭಾರತದಾದ್ಯಂತ ಹರಡಲು ಹಲವಾರು ತಂತ್ರಜ್ಞರನ್ನು ಭಾರತದಲ್ಲಿ ಬಿಟ್ಟಿದ್ದಾರೆ. ಒಮ್ಮೆ ಸ್ಟಾರ್‌ನದ್ದೇ ಜಾಲ ರೂಪುಗೊಂಡರೆ ಈ ಜಾಲದ ಮೂಲಕ ಮತ್ತೊಂದು ಸ್ಯಾಟಲೈಟ್‌ಗೆ ಅವಕಾಶವೇ ಇರುವುದಿಲ್ಲ. ಆಗ ಸ್ಪರ್ಧೆಯ ಮಾತೇ ಇಲ್ಲ. ಒಂದು ದಿನಪತ್ರಿಕೆಯನ್ನು ಮಾರುವ ಏಜೆಂಟ್ ಮತ್ತೊಂದು ಸಂಸ್ಥೆಯ ಪತ್ರಿಕೆ ಮಾರಾಟ ಮಾಡಿದರೆ ಏಜೆನ್ಸಿಯನ್ನೇ ರದ್ದು ಮಾಡುವ ಬೆದರಿಕೆ ಹಾಕಿದ ಹಾಗೆ ಸ್ಟಾರ್‌ನ ಬುಡ ಭದ್ರವಾಗುತ್ತದೆ. ಹೀಗಾಗಿಯೇ ಇತರರು ಈ ಜಾಲ ರೂಪಿಸುವ ಮುನ್ನವೇ ಮುರ್ಡೋಕ್ ಇದಕ್ಕೆ ಕೈ ಹಾಕಿದ್ದಾರೆ. ಒಮ್ಮೆ ಇದು ರೂಪುಗೊಂಡರೆ ಸ್ಟಾರ್ ಸಂಸ್ಕೃತಿ, ಸ್ಟಾರ್ ರಾಜಕೀಯ ಇಡೀ ಭಾರತವನ್ನು ಬುಡ ಮೇಲು ಮಾಡಬಲ್ಲವು.

ಆಕಾಶದ ಮೂಲಕ ಇಷ್ಟೆಲ್ಲಾ ದಾಳಿ ನಡೆಯುತ್ತಿರುವಾಗ ಇದಕ್ಕೆ ಭಾರತದ ಉತ್ತರವಾದರೂ ಏನು ? ಸ್ಯಾಟಲೈಟ್ ಟಿವಿಯ ಈ ದಾಳಿಯ ಅಪಾಯಗಳನ್ನು ಮನಗಂಡು ಇವರ ಪ್ರಸಾರಕ್ಕೆ ತಡೆ ಒಡ್ಡಬೇಕಾದ ಭಾರತ, ಈಗ ನಾಲ್ಕು ಚಾನಲ್ ಗಳನ್ನು ಆರಂಭಿಸಿ ಮತ್ತೆ ಅಕ್ಟೋಬರ್ ವೇಳೆಗೆ ೨೦ ಚಾನಲ್‌ಗಳನ್ನು ನೀಡುವ ಮಾತನಾಡುತ್ತಿದೆ.

ರಾಜಕೀಯ ನಾಯಕರಿಗೆ ದೃಢ ಮನಸ್ಸಿದ್ದರೆ ಸ್ಯಾಟಲೈಟ್ ಟಿ.ವಿ. ಭಾರತದ ಮನೆ ಗಳನ್ನು ಪ್ರವೇಶಿಸದಂತೆ ಕಾನೂನಿನ ಮೂಲಕ ತಡೆಯಲು ಈಗಲೂ ಸಾಧ್ಯ ಎನ್ನುತ್ತಾರೆ ವಿ.ಆರ್. ಕೃಷ್ಣಯ್ಯರ್. ಒಂದು ಪುರಸಭೆ ಸಹ ಡಿಶ್ ಆ್ಯಂಟೆನಾಗಳನ್ನು

ಹತ್ತಿಕ್ಕಲು ಕಾನೂನಿನಲ್ಲಿ ಅವಕಾಶವಿದೆ. ಉದಾರೀಕರಣ ಅಗತ್ಯ ನಿಜ ಆದರೆ ದೇಶದ ಹಿತಾಸಕ್ತಿಯನ್ನು ಬಲಿಕೊಟ್ಟು ಅಲ್ಲ ಎನ್ನುತ್ತಾರೆ ಅವರು.

ಭಾರತದ ವೈವಿಧ್ಯಮಯ ಸಂಸ್ಕೃತಿಗೆ ಪೂರಕವಾಗಬೇಕಿದ್ದ ಎಲೆಕ್ಟ್ರಾನಿಕ್ ಮಾಧ್ಯಮ ಕೇಂದ್ರ ಸರ್ಕಾರದ ಹಿಡಿತದಲ್ಲಿದ್ದು ಅಧಿಕಾರಶಾಹಿ ಸಂಸ್ಕೃತಿಯನ್ನು ದಶಕಗಳಿಂದ ಬಿಂಬಿಸುತ್ತಾ ಬಂದಿದ್ದರಿಂದಾಗಿಯೇ ಇಂದಿನ ಜನಾಂಗ ಸ್ಯಾಟಲೈಟ್ ಟಿ.ವಿ.ಯ ವೈವಿಧ್ಯತೆಗೆ ಬೆರಗಾಗಿ ಹೋಗಿದೆ. ಗುರುತೇ ಇಲ್ಲದ ಸಂತ ಬಾರ್ಬರಾ ಇಲ್ಲಿನ ಮನೆಗಳಲ್ಲಿ ಸೇರಿ ಹೋಗಿದ್ದಾಳೆ.

ದೂರದರ್ಶನ ಎಂ. ಟಿ. ವಿ. ಚಾನೆಲ್‌ಗೆ ಉತ್ತರಿಸುವ ಭರದಲ್ಲಿ ಸಿನೆಮಾ ಸಂಸ್ಕೃತಿಯ ವ್ಯಾಪಕ ಪ್ರಸಾರಕ್ಕೆ ಸಜ್ಜಾಗಿದೆ. ದೇಶಿ ಪಾಪ್-ರಾಕ್‌ಗಳ 'ಹಾಟ್‌ಸ್ಪಾಟ್'ನ್ನು ಪ್ರೈಂಟೈಂನಲ್ಲಿ ಪ್ರಸಾರ ಮಾಡುತ್ತದೆ. ಕೇವಲ ಇಷ್ಟೇ ಅಲ್ಲ. ಹಾಟ್‌ಸ್ಪಾಟ್‌ನ ಪಾರ್ವತಿಖಾನ ಭಾರತದ ಸೆನ್ಸಾರ್ ನೀತಿಗಳನ್ನು ರೂಪಿಸುವ ಮಂಡಳಿಯ ಸಲಹೆಗಾರಳೂ ಹೌದು.

ದೂರದರ್ಶನ ಮುಂದು ಮಾಡುತ್ತಿರುವ ಸಿನೆಮಾ ಸಂಸ್ಕೃತಿಯ ಕಾರಣದಿಂದಾಗಿ ಬಾಲಿವುಡ್ ತನ್ನ ಶಕ್ತಿಯನ್ನು ಹೆಚ್ಚಿಸಿ ಕೊಂಡಿದೆ. ಬಾಲಿವುಡ್‌ನ ಬಿಸಿ ಅಡಿಗೆಯೇ ಭಾರತದ ಸಾಂಸ್ಕೃತಿಕ ರಾಯಭಾರಿಯಾಗುವ ದಿನವೂ ದೂರವಿಲ್ಲ. ಇದರ ಇನ್ನೊಂದು ಆತಂಕಕಾರಿ ಬೆಳವಣಿಗೆಯೆಂದರೆ ಬಾಲಿವುಡ್ ಮತ್ತು ಭೂಗತ ಶಕ್ತಿಗಳ ಬಾಂಧವ್ಯ ಬಲವಾಗುತ್ತಿರುವುದು. ಬಾಲಿವುಡ್‌ಗೆ ಹಣದ ಹೊಳೆ ಹರಿಸುತ್ತಿರುವ ಭೂಗತ ಶಕ್ತಿಗಳು ಭಾರತದ ಸಂಸ್ಕೃತಿಯನ್ನೂ ನಿರ್ದೇಶಿಸಲು ಈಗ ಸಾಧ್ಯ.

ಭಾರತದ ಹಲವು ಖಾಸಗಿ ಸಂಸ್ಥೆಗಳು ಈಗ ಸ್ಯಾಟಲೈಟ್ ಚಾನೆಲ್‌ಗಳನ್ನು ಆರಂಭಿಸಿವೆ. ಈ ಚಾನೆಲ್‌ಗಳು ಸಾಗಬಹುದಾದ ಒಂದು ಸ್ಯಾಂಪಲ್ ಜೈನ್ ಟಿ.ವಿ.ಯಲ್ಲಿದೆ. ಅಮೇರಿಕಾ-ಇಂಡಿಯಾ ಜಂಟಿ ಜಾಲ (JAIN) ಎಂಬ ಹೆಸರಿನ ಈ ಚಾನಲ್‌ನ ಮುಖ್ಯಸ್ಥ ಬಿ.ಜೆ.ಪಿ.ಯ ಸಕ್ರಿಯ ಕಾರ್ಯಕರ್ತರು. ಬಿ.ಜೆ.ಪಿ.ಯ ಸಂಸತ್ ಸದಸ್ಯರಾಗಿದ್ದವರು. ಬಿ. ಜೆ. ಪಿ. ಕಳೆದ ಚುನಾವಣೆಯಲ್ಲಿ ಎಲೆಕ್ಟ್ರಾನಿಕ್ ಪ್ರಚಾರ ಕೈಗೊಳ್ಳಲು ಕಾರಣರಾದವರು. ಈ ಜೈನ್ ಟಿ. ವಿ. ಧಾರ್ಮಿಕ ಚಾನೆಲ್ ಒಂದನ್ನು ಆರಂಭಿಸುವ ಪ್ರಸ್ತಾಪ ಮಾಡಿದ್ದು ಈ ಅಕ್ಟೋಬರಿನಿಂದ ಉಪಗ್ರಹದಲ್ಲಿ ಜಾಗ ಸಿಕ್ಕ ತಕ್ಷಣವೇ ಪ್ರಸಾರ ಆರಂಭಿಸಲಿದೆ.

ಈ ಎಲ್ಲಾ ಸ್ಯಾಟಲೈಟ್ ಟಿ.ವಿ.ಗಳಿಗೆ ಭಾರತವೇ ಮುಖ್ಯವಾದದ್ದಾದರೂ ಏಕೆ? ಚೋಮ್‌ಸ್ಕಿ ಪ್ರಕಾರ ಅಮೇರಿಕಾ ಗುಣಕ್ಕೆ ಹೆದರುತ್ತದೆಯೇ ಹೊರತು ದುರ್ಗುಣಕ್ಕಲ್ಲ. ಒಮ್ಮೆ ಅಲಿಪ್ತ ಚಳುವಳಿಯ ಸಮರ್ಥ ನಾಯಕನಾಗಿದ್ದ,

ಮೂರನೆ ವಿಶ್ವವನ್ನು ಅತ್ಯುತ್ತಮವಾಗಿ ಪ್ರತಿನಿಧಿಸಿದ್ದ, ದಕ್ಷಿಣ ಆಫ್ರಿಕಾದಲ್ಲಿ ನೆಲ್ಸನ್ ಮಂಡೇಲಾ ಪರವಾಗಿ ವರ್ಣ ದ್ವೇಷದ ವಿರುದ್ಧ ಜಾಗತಿಕ ಅಭಿಪ್ರಾಯ ಮೂಡಿಸಿದ್ದ ಭಾರತದ 'ಗುಣ'ದ ಬಗ್ಗೆ ಅಮೇರಿಕಾ ಈ ಮೊದಲಿನಿಂದಲೂ ಕಣ್ಣಿಟ್ಟಿದೆ. ಈ ಕಾರಣಕ್ಕಾಗಿಯೇ ಶ್ರೀಲಂಕಾದಲ್ಲಿ ರೇಡಿಯೋ ಸಂಸ್ಥೆ ಆರಂಭಿಸಲು ಪ್ರಯತ್ನಿಸುತ್ತಿದೆ. ಪಾಕಿಸ್ತಾನದ ಚಾನೆಲ್‌ಗಳಿಗೆ ಉಪಗ್ರಹದಲ್ಲಿ ಜಾಗಕೊಟ್ಟು ವಿಶ್ವದಲ್ಲಿ ಭಾರತ ವಿರೋಧಿ ಅಭಿಪ್ರಾಯ ಮೂಡಿಸುವ ಯತ್ನ ನಡೆಸುತ್ತಿದೆ. ಒಮ್ಮೆ ಅಮೇರಿಕಾದ ಸುದ್ದಿಯ ಏಕಮುಖ ಪ್ರವಾಹದ ವಿರುದ್ಧ ಸೆಡ್ಡು ಹೊಡೆದು ಅದಕ್ಕೆ ಉತ್ತರವಾಗಿ ಅಲಿಪ್ತ ರಾಷ್ಟ್ರಗಳಲ್ಲಿ ಸುದ್ದಿ ಸಂಸ್ಥೆ ಆರಂಭಿಸಲು ಕುಮ್ಮಕ್ಕು ಕೊಟ್ಟಿದ್ದ ಭಾರತವೇ ಈಗ ಸ್ಯಾಟಲೈಟ್ ಟಿ.ವಿ.ಯ ದಾಳಿಗೆ ಅವಕಾಶ ಮಾಡಿ ಕೊಟ್ಟಿದೆ.

ಉದಾರೀಕರಣ ಮೂಲಕ ದಾಳಿಗೆ ಹೆದ್ದಾರಿ ನಿರ್ಮಿಸಿದ ಭಾರತ ಇದುವರೆಗೂ ಸುದ್ದಿಯ ಹೆಸರಿನಲ್ಲಿ, ಮನರಂಜನೆಯ ಹೆಸರಿನಲ್ಲಿ ಹಿಂಬಾಗಿಲ ಮೂಲಕ ನುಗ್ಗಲು ಪ್ರಯತ್ನಿಸುತ್ತಿದ್ದ ಅಮೇರಿಕಾಗೆ ಡಂಕೆಲ್ ಪ್ರಸ್ತಾವಗಳಿಗೆ ಸಹಿ ಹಾಕುವುದರ ಮೂಲಕ ಅಧಿಕೃತ ಸ್ವಾಗತ ನೀಡಿದೆ. ಮುಂಬಾಗಿಲನ್ನೇ ತೆರೆದಿದೆ. ಭಾರತದಲ್ಲಿ ಇನ್ನು ಒಂದೆರಡು ವರ್ಷಗಳಲ್ಲಿ ನೂರಕ್ಕೂ ಹೆಚ್ಚು ಚಾನೆಲ್‌ಗಳು ಕಾರ್ಯಾರಂಭ ಮಾಡಲಿವೆ. ರವೀಂದ್ರನಾಥ ಠ್ಯಾಗೂರ್ ಕೇಳುತ್ತಾರೆ, "ಶಾಂತಿಯ ಕಾಲದಲ್ಲಿ ದೇಶವನ್ನು ರಕ್ಷಿಸದವರು, ಯುದ್ಧ ಕಾಲದಲ್ಲಿ ರಕ್ಷಿಸುತ್ತಾರೆಯೇ ?"

●

ಹಾಲಿವುಡ್ ಹಾಡುತ್ತಿರುವ ಅಮೇರಿಕದ ಕನಸು

ನಾವು ಸಿನಿಮಾದ ನೂರನೇ ಹುಟ್ಟು ಹಬ್ಬವನ್ನು ಆಚರಿಸುತ್ತಾ ಇದ್ದೇವೆಯೇ ? ಅಥವ ಅದರ ಚರಮಗೀತೆ ರಚಿಸ್ತಾ ಇದ್ದೇವೆಯೇ ? ಕಾದಂಬರಿ, ತನ್ನ ಇನ್ನೂರು ವರ್ಷಗಳ ವೈಭವಯುತ ಜೀವನದ ನಂತರ, ಇವತ್ತು ಸೊರಗಿ ಸಾಯುವ ಹಾಗೆ ಕಾಣುತ್ತಿದೆ. ಆಪೇರಾಗಳು ನೂರು–ಇನ್ನೂರು ವರ್ಷಗಳ ಮಹೋನ್ನತಿಯ ನಂತರ ಇವತ್ತು ಮ್ಯೂಸಿಯಂ ಸೇರಿವೆ. ಸಹಜವಾಗಿಯೇ ಇಂತಹ ನಿರಾಶದಾಯಕವಾದ, ಮಮಕಾರಯುಕ್ತವಾದ ಮಾತುಗಳು ಯುರೋಪಿನಿಂದ ಹೊಮ್ಮುತ್ತ ಇವೆ ; ಯಾಕೆಂದರೆ ಸಿನಿಮಾ ಹುಟ್ಟಿದ್ದೇ ಯುರೋಪಿನ ಒಡಲಲ್ಲಿ. ದಶಕಗಳ ಕಾಲ ಸಮೃದ್ಧ ಜೀವನ ನಡೆಸಿದ್ದೂ ಕೂಡ ಅಲ್ಲೇ. ಜನ ಮೆಚ್ಚುವ ಸಿನಿಮಾ ಅಂದರೆ ಯುರೋಪಿನಲ್ಲಿ ತಯಾರಾಗುವ ಸಿನಿಮಾ ಎಂಬುದರ ಬಗ್ಗೆ ನಮ್ಮ ತಲೆಮಾರಿ–ನವರ್‍ಯಾರಿಗೂ ಅನುಮಾನವಿಲ್ಲ. ಹಾಲಿವುಡ್‌ಗೆ ಯಾವತ್ತೂ ಫೆಲಿನಿ, ಬರ್ಗ್‌ಮನ್', ಬ್ಯೂನೇಲ'ಗಳನ್ನು ಕೊಡಲಾಗಿಲ್ಲ. ನನ್ನ ಖಂಡದಲ್ಲಿ ತಯಾರಾದ ಸಿನಿಮಾಗಳ ಸಂವೇದನೆ, ಪ್ರತಿಮೆ, ಸೌಂದರ್ಯಗಳನ್ನು ಹಾಲಿವುಡ್ ಎಂದಿಗೂ ದಕ್ಕಿಸಿಕೊಳ್ಳಲಿಲ್ಲ. ನಮಗೆ ಸರಿಗಟ್ಟುವಂತಹದ್ದನ್ನು ಕುರಾಸೋವ, ಸತ್ಯಜಿತ'ರಾಯ್‌ಗಳಿಂದ ನಿರೀಕ್ಷಿಸಬಹುದಿತ್ತೇ ವಿನಹ, ಹಾಲಿವುಡ್‌ನಿಂದಂತೂ ಅಲ್ಲ ; ಅದು ನಮಗೊಂದು ಸವಾಲೇ ಆಗಿರಲಿಲ್ಲ. ಅವರು ಬಲು ಆಕರ್ಷಕವಾದ ಸಿನಿಮಾ ಮಾಡಬಲ್ಲರೆಂಬು–ದೇನೋ ನಿಜ. ಆದರೆ ಯಾವತ್ತೂ ಅವು ನನ್ನ ಆಸಕ್ತಿಯನ್ನು ಕೆರಳಿಸಿದ್ದಿಲ್ಲ. ಆದರೆ ಎಪ್ಪತ್ತರ ದಶಕದಲ್ಲಿ ಎಲ್ಲ ಬದಲಾಗತೊಡಗಿತು. ಇವತ್ತು ಆ ಸಿನಿಮಾಗಳ ಹೂರಣದಲ್ಲಿ, ತೂಕದಲ್ಲಿ ಗುರುತರವಾದ ಬದಲಾವಣೆಗಳನ್ನು ನಾವು ನೋಡ–ಬಹುದಾಗಿದೆ. ಅಂಕಿ ಅಂಶಗಳ ಪ್ರಕಾರ ಯುರೋಪು ತನಗೆ ಬೇಕಾದ ಶೇ ೮೦ ನ್ನು ಹಾಲಿವುಡ್‌ನಿಂದ ಆಮದು ಮಾಡಿಕೊಳ್ಳುತ್ತಿದೆ. ಇದಕ್ಕೆ ವ್ಯತಿರಿಕ್ತವಾಗಿ ಶೇ ೦.೫ನ್ನು ಮಾತ್ರ ಅಮೇರಿಕೆಗೆ ನಿರ್ಯಾತಮಾಡ್ತ ಇದೆ. ಈ ಲೆಕ್ಕಾಚಾರ ವೆಲ್ಲ ಬಯಲಾದದ್ದೂ ಕೂಡ, ಈ ' ಗ್ಯಾಟ್ ' ಮಾತುಕತೆಗಳಲ್ಲಿ ನಡೆದ ಜಗಳಗಳಲ್ಲಿ.

ಅಮೇರಿಕೆಯ ಗೆಳೆಯರಾದ ಸ್ಪಿಲ್‌ಬರ್ಗ್, ಸ್ಕೋರ್ಸಿ, ಹಾಲಿವುಡ್ ಕೃತಿ, ವಿಚಾರಗಳಮುಕ್ತ ಪ್ರಸಾರಕ್ಕೆ ನಾವು ಯಾಕೆ ತಡೆಯೊಡ್ಡುತ್ತ ಇದ್ದೇವೆ ಅಂತ ಪ್ರಶ್ನಿಸಿ ಪತ್ರ ಬರೆದ್ರು.* ಪ್ರೇಕ್ಷಕರನ್ನ ಕಳೆದ್ಕೊಳ್ಳೋ ಹೆದ್ರಿಕೆ ಇದ್ರೆ, "ಒಳ್ಳೆ ಸಿನಿಮಾ" ಮಾಡೋ ಮೂಲಕ ಅವರನ್ನು ಮರಳಿ ಪಡೆಯೋ ಸವಾಲನ್ನು ಸ್ವೀಕರಿಸ್ಬೇಕು ಅಂತ ಅವರ ಅಭಿಪ್ರಾಯ. ಒಂದು ರೀತಿನಲ್ಲಿ ಇದು ಸಮಂಜಸವೆನಿಸ್ಬೋದಾದ ಅನಿಸಿಕೆನೇ. ಆದರೆ ಇದಕ್ಕೆ ಮತ್ತೊಂದು ಮುಖ ಇದೆ. ಅದನ್ನು ಗಮನಿಸ್ದೆ ಇರ್ಲಿಕ್ಕೆ ಸಾಧ್ಯ ಇಲ್ಲ. ನಮಗೆ ನಮ್ಮ ಭಾಷೆಗಳ ಬಳಕೆ ವ್ಯಾಪ್ತಿಯ ಸಮಸ್ಯೆ ಇದೆ. ಯುರೋಪಿನ ಯಾವ ಭಾಷೆ ಕೂಡ ಇಂಗ್ಲೀಷನಷ್ಟು ಹರವಾಗಿ ಬಳಸಲ್ಪಡೋದಿಲ್ಲ. ಅಮೇರಿಕೆಯ ತಯಾರಿಕೆಗಳು ಅಮೇರಿಕ, ಕೆನಡ, ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, ಒಂದು ಮಟ್ಟಕ್ಕೆ ಭಾರತದಲ್ಲೂ ದಾರಿಕಂಡ್ಕೋಬಲ್ಲವು. ಈ ಕಾರಣವಾಗಿಯೇ ಅವರ ಭಾರಿ ವೆಚ್ಚದ ತಯಾರಿಕೆಗಳು ಅಗ್ಗದಲ್ಲಿ ದೊರೆಯಬಲ್ಲವು. (ಟಿ.ವಿ. ತಯಾರಿಕೆ ಮಟ್ಟಿಗೆ ಈ ಮಾತು ಇನ್ನು ಪರಿಣಾಮಕಾರಿಯಾಗಿ ಅನ್ವಯ ಆಗ್ತದೆ.) ಇಂತಹ ಪರಿಸರದಲ್ಲಿ, ಅವು ಯುರೋಪಿನ ತಯಾರಿಕೆಗಳೊಟ್ಟಿಗೆ ಸ್ಪರ್ಧಿಸೋವಾಗ, ಸುಲಭದಲ್ಲಿ ಗೆಲ್ಲುತ್ತವೆ. ಯುರೋಪಿನ ಚಿಂತನೆ ಮತ್ತು ಆಂಗ್ಲೋ ಸ್ಯಾಕ್ಸನ್ ಚಿಂತನೆಗಳ ನಡುವೆ ಒಂದು ಸ್ಪಷ್ಟವಾದ ಅಂತರ ಇದೆ. ಸಿನಿಮಾ ಒಂದು ವ್ಯಾಪಾರಿ ಸರಕೇ ? ಹೌದು ಅಂತಾದ್ರೆ, ವ್ಯಾಪಾರದ ಸಕಲ ನಿಯಮಗಳಿಗೂ ಅದು ಪಕ್ಕಾಗ್ಬೇಕು. ಅಮೇರಿಕ, ಈ ವಿಷಯದಲ್ಲಿ ಮುಕ್ತತೆ ಬೇಡೋದು, ಅದು ಸಿನಿಮಾವನ್ನು ಒಂದು ಸರಕಾಗಿ ನೋಡ್ತದೆ ಎಂಬ ಕಾರಣಕ್ಕಾಗಿ. ನಮ್ದು ಅದಕ್ಕಿಂತ ಭಿನ್ನವಾದ ಯೋಚನೆ. ಸಿನಿಮಾವನ್ನು ನಮ್ಮ ದೇಶಗಳ ವೈಶಿಷ್ಟ್ಯದ ಅಭಿವ್ಯಕ್ತಿ ಅಂತ ನಾವು ಯೋಚಿಸಿದ್ರೆ, ಅದನ್ನು ಸರಕು ಅಂತ ಪರಿಗಣಿಸದೇ, ವೈಶಿಷ್ಟ್ಯ ಉಳಿಸಿಕೋಬೇಕು ಅಂತಿದ್ರೆ, ಅಂತಹ ಸಿನಿಮಾವನ್ನ ರಕ್ಷಿಸ್ಕೊಳ್ಳೊ ಹಕ್ಕೂ ಕೂಡ ನಮಗಿದೆ.

ಅಮೇರಿಕೆ ಸಿನಿಮಾ ತಯಾರಕರ ಆಹ್ವಾನದ ಮೇರೆಗೆ, ಬೇರೆ ಕೆಲವು ಯುರೋಪಿನವರೊಟ್ಟಿಗೆ, ನಾನು ಲಾಸ್‌ಏಂಜಲ್ಸ್‌ಗೆ ಹೋಗಿದ್ದೆ. ಹೋದ ಉದ್ದೇಶ.ಅಮೇರಿಕೆಯ ಒಳಗಿನ ಸಮಸ್ಯೆಯೊಂದನ್ನು ಚರ್ಚಿಸಲಿಕ್ಕೆ. ಆ ಸಮಸ್ಯೆ ಕೂಡ 'ಕಲೆ ಅಂದ್ರೆ ಏನು ?' ಅನ್ನೋ ತಾತ್ವಿಕ ಗ್ರಹಿಕೆಯ ಭಿನ್ನತೆಗೆ ಸಂಬಂಧಿಸಿದ್ದೇ ಆಗಿತ್ತು. ಸಿನಿಮಾ,

---

* ಉರುಗ್ವೆ ಸುತ್ತಿನ ಗ್ಯಾಟ್ ಮಾತುಕತೆಗಳಲ್ಲಿ, 'ಸಿನಿಮಾ'ವನ್ನೂ ಒಂದು ವ್ಯಾಪಾರಿ ಸರಕು ಅಂತ ಪರಿಗಣಿಸಿ, ಬೇರೆಲ್ಲ ಸರಕುಗಳಿಗೆ ಯಾವ ನಿಯಮ ಅನ್ವಯ ಆಗ್ತದೋ, ಅದೇ 'ಸಿನಿಮಾ'ಕ್ಕೂ ಅನ್ವಯಿಸುವಂತಾಗ್ಬೇಕು ಅನ್ನೋದು ಅಮೇರಿಕೆಯ ಒತ್ತಾಯ ಆಗಿತ್ತು. ಈ ವಾದವನ್ನ ಯುರೋಪಿನ ದೇಶಗಳ ಮುಕ್ಕಾಲು ಪಾಲು ಕಲಾವಿದರು, ಸಾಹಿತಿಗಳು, ವಿಮರ್ಶಕರೂ ತೀವ್ರವಾಗಿ ಪ್ರತಿಭಟಿಸಿದ್ರು. ಸ್ಪಿಲ್‌ಬರ್ಗ್‌ನ 'ಜೂರಾಸಿಕ್ ಪಾರ್ಕ್' ಫ್ರೆಂಚ್ ಭಾಷೆಗೆ 'ಡಬ್' ಆಗಿ, ಪ್ರದರ್ಶಿತವಾಗಲು ಫ್ರಾನ್ಸ್‌ನ ಮಂದಿ ಒಪ್ಪಲಿಲ್ಲ. —ಅನುವಾದಕ

ಒಂದು ವ್ಯಾಪಾರಿ ಸರಕು ಅಂತಾ ಪರಿಗಣಿಸೋದಾದ್ರೆ, ನಿಮಗೆ ಬೇಕಾದಂತೆ ಅದನ ಉಪಯೋಗಿಸ್ಕೊಳ್ಳೋ ಹಕ್ಕು ನಿಮಗಿದೆ ಅನಿಸೋದು ಸಾಮಾನ್ಯ. ಅಮೇರಿಕೆಯ ದೊಡ್ಡ ದೊಡ್ಡ ಸ್ಟುಡಿಯೋಗಳು ಮಾಡ್ತಿರೋದು ಅದನ್ನೇ. 'ಕ್ಯಾಸಬ್ಲಾಂಕ' ದಂತಹ ಹಳೆ ಚಿತ್ರವನ್ನು, ಎಲೆಕ್ಟ್ರಾನಿಕ್ ತಾಂತ್ರಿಕತೆ ಮೂಲಕ ವರ್ಣಚಿತ್ರವನ್ನಾಗಿಸಿ, ಒಂದಷ್ಟು ವೇಗ ತುಂಬಿಸಿ, ಒಂದು ತಾಸಿನ ಟಿ.ವಿ. ಕಾರ್ಯಕ್ರಮಕ್ಕೆ ಸರಿಹೊಂದೋ ಹಾಗೆ ರೂಪಿಸಿಬಿಡೋದು. ಇವತ್ತು ಅಮೇರಿಕೆಯಲ್ಲಿ, ೩೦-೪೦ ರ ದಶಕದ ಸಿನಿಮಾಗಳನ್ನು ಈ ರೀತಿ ಬದಲಾಯಿಸಿ ಪ್ರಸಾರ ಮಾಡಲಾಗ್ತಿದೆ. ಅಮೇರಿಕದ ಕಾನೂನು ಪ್ರಕಾರ ಇದು ಸಿಂಧುವಾದದ್ದು; ಯಾಕೆಂದರೆ, ಆ ಸಿನಿಮಾಗಳು ಆಯಾ ಸ್ಟುಡಿಯೋಗಳ ಆಸ್ತಿ; ಅದನ್ನು ಏನು ಬೇಕಾದರೂ ಮಾಡೋ ಹಕ್ಕು ಆಯಾ ಸ್ಟುಡಿಯೋಗಳಿಗಿರ್ತದೆ ಎಂಬುದು ಇದರ ಹಿಂದೆ ಕೆಲ್ಸ ಮಾಡೋ ಯೋಚನೆ.

ಸಂಪರ್ಕ ಮಾಧ್ಯಮವೇ, ಅದರ ರೀತಿಯೇ, ತಾಂತ್ರಿಕ ಪ್ರಗತಿಯಿಂದ, ಕ್ರಾಂತಿಕಾರಕವಾಗಿ ಬದಲಾಗ್ತ ಇದೆ. ಇಂತಹ ಪ್ರಗತಿಯ ಕಾರಣವಾಗಿ ಸಿನಿಮಾ ಸತ್ತೇ ಹೋಗ್ಬೋದು. ಅದಕ್ಕಾಗಿ ನಾನು ಅಳ್ತಾ ಕೂಡೋದಿಲ್ಲ; (ಹೆಚ್ಚೆಂದ್ರೆ ಒಂದಷ್ಟು ನೋವಾದಿತೂ ಅಷ್ಟೇ) ಸಿನಿಮಾ, ಸಿನಿಮಾ ಆಗಿಯೇ ಉಳಿಲಾರದು. ಅದರ ಸ್ವರೂಪವೇ ಬದಲಾಗಬೋದು. ಅದರ ಗತಿಗೆ ನಾವು ಹೊಂದ್ಕೋಳ್ಬೇಕು. ಈ ನವ ತಂತ್ರಜ್ಞಾನದ ಸವಾಲು ಎದುರಿಸ್ಲಿಕ್ಕಾಗಿಯೇ ನಾನು ಕೆಲವು ಟಿ. ವಿ. ಕಾರ್ಯಕ್ರಮಗಳನ್ನು ಮಾಡ್ತ ಇದ್ದೀನಿ. ಫೈಬರ್ ಆಪ್ಟಿಕ್ಸ್, ಕಂಪ್ಯೂಟರ್‌ಗಳಂತಹ ಸಂಪರ್ಕ ಸಾಧನಗಳಿಂದ ಒಂದು ರಾಜಮಾರ್ಗವೇ ತೆರೆದುಕೊಳ್ತ ಇದೆ. ಇಂತಹ ಜಗತ್ತಿನಲ್ಲೂ ನಮಗೂ ನಮ್ಮದೇ ಸ್ಥಾನ ಖಂಡಿತವಾಗಿಯೂ ಇರ್ತದೆ. ಆದರೆ, ನನ್ನ ಮೂಲಭೂತವಾದ ಕಾಳಜಿ ಇರೋದು ಸಂವಹನೆಯ ರೀತಿ ಬಗೆಗೇನೇ. ನಾವು ಕಲ್ತಿರೋ ಪ್ರಕಾರ, ಕಲೆಯ ಸಂವಾಹನೆ 'ವ್ಯಕ್ತಿ-ವ್ಯಕ್ತಿ'ಗಳ ನಡುವೆ ನಡೆಯೋಂತಹುದು. ಒಬ್ಬ ಕಲೆಗಾರ ನನ್ನೊಡನೆ ಸಂವಾದಿಸೋದು ವ್ಯಕ್ತಿಗತ ನೆಲೆಯಲ್ಲಿಯೇ. ಆದರೆ ಇವತ್ತು ಆಶ್ಚರ್ಯ ಅನಿಸೋಂತ ರೀತಿಯಲ್ಲಿ ಬದಲಾವಣೆ ಆಗ್ತ ಇದೆ. ಇವತ್ತು ತೀರ ಕಡಿಮೆ ಸಂಖ್ಯೆಲಿ ವ್ಯಕ್ತಿಗಳು ನನ್ನೊಟ್ಟಿಗೆ 'ಸಂವಾದಿಸ್ತ'ಇದ್ದಾರೆ. ಪ್ರತಿಯೊಬ್ಬ ವ್ಯಕ್ತಿಯ ಹಿಂದೆಯೂ ಇವತ್ತು ಒಂದು ಕಮಿಟಿ ಇರ್ತದೆ. ಇವತ್ತು ಅತಿ ಹೆಚ್ಚು ಮಾರಾಟವಾಗೋ ಕಾದಂಬರಿಯ ಹಿಂದೆ ಒಬ್ಬ ವ್ಯಕ್ತಿಯಲ್ಲ, ಒಂದು ಕಮಿಟಿ ಇರ್ತದೆ. ಒಬ್ಬ ವ್ಯಕ್ತಿ ಕಾದಂಬರಿ ಬರೆದ ನಂತರ, ಜನರನ್ನು ತಣಿಸೋ ರೀತಿಗಳ್ಯಾವುವು ಅಂತ ಚರ್ಚಿಸಿ, ಬೇಕಾದಷ್ಟು ತಿದ್ದುಪಡಿಸಿ ಪ್ರಕಟಿಸೋದು ಒಂದು ಕಮಿಟಿ. ಇದು ಹಾಲಿವುಡ್ ಯೋಚ್ನೆ ಮಾಡೋ ರೀತಿ. ಇವತ್ತು ಅಲ್ಲಿ ಒಂದು ಟಿ.ವಿ. ಸಿರಿಯಲ್ಲನ್ನೋ, ಸಿನಿಮಾವನ್ನೋ ಸಾರ್ವಜನಿಕರಿಗೆ ಬಿಡುಗಡೆ ಮಾಡೋ

ಮುನ್ನ, 'ಟೆಸ್ಟ್ ಸ್ಕ್ರೀನಿಂಗ್' ಅಂತ ಒಂದು ಹಂತ ಮಾಡ್ಕೊಂಡಿದ್ದಾರೆ. ಸ್ಯಾಂಪಲ್‌ಗೆ ಆಯ್ದುಕೊಂಡ ಪ್ರೇಕ್ಷಕರು ಯಾವ ರೀತಿ ಸ್ಪಂದಿಸ್ತಾರೆ, ಅವರಿಗೆ ಬೇಕು ಅನಿಸೋದೇನು, ಅಂತೆಲ್ಲ ಸಂಗ್ರಹಿಸಿ, ಆ ಆಧಾರದಲ್ಲಿ ಸಂಪಾದನೆ ನಡೆಸಿ, ಸಂಗೀತ ಅಳವಡಿಸಿ ಪ್ರದರ್ಶನಕ್ಕೆ ರೆಡಿ ಮಾಡ್ತಾರೆ. ಅಂತಿಮವಾಗಿ ರೂಪುಗೊಂಡ ಸರಕು ಒಂದು "ಸಾಮಾನ್ಯೀಕರಿಸಿದ ಸಂವೇದನೆ" (ಸ್ಟಾಂಡರ್ಡೈಸ್ಡ್ ಸೆನ್ಸಿಬಿಲಿಟಿ) ಯಾಗಿರ್ತದೆ. ಸ್ಪಿಲ್‌ಬರ್ಗ್‌ಗೆ ಇಂತಹ ವಿಧಾನಗಳ ಬಗ್ಗೆ ತುಂಬಾ ಪ್ರೀತಿ ಇದೆ. ಜನರಿಗೆ ಏನು ಬೇಕು, ಅವರಿಗೆ ಏನನ್ನು ಹೇಳ್ಬೇಕು ಅಂತಾ ತನಗೆ ಗೊತ್ತಿರೋದಿಲ್ಲ; ಈ 'ಟೆಸ್ಟ್ ಸ್ಕ್ರೀನಿಂಗ್'ಗಳಲ್ಲಿ ಜನ ತನ್ನಿಂದ ಏನ್ ಬಯಸ್ತಾರೋ ಅದನ್ನೇ ತಾನು ಹೇಳ್ತೀನೆ ಅಂತಾನೆ ಸ್ಪಿಲ್‌ಬರ್ಗ್.*

ಈ ಸಮಸ್ಯೆಗೆ ಇನ್ನೊಂದು ಮುಖ ಕೂಡ ಇದೆ. ಯುರೋಪಿನಲ್ಲಿ ಬಹಳಷ್ಟು ನಿರ್ದೇಶಕರುಗಳು 'ಅಹಂಕಾರಿ' ಗಳಾದ್ರು, ತನಗೆ ಏನು ಸಮಸ್ಯೆ ಅಂತಾ ಅನಿಸ್ತದೋ, ಅದನಷ್ಟೇ ಹೇಳ್ತೀನಿ ಅಂತ ಹಠ ಹಿಡಿದ್ರು. ಜನ ಏನು ನಿರೀಕ್ಷಿಸ್ತಾರೆ ಅನ್ನೋದನ್ನ ಗಣನೆಗೆ ತಂದುಕೊಳ್ದೆ. ಅದನ್ನ "ಸಮೂಹ ಸಂಸ್ಕೃತಿ" (ಮಾಸ್-ಕಲ್ಚರ್) ಅಂತ ಜರೆದ್ರು ಕಾಮಿಕ್ ಸ್ಟ್ರಿಪ್‌ಗಳನ್ನು ಅಗ್ಗದವೂ, ಕೀಳಾದವೂ ಅಂತಾ ಕರೆದು ಮಡಿವಂತಿಕೆ ಪ್ರದರ್ಶಿಸಿದ್ರು. ಆದರೆ ಅಮೇರಿಕ ಹಾಗೆ ಮಾಡ್ಲಿಲ್ಲ. ಅದರ ಫಲಾನೂ ನಾವೀಗ ಅನುಭವಿಸ್ತಾ ಇದ್ದೇವೆ.

ಯುರೋಪಿನ ಮುಂದಿರೋ ದೊಡ್ಡ ಸವಾಲು ಅಂದ್ರೆ 'ಸಾಮಾನ್ಯವಾದ ಭಾಷೆ' ಯನ್ನು ರೂಪಿಸಿಕೊಳ್ಳೋದು. "ಸಮೂಹ ಸಂಸ್ಕೃತಿ"ಯ ಬಗ್ಗೆ ತಿರಸ್ಕಾರಭಾವ ರೂಪಿಸಿಕೊಳ್ದೆ, ಜನರಿಗೆ ಬೇಕಾದ್ದು ಏನು ಅಂತ ಯೋಚಿಸಿ ಕೆಲಸ ಮಾಡೋದು. ಇಪ್ಪತ್ತೊಂದನೇ ಶತಮಾನದ ಬೃಹತ್ತಾದ ಸಾಮೂಹಿಕ ಸಮಾಜಗಳು ತೀರ ಬೇರೇನೇ ಆಗಿರ್ತವೆ. ನಾನು ಮೇಲೆ ಹೇಳಿದ 'ವ್ಯಕ್ತಿ-ವ್ಯಕ್ತಿ'ಗಳ ನಡುವಿನ ಸಂವಹನೆಯು ಕ್ರಿಯೆಯಂತಹ ಯೋಜನೆಗಳಿಂದ ಹಿಂದೆ ಸರಿಯಬೇಕಾಗಬಹುದು. ನಾವು ೨೧ನೇ ಶತಮಾನವನ್ನ ಬಹಳಷ್ಟು ಅನುಮಾನಗಳನ್ನಿಟ್ಟುಕೊಂಡೇ ಪ್ರವೇಶಿಸ್ತಾ ಇದ್ದೇವೆ. ಸರಿಯೋ-ತಪ್ಪೋ, ಇವತ್ತು ಮಿಲಿಯಾಂತರ ಜನ ಹಾಲಿವುಡ್ ಹಂಚು-

* ೧ 'ಜುರಾಸಿಕ್ ಪಾರ್ಕ್' ಸ್ಪಿಲ್‌ಬರ್ಗ್‌ನ ಈ ವೈರುಧ್ಯವನ್ನು ಬಿಂಬಿಸ್ತವೆ ಅಂತಾ ನನ್ನ ಅನಿಸಿಕೆ. ಸ್ಪಿಲ್‌ಬರ್ಗ್ ಹೇಳಬಯಸುವ ಮನುಷ್ಯ ಸ್ಪಂದನದ ಎಷ್ಟೋ ಅಂಶಗಳು, ತಾಂತ್ರಿಕ ವೈಭವದಲ್ಲಿ ಮರೆಯಾಗಿ ಹೋಗ್ತವೆ.

—ಅನುವಾದಕ

ತ್ತಿರುವ ಅಮೇರಿಕೆಯ ಕನಸಿನಲ್ಲಿ ನಂಬಿಕೆಯುಳ್ಳವರಾಗಿದ್ದಾರೆ. ಯುರೋಪಿನಲ್ಲಿರೋ ನಾವು, ದೃಕ್-ಶ್ರವಣ ಮಾಧ್ಯಮಗಳ ಮೂಲಕ, ಹೊಸ ಕನಸೊಂದನ್ನು ಹೆತ್ತು, ಜನರಿಗೆ ತಲುಪಿಸುವ ಆಸೆ ಹೊಂದಿದ್ದೇವೆ.*

---

* ೨ ಅಮೇರಿಕೆ ಮಾರುವ ಕನಸಿನಿಂದ ಯುರೋಪಿಯನ್‌ರನ್ನು ತಪ್ಪಿಸಲು, ಯುರೋಪೇ ಹೆಣವಾಗುತ್ತಿರುವುದನ್ನು, ಝನೂಸಿಯ ಮಾತುಗಳು ಧ್ವನಿಸ್ತವೆ. ಆದರೆ ಯುರೋಪಿಗೆ, ತನ್ನದೇ 'ಹೊಸ ಕನಸೊಂದನ್ನು' ನಿರೂಪಿಸುವ ತಾಂತ್ರಿಕ ಮೂಲ ಉಪಕರಣ, ವ್ಯವಸ್ಥೆ ಒಂದು ಮಟ್ಟಕ್ಕೆ ಲಭ್ಯವಿದೆ. ಆದರೆ, ತೀವ್ರವಾದ ಒರಟಾದ ಉಪಕರಣಗಳೊಟ್ಟಿಗೆ (ಅಥವ ಅವುಗಳ ಪೂರ್ಣ ಅನುಪಸ್ಥಿತಿ) ಹೆಣಗುತ್ತಿರುವ (ಭಾರತವನ್ನು ಒಳಗೊಂಡ) ಮೂರನೇ ಜಗತ್ತಿನ ದೇಶಗಳಿಗೆ ಕನಸನ್ನು ನಿರ್ಮಿಸಿಕೊಳ್ಳೊ ಹಕ್ಕಾದರೂ ಉಳಿದೀತು ಹೇಗೆ ?

—ಅನುವಾದಕ

[ಪೋಲಂಡಿನ ಪ್ರತಿಭಾವಂತ ಸಿನಿಮಾ ನಿರ್ದೇಶಕರು ಝನೂಸಿ. ಅವರು ದೆಹಲಿಯಲ್ಲಿ Film Art in changing European Scenaric view ವಿಷಯದ ಬಗ್ಗೆ ನೀಡಿದ ಉಪನ್ಯಾಸ ಇಂಗ್ಲಿಷ್ ಪತ್ರಿಕೆಗಳಲ್ಲಿ ವಿಸ್ತೃತವಾಗಿ ವರದಿಯಾಯಿತು. ಈ ಆಕರಗಳನ್ನು ಬಳಸಿ ಈ ಲೇಖನ ಸಿದ್ಧಪಡಿಸಿದರು ಕೆ. ಫಣಿರಾಜ.]

ಕೆ. ಕೇಶವಶರ್ಮ

ಡಂಕೆಲ್ ಮತ್ತು ಜಾಹಿರಾತು

ದೂರದರ್ಶನದಲ್ಲಿ ಕೆಲವು ತಿಂಗಳುಗಳಿಂದ ಒಂದು ಜಾಹೀರಾತು ಬರುತ್ತಿದೆ : ಈ ಜಾಹೀರಾತಿನ ಚಿತ್ರದಲ್ಲಿ ಮೊದಲಿಗೆ ಮಹಿಳೆಯರು 'We want Revulotion' (ನಮಗೆ ಕ್ರಾಂತಿ ಬೇಕಾಗಿದೆ) ಎಂದು ಕೂಗಾಡುತ್ತಾರೆ. ಕೊನೆಗೆ ಈ ಜಾಹೀರಾತು Jaipan ಮಿಕ್ಸಿಯ ಹೆಸರಿನೊಂದಿಗೆ ಮುಕ್ತಾಯವಾಗುತ್ತದೆ. ಆಧುನಿಕ ತಂತ್ರ-ಜ್ಞಾನದ ಸಹಕಾರದೊಂದಿಗೆ ರೂಪುಗೊಂಡಿರುವ ಈ ಮಿಕ್ಸಿಯು ಅಡುಗೆ ಮನೆಯಲ್ಲಿ ಒಂದು ಕ್ರಾಂತಿಯನ್ನು ತರಬಲ್ಲುದು ಎಂದು ಈ ಜಾಹೀರಾತು ಮಧ್ಯಮವರ್ಗದ ಮಹಿಳೆಯರಿಗೆ ಹೊಸದೊಂದು ರೋಚಕ ಜಗತ್ತನ್ನು ತೋರಿಸಿಕೊಡಬಲ್ಲುದು. ಇಲ್ಲಿ ಬರುವ ಕ್ರಾಂತಿಯ ಸುದ್ದಿಯನ್ನು ನೋಡಿ : ಈ ಕ್ರಾಂತಿಯು ಶ್ರಮಜೀವಿಗಳ ಕ್ರಾಂತಿಗೆ ಪರ್ಯಾಯವಾದುದಲ್ಲ. ಹಾಗೆ ನೋಡುವುದಿದ್ದರೆ ಶ್ರಮಜೀವಿಗಳು ನಡೆಸಿದ ಕ್ರಾಂತಿಗೆ ದೊಡ್ಡ ಆಶಯವಿದೆ, ದೊಡ್ಡ ಆದರ್ಶವಿದೆ. ಶ್ರಮಜೀವಿಗಳು ಬಯಸುವ ಕ್ರಾಂತಿಯು ಸಮಾನತೆಯ ಬಯಕೆಯನ್ನು ಹೊಂದಿರುತ್ತದೆ. ಅದು ಸುಲಭರೂಪಿಯಾದುದಲ್ಲ. ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಸೆಟೆದು ನಿಲ್ಲಬೇಕಾದ ಅಗತ್ಯವೇ ಈ ರೀತಿಯ ಕ್ರಾಂತಿಯ ಆಂತರಿಕ ತುರ್ತುಗಳಲ್ಲಿ ಒಂದಾಗಿರುತ್ತದೆ. ಜೈಪಾನ ಮಿಕ್ಸಿಯು ಹೇಳುವ ಕ್ರಾಂತಿಯು ಹಾಗಲ್ಲ. ಅದು ಮಧ್ಯಮವರ್ಗದ ಮಹಿಳೆಯರನ್ನು ಬಂಡವಾಳಶಾಹಿ ವ್ಯವಸ್ಥೆಯ ಕಡೆಗೆ ಕೊಂಡೊಯ್ಯುವ ಪ್ರಯತ್ನವನ್ನು ಮಾಡುತ್ತದೆ.

ಮಧ್ಯಮ ವರ್ಗದ ಮನಸ್ಸು ಈ ತರಹದ ರೋಚಕ ಗಳಿಗೆಗಾಗಿ ಹಂಬಲಿಸುತ್ತದೆ. ಹಂಬಲಿಸುವುದು ತಪ್ಪಲ್ಲ. ಆದರೆ ಅದು ನಿಜ. ಮಧ್ಯಮ ವರ್ಗಕ್ಕೆ ನಿಜದ ಕ್ರಾಂತಿಯ ಬಗೆಗೆ ಭಯವಿರುತ್ತದೆ. ಆದರೆ ಸಿನಿಮಾದಲ್ಲಿ ನಡೆಯುವ ಕ್ರಾಂತಿಯನ್ನು, ಬಂದೂಕನ್ನು ನೋಡಿ ಮಧ್ಯಮವರ್ಗ ಖುಶಿಪಡುತ್ತದೆ. ಅದನ್ನು ಮಧ್ಯಮ ವರ್ಗದ ತಪ್ಪೆಂದು ಕರೆಯಲು ಬರುವುದಿಲ್ಲ. ಮಧ್ಯಮವರ್ಗದ ಸಾಮೂಹಿಕ-ಆರ್ಥಿಕ-ಸಾಂಸ್ಕೃತಿಕ ಸ್ಥಿತಿಗಳು ಈ ರೀತಿಯ ಮನೋಸ್ಥಿತಿಗೆ ಕಾರಣವಾಗಿರುತ್ತದೆ. ನಮ್ಮ ಮನಸ್ಸೆಂಬುದು ಶೂನ್ಯದ ಸೃಷ್ಟಿಯೇನೂ ಅಲ್ಲ. ಮನಸ್ಸಿನ ಮೇಲೆ ಅನೇಕ ಕಾರಣಗಳು ಪರಿಣಾಮವನ್ನು ಬೀರುತ್ತವೆ. ಮನಸ್ಸಿನ ಮೇಲೆ ನಮ್ಮೆಲ್ಲರ

ಆಲೋಚನಾಕ್ರಮದ ಮೇಲೆ ಸಾಮೂಹಿಕ ಆರ್ಥಿಕ ಪರಿಸ್ಥಿತಿಗಳು ಪರಿಣಾಮವನ್ನು ಬೀರುತ್ತವೆಯೆಂದು ಒಂದು ಸಂದರ್ಭವಲ್ಲಿ ಖ್ಯಾತ ಮನೋಶಾಸ್ತ್ರಜ್ಞ ಫ್ರಾಯ್ಡ್ ಹೇಳಿದ ನೆನಪು. ಮೇಲು ನೋಟಕ್ಕೆ ಈ ಮಾತು ಮಾರ್ಕ್ಸ್‌ನ ಮಾತಿನಂತೆ ಕಾಣಿಸುತ್ತದೆ. ಮಧ್ಯಮವರ್ಗದ ಆರ್ಥಿಕ ಸ್ಥಿತಿಯು ತುಂಬಾ ಮಟ್ಟಿಗೆ ನಿಯಂತ್ರಣಕ್ಕೆ ಒಳಪಡುವಂಥದ್ದು. ಮಧ್ಯಮ ವರ್ಗದ ಜನರೇ ತೀರಾ ಹತಾಶಸ್ಥಿತಿಯಲ್ಲಿ ಹೇಳುವಂತೆ 'ಕಾಲಿಗೆ ಎಳೆದರೆ ತಲೆ ಬರುವುದಿಲ್ಲ. ತಲೆಗೆ ಎಳೆದರೆ ಕಾಲಿಗೆ ಬರುವುದಿಲ್ಲ' ಹಾಗಾಗಿ ಈ ಸ್ಥಿತಿಯ ಒಳಗೆ ಬದುಕುವ ಮಧ್ಯಮ ವರ್ಗದವರಿಗೆ ಒಂದು ರೀತಿಯಿಂದ ಕೆಲವು ನಿಬಂಧನೆಗಳು ಕಾಡುತ್ತಿರುತ್ತವೆ. ಈ ನಿಬಂಧನೆಗಳು ಆರ್ಥಿಕವಾದುದೆ ಅಥವಾ ಸಾಮಾಜಿಕವಾದುದೆ ? ಮೇಲು ನೋಟಕ್ಕೆ ಇದು ಆರ್ಥಿಕ ನಿಬಂಧನೆಯಂತೆ ಕಂಡರೂ ಇದು ಅಂತಿಮ ಮಧ್ಯಮ ವರ್ಗದ ಸಾಮಾಜಿಕ ಸ್ಥಾನಮಾನದ ಮೇಲೆ ಕೂಡಾ ಪರಿಣಾಮವನ್ನು ಬೀರುತ್ತದೆ.

ಮಧ್ಯಮ ವರ್ಗದ ಜನರು ಜಾಹೀರಾತು ಜಗತ್ತಿನೊಂದಿಗೆ ಬದುಕುವುದಕ್ಕೆ ಕಾರಣವಿದು. ಹಾಲಿ ಮಾರುಕಟ್ಟೆ ನಿಯಂತ್ರಿತ ಮನಸ್ಸು ಈ ರೀತಿಯ ಚಿಂತನೆಗಳನ್ನು ಬಹಳ ಬೇಗನೆ ವಿಸ್ತೃತಗೊಳಿಸುತ್ತದೆ. ಸುಲಭ ಕಂತುಗಳ ವ್ಯವಹಾರ ಮಧ್ಯಮ ವರ್ಗದ ಜನರನ್ನು ಹೆಚ್ಚು ಆಕರ್ಷಿಸುತ್ತಿದೆ. ತಿಂಗಳ ಸಂಬಳ ಬರುವ ಮಂದಿಯ ಬದುಕು ಸುಲಭ ಕಂತಿನೊಂದಿಗೆ ಉಸಿರಾಟವನ್ನು ನಡೆಸುತ್ತಿದೆ. ತಿಂಗಳ ಮೊದಲ ತೇದಿಗಳ ಸುಖವನ್ನು ಮಧ್ಯಮವರ್ಗದ ಮಂದಿ ಅನುಭವಿಸುತ್ತಿದ್ದಾರೆ. ಸಕ್ಕರೆಯ ಬೆಲೆ ಹೆಚ್ಚಳವಾದಾಗ ಮಧ್ಯಮ ವರ್ಗದ ಜನ ನಿಟ್ಟುಸಿರನ್ನು ಬಿಡುತ್ತಾರೆ. ಹೃದಯದ ಖಾಯಿಲೆ ಬರಬಹುದು ಎಂದು ಕೊಲೆಸ್ಟ್ರಾಲ್ ರಹಿತವಾದ ಎಣ್ಣೆಯನ್ನು ಬಳಸಬೇಕೆಂದು ಬಯಸುತ್ತಾರೆ. ಜೇಬನ್ನು ತಡವಿ ನೋಡಿಕೊಳ್ಳುತ್ತಾರೆ. ಜೀವನದ ಅಸ್ಥಿರತೆಯ ನಡುವೆ ನುಸುಳಿ ಬರುವ ಮನೋಭಾವವಿದು. ಇವಕ್ಕೂ ಅಂತರರಾಷ್ಟ್ರೀಯ ಆರ್ಥಿಕ ವಿದ್ಯಮಾನಗಳಿಗೂ ಯಾವುದಾದರೂ ಸಂಬಂಧವಿದೆಯೆ? ಹಾಗೆಯೇ ಡಂಕೆಲ್ ಪ್ರಸ್ತಾವನೆ ಮೊದಲಾದ ವಿಷಯಗಳ ಬಗೆಗೆ ಮಧ್ಯಮ ವರ್ಗದ ಜನ ಎಷ್ಟು ತಲೆಕೆಡಿಸಿಕೊಳ್ಳುತ್ತಾರೆ ? ಸರಳವಾಗಿ ವಿವರಿಸಬೇಕೆಂದರೆ ಸಾಮಾನ್ಯವಾಗಿ ಒಬ್ಬ ಉದ್ಯೋಗಿ ತನ್ನ ದಿನಚರಿಯನ್ನು ಬಿಡಿಸಿಟ್ಟರೆ ಈ ರೀತಿಯ ವಿವಾದಗಳ ಬಗೆಗೆ ಆತ ಹೆಚ್ಚು ಯೋಚಿಸುವಂತೆ ಆತನ ದಿನಚರಿಯೇ ಬಿಡುವುದಿಲ್ಲವೆಂದು ಮೇಲು ನೋಟಕ್ಕೆ ತೋರುತ್ತದೆ. ಬೆಳಗಿನ ಹತ್ತು ಗಂಟೆಯಿಂದ ಸಂಜೆ ಐದು ಗಂಟೆಯ ತನಕ ಉದ್ಯೋಗಿಯೊಬ್ಬ ತನ್ನ ಕೆಲಸಗಳಿಗಾಗಿ ಮೀಸಲಿಡುತ್ತಾನೆ. ಮಧ್ಯಾಹ್ನದ ವಿರಾಮವನ್ನು ಬಿಟ್ಟರೆ ಉಳಿದ ಅವಧಿಗಳು ಆತನವಲ್ಲ. ಅವನನ್ನು ಆಳುವ ದೊರೆಗಳವು. ಅವನನ್ನು ನಿಯಂತ್ರಿಸುವ ಆಧುನಿಕ ಆಢಳಿತ ಪದ್ಧತಿ, ಈ ನಡುವೆ ಉದ್ಯೋಗಿಯೊಬ್ಬ ಒಳದಾರಿಗಳ ಮೂಲಕ ಬೇರೆ ರೀತಿಯ ವಿಶ್ರಾಂತಿ

ಗಳನ್ನು ಪಡೆದುಕೊಳ್ಳಬಹುದು. ಅದು ಆತನ ಕಚೇರಿಯೇ ರೂಪಿಸುವ ಒಳಗುಟ್ಟು. ಉಳಿದ ಅವಧಿಯೆಂದರೆ ಬೆಳಗಿನ ಏಳು ಗಂಟೆಯಿಂದ ಬೆಳಗಿನ ಹತ್ತು ಗಂಟೆಯವರೆಗಿನ ಮೂರುಗಂಟೆ ಮತ್ತು ಸಂಜೆ ಐದು ಗಂಟೆಯಿಂದ ರಾತ್ರಿ ಹನ್ನೊಂದು ಗಂಟೆಯವರೆಗಿನ ಅವಧಿಯಲ್ಲಿ ಕಡಿಮೆಯೆಂದರೂ ಉದ್ಯೋಗಿಯೊಬ್ಬನು ಮನೆಗೆ ತಲುಪುವಾಗ ಐದೂವರೆ ಆಗಿರುತ್ತದೆ. ಟೀ-ಇತ್ಯಾದಿಗಳಿಗಾಗಿ ಒಂದು ಗಂಟೆ ಹಿಡಿದರೆ ಸಂಜೆ ಆರೂವರೆಯಿಂದ ಅವನ ವಿಶ್ರಾಂತಿಯ ಅವಧಿ. ಈ ಅವಧಿಯಲ್ಲಿ ಗಂಭೀರ ಗೃಹಿಕೆಗಳಿಗಿಂತ ಲಘುವಾದ ಮನೋರಂಜನೆಗೆ ಸಂಬಂಧಿಸಿದ ವಿಷಯಗಳೇ ಮುಖ್ಯವಾಗಿರುತ್ತವೆ. ಈ ಅವಧಿಯಲ್ಲಿ ಗಾಢ ಚಿಂತನೆಗಳು ಎಲ್ಲರಿಗೂ ಸಾಧ್ಯವಾಗುವ ವಿಷಯವಲ್ಲ. ಬಹುಶ : ಈ ಪ್ರಮುಖವಾದ ಕಾರಣವೇ ಮಧ್ಯಮ ವರ್ಗ ರೂಪಿಸುವ ಸಾಂಸ್ಕೃತಿಕ ಚಿತ್ರರಗಳ ಮೇಲೆ ಕೆಲಸ ಮಾಡುತ್ತವೆ. ಈಗ ಮಧ್ಯಮ ವರ್ಗದ ಕಣ್ಣುಗಳಿಗೆ ತೀರಾ ಆತ್ಮೀಯವಾದ ಸ್ಟಾರ್ ಟಿ.ವಿ.ಯ ಕಾರ್ಯಕ್ರಮಗಳು ಸಾಂಸ್ಕೃತಿಕ ದಬ್ಬಾಳಿಕೆಯನ್ನು ನಡೆಸುತ್ತಿವೆಯೆಂದು ನಾವು ಎಷ್ಟೇ ಬೊಬ್ಬೆ ಹೊಡೆದುಕೊಂಡರೂ ಅಂತಿಮವಾಗಿ ಈ 'ನೋಟ'ವನ್ನು, ಈ ದೃಶ್ಯವನ್ನು ತಡೆಗಟ್ಟುವ ಪರ್ಯಾಯ ವಿಧಾನವೊಂದು; ಅಥವಾ ಒಳಸಂಚೊಂದು ನಮ್ಮಲ್ಲಿ ಸಿದ್ಧವಾಗಿಲ್ಲ. ಮಧ್ಯಮ ವರ್ಗದ ಜನರನ್ನು ನಾವು ಕೇಳಿದರೆ ಏನೆನ್ನುತ್ತಾರೆ ? ಬೆಂಗಳೂರು ಅಥವಾ ದೆಹಲಿಯ ದೂರದರ್ಶನದ ಕಳಪೆ ಸರ್ಕಾರಿ ಕಾರ್ಯಕ್ರಮವನ್ನು ಯಾರು ನೋಡಲು ಸಾಧ್ಯ ? ಎಂದು ಮರು ಪ್ರಶ್ನೆಯನ್ನು ನಮ್ಮ ಮುಖಕ್ಕೆ ಎಸೆಯುತ್ತಾರೆ ? ಅಲ್ಲವೆ ? ಇದರಿಂದ ನಾವು ಎಷ್ಟು ತಪ್ಪಿಸಿಕೊಳ್ಳಲು ಸಾಧ್ಯ ? ಈಚೆಗೆ ತೀರಾ ಹಸುಳೆಯೊಂದರ ಮೇಲೆ ಅತ್ಯಾಚಾರವೆಸಗಿದವನೊಬ್ಬ ತಾನು ಸ್ಟಾರ್ ಟಿ.ವಿ.ಯ ಕಾರ್ಯಕ್ರಮವೊಂದರಿಂದ ಪ್ರಚೋದನೆಗೆ ಒಳಗಾದೆ ಎಂದು ಹೇಳಿಕೊಂಡ .ಈಗ ನಿಜವಾದ ವಿಷಯಕ್ಕೆ ನಾನು ಬರುತ್ತೇನೆ. ಹೊಸ ಆರ್ಥಿಕ ನೀತಿಯು ಬೀರುವ ಕೆಲವು ಪ್ರಮುಖ ಹಾಗೂ ಪರೋಕ್ಷ ಪರಿಣಾಮಗಳಲ್ಲಿ ಇದೂ ಒಂದಾಗಿದೆ. ಉದಾರ ನೀತಿಯ ಆರ್ಥಿಕ ಹಾಗೂ ರಾಜಕೀಯ ಸೆಲೆಗಳು ಮಧ್ಯಮ ವರ್ಗದ ಮನುಷ್ಯರನ್ನು ಮತ್ತಷ್ಟು ಅವಿಶ್ರಾಂತಗೊಳಿಸುತ್ತವೆ. ಉದಾರವಾದಿ ಆರ್ಥಿಕ ನೀತಿಯು ವಿದೇಶವನ್ನು ತಂದು ನಮ್ಮ ಮನಸ್ಸುಗಳನ್ನು ಬುಡಮೇಲು ಮಾಬಹುದು. ಹೊಸ ಆಮಿಷಗಳನ್ನು ಒಡ್ಡಬಹುದು.

ಬಹುರಾಷ್ಟ್ರೀಯ ಕಂಪನಿಗಳು ಇಲ್ಲಿಗೆ ಬಂದರೆ ಅದರಿಂದ ಮಧ್ಯಮ ವರ್ಗಕ್ಕೆ ಏನು ತೊಂದರೆ ಎಂದು ಕೇಳಬಹುದು. ಮೇಲು ನೋಟಕ್ಕೆ ಅಂಥ ಯಾವ ತೊಂದರೆಯೂ ಕಾಡದಿರಬಹುದು. ಕೆಲವು ಪ್ರಮೇಯಗಳನ್ನು ಡಂಕೆಲ್ ಪ್ರಸ್ತಾವನೆಯ ಕುರಿತು ಈಗಾಗಲೇ ಕೆಲವು ಲೇಖಕರು ಪ್ರಸ್ತಾಪಿಸಿದ್ದಾರೆ. ಡಂಕೆಲ್ ಪ್ರಸ್ತಾವನೆಯು

ಅಂತಿಮವಾಗಿ ಭಾರತದಂಥ ದೇಶಗಳಿಗೆ ಮಾರಕವೆಂದು ಹೇಳಲಾಗಿದೆ. ವಸಾಹತುಶಾಹಿ ಅನುಭವದ ದುರಂತವನ್ನು ಎದುರಿಸಿರುವ ನಮಗೆ ಇದು ಮತ್ತೊಂದು ರೀತಿಯ ಪರಿಣಾಮಗಳನ್ನು ಕೊಡಬಹುದಾಗಿದೆ.

ಈಗಿನ ಉದ್ದಿಮೆಗಳು ಸಾಹಿತ್ಯವನ್ನು ಸಮೇತವಾಗಿ ಎಲ್ಲವನ್ನೂ ಕೇವಲ ಮಾರು-ಕಟ್ಟೆಯ ಸಾಮಗ್ರಿಯಾಗಿ ಕಾಡುತ್ತಿರುವುದು ನಮಗೆಲ್ಲಾ ತಿಳಿದ ವಿಷಯವೇ ಆಗಿದೆ. ಆಧುನಿಕ ಮಾರುಕಟ್ಟೆ ಹೆಚ್ಚು ಮಾರಾಟವಾಗುವ 'ಕವಿ'ಯನ್ನು, ಹೆಚ್ಚು ಮಾರಾಟ-ವಾಗುವ ಕಾದಂಬರಿಕಾರರನ್ನು, ಹೆಚ್ಚು ಮಾರಾಟವಾಗುವ ವಿಮರ್ಶಕರನ್ನು ಸೃಷ್ಟಿಸುತ್ತದೆ. ಬುದ್ಧಿಯು ಕೂಡಾ ಬಂಡವಾಳ ಶಾಹಿ ವ್ಯವಸ್ಥೆಯಲ್ಲಿ 'ಒತ್ತೆ'ಯಿಡ ಬಹುದಾದ ಸಾಮಗ್ರಿ ಮಾತ್ರ. ಬರಗೂರು ರಾಮಚಂದ್ರಪ್ಪನವರು ಹೇಳುವಂತೆ, ಈಗ "ಪುಸ್ತಕ ಎನ್ನುವುದು ಮಾಧ್ಯಮವಾಗಿರುವಂತೆಯೇ ಪುಸ್ತಕೋದ್ಯಮವಾಗಿದೆ. ಚಲನಚಿತ್ರವು ಮಾಧ್ಯಮವಾಗಿರುವುದಕ್ಕಿಂತ ಹೆಚ್ಚಾಗಿ ಚಲನಚಿತ್ರೋದ್ಯಮವಾಗಿದೆ. ಇದೇ ರೀತಿ ಪತ್ರಿಕಾ ಮಾಧ್ಯಮ ಪತ್ರಿಕೋದ್ಯಮವಾಗಿದೆ. ತಂತ್ರಜ್ಞಾನ ಎಷ್ಟರ ಮಟ್ಟಿಗೆ ಮಾಧ್ಯಮವನ್ನು ಪ್ರವೇಶಿಸಿದೆಯೆಂದರೆ ಅದರ ಸಹಾಯವಿಲ್ಲದೆ ಪುಸ್ತಕಗಳು ಅಚ್ಚಾಗುವುದಿಲ್ಲ. ಓಲೆಗರಿಗಳ ಕಾಲ ಇದಲ್ಲ. ಸಾಹಿತ್ಯವು ಹಸ್ತಪ್ರತಿ ಮತ್ತು ಅಚ್ಚುತಂತ್ರ – ಎರಡನ್ನೂ ಒಳಗೊಳ್ಳುತ್ತಿರುವ 'ಪುಸ್ತಕ ರೂಪ' ವಾಗಿ ಪರಿವರ್ತನೆ ಹೊಂದಿದೆ. ಕತೆ, ಕವಿತೆ, ಕಾದಂಬರಿ ಯಾವುದೇ ಪ್ರಕಾರವಿರಲಿ, ಅದು ಪುಸ್ತಕವಾಗುವುದು ಅಚ್ಚಿನ ಮನೆಯಲ್ಲಿ, ಯಂತ್ರಗಳ ಸಹಾಯದಲ್ಲಿ. ಉದ್ಯಮದ ಮಾದರಿಗಳು ಹೀಗೆ ಮಾಧ್ಯಮವನ್ನು ಆವರಿಸುತ್ತಿರುವ ಅನಿವಾರ್ಯ ಸ್ಥಿತಿಯಲ್ಲಿ ತಂತ್ರಜ್ಞಾನದ ನಿರಾಕರಣೆ ಒಂದು ಅಸಂಗತ ಪ್ರಹಸನವಾದೀತು. ಅದೇ ರೀತಿ ತಂತ್ರಜ್ಞಾನಕ್ಕೆ ಸಂಪೂರ್ಣ ತಲೆಯೊಪ್ಪಿಸುವುದು ದುರಂತನಾಟಕವಾದೀತು." (ಸಂಸ್ಕೃತಿ - ಉಪಸಂಸ್ಕೃತಿ ಪು. ೭೭) ಈ ಕಾರಣದಿಂದ ಖಾಸಗಿ ಉದ್ದಿಮೆಗಳು ನಮ್ಮನ್ನು ವ್ಯಾಪಿಸಿಕೊಳ್ಳುವುದರಿಂದ ಹೊರಗಿನ ರಫ಼ದಾರಿ ಸಾಂಸ್ಕೃತಿಕ ಸಂದರ್ಭದ ಅಳಿವು ಉಳಿವಿನ ಪ್ರಶ್ನೆಯೂ ಆಗಿರುತ್ತದೆ.

ಡಂಕೆಲ್– ನಮ್ಮನ್ನು ವ್ಯಾಪಿಸಿಕೊಳ್ಳುವ ಮೇಲು ನೋಟದ ತಿಳುವಳಿಕೆಗಳೇ ಹೀಗಿವೆ. ಚರ್ಚೆಯ ದಾರಿ ಮುಂದುವರಿಯಬೇಕು. ಸ್ಟಾರ್ ಟಿ. ವಿ. ನಮ್ಮನ್ನು ಕಾಡುತ್ತದೆ, "We want Revolution" ಎನ್ನುವುದು ಕೇವಲ ಮಿಕ್ಸಿಯ ಸಮಾಚಾರವೆ ?

●

ಬಿ. ಎ. ವಿವೇಕ ರೈ

ಅಥೆನ್ಸಿನ ಅರ್ಥವಂತ ಮತ್ತು ಮನಮೋಹಕ ಬಜೆಟ್

ಇತ್ತೀಚೆಗೆ ಅರ್ಥಕ್ಕೆ ಸಂಬಂಧಿಸಿದ ಎರಡು ಪ್ರದರ್ಶನಗಳನ್ನು ನೋಡುವ ಅವಕಾಶ ದೊರೆಯಿತು. ಮೊದಲನೆಯದು ಹೆಗ್ಗೋಡಿನ ನೀನಾಸಂ ತಂಡದವರು ಪ್ರದರ್ಶಿಸಿದ 'ಅಥೆನ್ಸಿನ ಅರ್ಥವಂತ' ನಾಟಕ. ಎರಡನೆಯದು ಪಾರ್ಲಿಮೆಂಟಿನಲ್ಲಿ ಭಾರತದ ಅರ್ಥ ಸಚಿವ ಡಾ. ಮನಮೋಹನ್ ಸಿಂಗ್ ಮಂಡಿಸಿದ ೧೯೯೪-೯೫ರ ಬಜೆಟ್‌ನ ದೂರದರ್ಶನ ನೇರ ಪ್ರಸಾರ. ಈ ಎರಡು ಪ್ರದರ್ಶನಗಳು ಅರ್ಥಕ್ಕೆ ಸಂಬಂಧಪಟ್ಟವು ಅಷ್ಟೇ ಆಗಿರದೆ ಅರ್ಥದ ಅರ್ಥವಂತಿಕೆಯ ವಿಮರ್ಶೆಗೆ ಅನುವು ಮಾಡಿಕೊಡುವ ಸಾಮಗ್ರಿಗಳೂ ಆಗಿವೆ. ಅಥೆನ್ಸಿನ ಅರ್ಥವಂತ ನಾಟಕವನ್ನು ನೋಡಿದ ಹಿನ್ನೆಲೆಯು ಮನಮೋಹನ ಸಿಂಗರ ಬಜೆಟನ್ನು ಅರ್ಥಮಾಡಿಕೊಳ್ಳಲು ನನಗೆ ಹೆಚ್ಚು ಪ್ರಯೋಜನಕಾರಿಯಾಗಿದೆ.

ಷೇಕ್ಸ್‌ಪಿಯರ್‌ನ 'TIMON OF ATHENS' ನಾಟಕವನ್ನು ಕೆ. ವಿ. ಸುಬ್ಬಣ್ಣ 'ಅಥೆನ್ಸಿನ ಅರ್ಥವಂತ'ಎಂಬ ಹೆಸರಿನಲ್ಲಿ ಸಮರ್ಥವಾಗಿ ಕನ್ನಡಕ್ಕೆ ಅನುವಾದಿಸಿದ್ದು. ಚಿದಂಬರರಾವ್ ಜಂಬೆ ಅವರ ನಿರ್ದೇಶನದಲ್ಲಿ ಅದು ನೀನಾಸಂ ಪ್ರದರ್ಶನವಾಗಿ ಪರಿಣಾಮಕಾರಿ ಮೂಡಿಬಂದಿದೆ. ಶ್ರೀಮಂತ ತೈಮೋನ್‌ನ ದುಂದುವೆಚ್ಚದ ಜಗತ್ತು ಮತ್ತು ಹಣದ ಕಾರಣಕ್ಕಾಗಿ ಅವನ ಸುತ್ತ ಇರುವ ಢೊಂಗಿ ಸ್ನೇಹಿತರು,ಹೊಗಳುಭಟರಾಜರು, ಕವಿಗಳು, ಚಿತ್ರಗಾರರು, ವ್ಯಾಪಾರಿಗಳು ಮುಂತಾದವರು ಸೃಷ್ಟಿಸುವ ಭ್ರಮಾಧೀನ ವೈಭವದ ಪ್ರಪಂಚ–ಇವು ಕೊನೆಗೆ ಬಂದು ತಲುಪುವುದು ಎಲ್ಲವನ್ನೂ ಕಳೆದುಕೊಂಡು ತೈಮೋನ್ ಭಿಕಾರಿಯಾಗುವ ಸ್ಥಿತಿಗೆ. ತನ್ನ ಗೋರಿಯನ್ನು ತಾನೇ ನಿರ್ಮಿಸಿಕೊಳ್ಳುವ ಸ್ಥಿತಿಗೆ ಸಾಲದ ಹಣವನ್ನು ಮಿತಿಮೀರಿ ಬಳಸಿ, ಕೊನೆಗೆ ಅದನ್ನು ಮರು ಪಾವತಿ ಮಾಡಲಾರದೆ ಅಥೆನ್ಸ್‌ನ್ನು ಕಳೆದುಕೊಳ್ಳುವ ಸ್ಥಿತಿಗೆ ತೈಮೋನ್ ತಲುಪಿದಾಗ ಅವನ ಜೊತೆಗೆ ಕುಡಿದ, ಉಂಡ, ಲೋಲುಪತೆಯ ಸುಖಅನುಭವಿಸಿದ ಜನರು ಯಾರೂ ಅವನ ನೆರವಿಗೆ ಬರುವುದಿಲ್ಲ. ಹಣದ ಹುಚ್ಚು ಹೊಳೆಯ ಪ್ರವಾಹದಲ್ಲಿ ಮುಳುಗಿದ ದುರಂತದು ಸಂದರ್ಭದಲ್ಲಿ ಕೊನೆಗೆ ತೈಮೋನ್

ಪ್ರಜ್ಞಾವಂತನಾಗುತ್ತಾನೆ, ದಾರ್ಶನಿಕನಾಗುತ್ತಾನೆ, ಚಿನ್ನದ, ಹಣದ, ಸಂಪತ್ತಿನ ಆರಾಧನೆಯನ್ನೇ ಮೌಲ್ಯವಾಗಿ ಪರಿಗಣಿಸುವ ಸಮಾಜವನ್ನು ಧಿಕ್ಕರಿಸುತ್ತಾನೆ. ಹಣದ ಮೇಲಿನ ಅತಿ ವ್ಯಾಮೋಹವು ಮನುಷ್ಯ ಸಂಬಂಧಗಳನ್ನು ನಾಶಮಾಡಿ ಅಧಃಪತನಕ್ಕೆ ಹೇಗೆ ತಳ್ಳುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳುತ್ತಾನೆ.

ಆದರೆ ಕುರುಡು ಕಾಂಚಾಣ ಕುಣಿಯುವ ಜಗತ್ತಿನ ನಯವಂಚಕತನದ ಆಘಾತದಿಂದ ಚೇತರಿಸಿಕೊಳ್ಳಲಾರದೆ ಸಾವನ್ನಪ್ಪುತ್ತಾನೆ. ಬೇಂದ್ರೆಯವರ 'ಕುರುಡು ಕಾಂಚಾಣ' ಕವನದ ಸಾಲುಗಳು ಈ ನಾಟಕ ನೋಡಿದ ಬಳಿಕ ಇನ್ನೂ ಚೆನ್ನಾಗಿ ಅರ್ಥವಾಗುತ್ತವೆ. 'TIMON OF ATHENS' ನಾಟಕದಲ್ಲಿ ಎಲ್ಲವನ್ನೂ ಕಳೆದುಕೊಂಡ ಬಳಿಕ TIMON ಕಂಡುಕೊಳ್ಳುವ ಸತ್ಯ 'ಕುರುಡು ಕಾಂಚಾಣ' ಕವನದ ಸಾಲುಗಳಿಗಿಂತ ಬಹಳ ಭಿನ್ನವಾಗಿಲ್ಲ.

ಚಿನ್ನದ ಕುರಿತು ತೈಮೋನ್‌ನ ವ್ಯಾಖ್ಯಾನ ಹೀಗಿದೆ :

"This yellow slave Will knit and break religions,
bless the accursed, Make the hour leprosy adored,
place thieves and give them title, knee and approbation,
with Senatars on the bench. This is it
That makes the wappened widow wed again–
She whom the spitai-house and ulcerous sores
would cast the gorge at his embalms and spices
To the April day again."

Alciblades ಚಿನ್ನ ಕೊಡಲು ಬಂದಾಗ ತೈಮೋನ್ ಅದನ್ನು ನಿರಾಕರಿಸುತ್ತಾನೆ : "ಅದನ್ನು ನೀನೇ ಇಟ್ಟುಕೋ. ನಾನು ಅದನ್ನು ತಿನ್ನಲಾರೆ" ಎನ್ನುತ್ತಾನೆ. ಅಪೆಮಂತೂಸ್‌ನು ತೈಮೋನ್‌ನಲ್ಲಿ 'Here is no use for gold' ಎಂದು ಹೇಳಿದಾಗ, ಅದಕ್ಕೆ ತೈಮೋನ್‌ನ-ಉತ್ತರ : "The best and truest ; For here it sleepss and does no tired harm."

ಶ್ರೀಮಂತಿಕೆ ಇದ್ದಾಗ ಕೊಬ್ಬಿ, ಜನರ ಭಟ್ಟಂಗಿತನಕ್ಕೆ ಮರುಳಾಗಿ ದುಂದುವೆಚ್ಚ ಮಾಡಿದ ತೈಮೋನ್. ಎಲ್ಲ ಸಂಪತ್ತನ್ನೂ ಕಳಕೊಂಡು ನೆರವು ಪಡೆದವರೆಲ್ಲರೂ ವಂಚಕರಾದಾಗ ಮನುಷ್ಯ ಕುಲದ ಬಗ್ಗೆ ಸಂಪೂರ್ಣ ವಿಶ್ವಾಸವನ್ನೇ ಕಳೆದುಕೊಳ್ಳುತ್ತಾನೆ. ಈ ಎರಡು ಅತಿರೇಕದ ಸ್ಥಿತಿಗಳ ಕುರಿತು ತತ್ವಜ್ಞಾನಿ ವ್ಯಕ್ತಿತ್ವದ ಅಪೆಮಂತೂಸ್ ಕೊಡುವ ಪ್ರತಿಕ್ರಿಯೆ ಮನನೀಯವಾಗಿದೆ :

''The middle of humanity thou never knebest,
but the extremity of both ends.
When thou wast in the gift and thy perfume,
they mocked thee for too much curiosity ;
in the rags thou knowest none,
but art despised for the contrary.
There is a medlar for thee eat it''

ಹಣದುಬ್ಬರದ ಸುಳ್ಳು ಪ್ರಪಂಚದಲ್ಲಿ ಮನುಷ್ಯರು ತಮ್ಮ ಮಾನಸಿಕ ಆರೋಗ್ಯವನ್ನು ಕಳೆದುಕೊಂಡು ಹುಚ್ಚರಾಗುತ್ತಾರೆ. ಪ್ರಾಥಮಿಕ ಅಗತ್ಯಗಳನ್ನು ಮೀರಿದ ಸಂಪತ್ತಿನ ಬಳಕೆಯು ಅರ್ಥ ಪ್ರಪಂಚವು ಸ್ವಾರ್ಥ ಪ್ರಪಂಚವನ್ನು ನಿರ್ಮಿಸುತ್ತದೆ. ತೈಮೋನ್ ಕೊನೆಗೂ ಕಂಡುಕೊಳ್ಳುವ ಸತ್ಯವೆಂದರೆ :

''I am sick of this false world, and will love nought.
But even the mere necessities upon't.
Then, Timon, pressently prepare thy grave.''

ತನ್ನ ಗೋರಿಯನ್ನು ತಾನೇ ಕಟ್ಟಿಕೊಳ್ಳುವ ತೈಮೋನ್‌ನ ಮಾತುಗಳು ನಮ್ಮ ದೇಶದಲ್ಲಿ ನಮ್ಮ ಪರಿಸರದಲ್ಲಿ ಮತ್ತೆ ಮತ್ತೆ ಅನುರಣಿಸುತ್ತವೆ.

ನಮ್ಮ ಅರ್ಥ ಸಚಿವ ಡಾ. ಮನಮೋಹನ ಸಿಂಗ್‌ರ ಈ ವರ್ಷದ ಬಜೆಟ್‌ನ ಎಲ್ಲ ಆರ್ಥಿಕ ಸೂಕ್ತಗಳನ್ನು ವಿಶ್ಲೇಷಿಸುವ ಅರ್ಥಶಾಸ್ತ್ರದ ಜ್ಞಾನ ನನ್ನದಲ್ಲ. ಕಳೆದ ವರ್ಷಗಳಲ್ಲಿ ಅವರು ಮಂಡಿಸಿದ ಬಜೆಟ್‌ಗಳು ನಮ್ಮ ದೇಶದಲ್ಲಿ ಆರ್ಥಿಕ ಸ್ಥಿರತೆಯನ್ನು ತಂದುಕೊಡಲು ನೆರವಾಗಿವೆ ಎಂಬ ಅರ್ಥಶಾಸ್ತ್ರರ ವಿಶ್ಲೇಷಣೆಗಳನ್ನು ಮೊದಲಲ್ಲಿ ನಾನೂ ನಂಬಿದ್ದೆ, ಪರೋಕ್ಷವಾಗಿ ಮೆಚ್ಚಿಕೊಂಡಿದ್ದೆ. ಅವರು ಪ್ರತಿಪಾದಿಸುವ ಆರ್ಥಿಕ ಉದಾರೀಕರಣದ ತತ್ವವು ನಮ್ಮ ದೇಶವನ್ನು ಆರ್ಥಿಕವಾಗಿ ಬಲಿಷ್ಠ ರಾಷ್ಟ್ರವನ್ನಾಗಿ ಮಾಡಬಲ್ಲುದು ಎನ್ನುವ ವಿವರಣೆಗಳಿಗೆ ಮಾರು ಹೋಗಿದ್ದೆ. ವ್ಯಕ್ತಿಯಾಗಿ ಅವರ ಪ್ರಾಮಾಣಿಕತೆ, ಆರ್ಥಿಕ ಶಿಸ್ತಿನ ತತ್ವ, ನಿಷ್ಠೆಗಳನ್ನು ಗೌರವಿಸುವಾಗಲೂ ಕಳೆದ ಕೆಲವು ವರ್ಷಗಳಿಂದ ಆರ್ಥಿಕ ಉದಾರೀಕರಣದಿಂದ ನಮ್ಮ ಪರಿಸರದಲ್ಲಿ ಆಗುತ್ತಿರುವ ಅತಿ ಕ್ಷಿಪ್ರವಾದ ಬೃಹತ್ ಪರಿಣಾಮಗಳನ್ನು ಕಾಣಲು ತೊಡಗಿದಾಗ ಈ ಧೋರಣೆಯು ಆತಂಕವನ್ನು ಉಂಟುಮಾಡುತ್ತಿದೆ. 'ಆರ್ಥಿಕ ಉದಾರೀಕರಣ' ಎನ್ನುವ ಹೆಸರಿನಲ್ಲಿ ಹಣದ ಚಲಾವಣೆ ಹೆಚ್ಚಿನ ಪ್ರಮಾಣದಲ್ಲಿ ಆಗಲು ಅವಕಾಶ ಕಲ್ಪಿಸಲಾಗಿದೆ. ಸಾಲ ಪಡೆಯಲು ಹೆಚ್ಚು ಹೆಚ್ಚು ಪ್ರೋತ್ಸಾಹ ಕೊಡಲಾಗುತ್ತಿದೆ. ಯಂತ್ರೋಪಕರಣಗಳು, ಅಲಂಕಾರ ಸಾಧನಗಳು,

ಭೋಗವಸ್ತುಗಳು ಹೆಚ್ಚು ಹೆಚ್ಚು ಆವಿದಾಗಲು ಉತ್ತೇಜನ ಕಲ್ಪಿಸಿ ಜನರು ಇವನ್ನು ಹೆಚ್ಚು ಹೆಚ್ಚು ಕೊಳ್ಳಲು ಉದ್ದೀಪನ ಕೊಡಲಾಗುತ್ತಿದೆ. 'ಸಾಲ ಮಾಡಿಯಾದರೂ ತುಪ್ಪ ತಿನ್ನು' ಎನ್ನುವುದು ಈಗಿನ ಒಂದು ಪ್ರಭುತ್ವಾತ್ಮಕ ತಾತ್ವಿಕತೆ. ಈಗ ಹಿಂದೆಂದಿಗಿಂತಲೂ ಹೆಚ್ಚು 'ತುಪ್ಪ' ತಿನ್ನಬಹುದು. ಏಕೆಂದರೆ 'ತುಪ್ಪ' ಎಲ್ಲ ಕಡೆಯೂ ಧಾರಾಳವಾಗಿ ಸಿಗುತ್ತದೆ ಮತ್ತು 'ತುಪ್ಪ' ಕೊಳ್ಳಲು ಕಡಿಮೆ ಬಡ್ಡಿಯಲ್ಲಿ 'ಸಾಲ'ವೂ ಸಿಗುತ್ತದೆ. ಹೆಚ್ಚು ತುಪ್ಪ ತಿಂದು ಕೊಬ್ಬು ಹೆಚ್ಚಾಗಿ ಕಾಯಿಲೆ ಬಂದರೆ ಅದಕ್ಕೆ ಸರಿಯಾದ ಚಿಕಿತ್ಸೆ ನಡೆಸಲು ಹೆಚ್ಚಿನ ಸೌಲಭ್ಯಗಳುಳ್ಳ ಆಸ್ಪತ್ರೆಗಳು ಸಿಗುತ್ತವೆ. ಇವುಗಳಿಗೆ ಪೂರಕವಾಗಿ ಔಷಧದ ಅಂಗಡಿಗಳು ಎಲ್ಲ ಕಡೆಯೂ ಕಾಣಸಿಗುತ್ತವೆ. ಈ ಔಷಧಗಳನ್ನು ಕೊಳ್ಳಲು ಮತ್ತು ಆಸ್ಪತ್ರೆ ಖರ್ಚಿಗಾಗಿ ವೈದ್ಯಕೀಯ ಸೌಲಭ್ಯದ ಸಾಲವೂ ಸಿಗುತ್ತದೆ. ಹೀಗಾಗಿ 'ತುಪ್ಪ' ತಿಂದು 'ಮಾತ್ರೆ' ಗಳನ್ನು ನುಂಗಲು ಈಗ ಹಿಂದೆಂದಿಗಿಂತ ಹೆಚ್ಚು ಸೌಕರ್ಯಗಳಿವೆ, ಅನುಕೂಲಗಳಿವೆ. ಜನರು ಈ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ತಿಳಿಸಲು ಪತ್ರಿಕೆಗಳಲ್ಲಿ ಮಾಧ್ಯಮಗಳಲ್ಲಿ ಸಾಕಷ್ಟು ಜಾಹೀರಾತುಗಳು ಸಿಗುತ್ತವೆ.

'ಹಣದುಬ್ಬರ' ಎನ್ನುವುದು ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಪ್ರಗತಿಯ ಲಕ್ಷಣ ಎಂದು ಕೆಲವು ಅರ್ಥಶಾಸ್ತ್ರಜ್ಞರು ವಾದಿಸುತ್ತಾರೆ. ಕಳೆದ ವಾರ ದೂರದರ್ಶನದ ಸಂದರ್ಶನ ಒಂದರಲ್ಲಿ ಪ್ರೊ. ಬ್ರಹ್ಮಾನಂದರು ಈ ವಾದವನ್ನು ಸಂಪೂರ್ಣವಾಗಿ ಅಲ್ಲಗಳೆದು ಇದು ಹಳೆಯ ಅರ್ಥಶಾಸ್ತ್ರಜ್ಞರ ಹಳೆಯ ಒಂದು ತತ್ವ ಎಂದು ಹೇಳಿದರು. ಶೇ. ೧೦ ರಷ್ಟು ಹಣದುಬ್ಬರ ಆದರೂ ವಸ್ತುಗಳ ಬೆಲೆಗಳು ವಿಪರೀತವಾಗಿ ಏರಿ, ಜನ ಸಾಮಾನ್ಯರಿಗೆ ಬಹಳ ಸಂಕಷ್ಟವಾಗಬಹುದು ಎಂಬ ಎಚ್ಚರಿಕೆಯನ್ನು ಅವರು ಕೊಟ್ಟರು. ಹೆಚ್ಚು ಹಣ ಚಲಾವಣೆ ಆಗುತ್ತಿರುವಂತೆ ತೋರಿಸಿ. ಜೀವನಾವಶ್ಯಕ ವಸ್ತುಗಳ ಬೆಲೆಗಳನ್ನು ರೂಪಾಯಿಯ ಕೊಳ್ಳುವ ಶಕ್ತಿಗಿಂತ ಹೆಚ್ಚು ಏರಲು ಅವಕಾಶ ಕಲ್ಪಿಸಿ. ತೀರಾ ಅವಶ್ಯವಲ್ಲದ ವಸ್ತುಗಳನ್ನು ಕೊಳ್ಳಲು ಜಾಹೀರಾತುಗಳ ಪ್ರಲೋಭನೆಗಳ ಮೂಲಕ ಉತ್ತೇಜನಗೊಳಿಸಿ. ಇದಕ್ಕೆ ಬೆಂಬಲವೆಂಬ ಹೆಸರಿನಲ್ಲಿ ಸಾಲ ಸೌಲಭ್ಯಗಳನ್ನು ವಿಶೇಷವಾಗಿ ಕಲ್ಪಿಸಿ, ಜನರೆಲ್ಲರೂ 'ಅಥೆನ್ಸಿನ ಟೈಮೋನ್'ನಂತೆ ಆಗಲು ಇಂತಹ ಆರ್ಥಿಕ ಉದಾರೀಕರಣವು ಒತ್ತಾಸೆಯನ್ನು ಕೊಡುತ್ತದೆ.

'ಬ್ಯಾಂಕ್‌ಗಳು ಬಂಪರ್‌ಗೊಳ್ಳುವ ಯೋಜನೆ'ಗಳ ಮೂಲಕ ಈಗ ಗ್ರಾಹಕರನ್ನು ಆಕರ್ಷಿಸುವ ಸ್ಪರ್ಧೆಗಳಲ್ಲಿ ತೊಡಗಿವೆ. ವಸ್ತುಗಳು ನಿಮಗೆ ಅಗತ್ಯವಿಲ್ಲದಿದ್ದರೂ ಸಬ್ಸಿಡಿ ಸಂಸ್ಕೃತಿ, ಸಾಲ ಸಂಸ್ಕೃತಿ, ದರ ಇಳಿತಾಯದ ಯೋಜನೆ, ಬಂಪರ್ ಕೊಳ್ಳುವ ಯೋಜನೆ – ಇವೆಲ್ಲವೂ ವಸ್ತುಗಳನ್ನು ಹೆಚ್ಚು

ಹೆಚ್ಚು ಕೊಂಡುಕೊಳ್ಳಲು ಪ್ರಚೋದನೆ ಕೊಡುತ್ತವೆ. ಹೀಗಾಗಿ ಈಗ ಹಣ ಧಾರಾಳವಾಗಿ ಮುಕ್ತವಾಗಿ ಚಲಾವಣೆಗೊಳ್ಳುತ್ತದೆ. ಹಣವನ್ನು ಖರ್ಚು ಮಾಡಲು ಎಲ್ಲ ರೀತಿಯ ಪ್ರೋತ್ಸಾಹ ಸಿಗುತ್ತಿದೆ. ಇದರಿಂದಾಗಿ ಜನರು ತಮ್ಮ ಅಗತ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ವಸ್ತುಗಳ ಗ್ರಾಹಕರಾಗುತ್ತಿದ್ದಾರೆ. ಆಹಾರ, ಬಟ್ಟೆ, ವಸತಿಯಂತಹ ಮನುಷ್ಯರ ಮೂಲಭೂತ ಅವಶ್ಯಕತೆಗಳು ಈಗ ಅಧಿಕ ಹಣ ವಿನಿಯೋಗದ ಜನಪ್ರಿಯ ಕ್ಷೇತ್ರಗಳು. ಹೊಟೇಲ್‌ಗಳು, ಬಾರ್ ರೆಸ್ಟೋರೆಂಟ್‌ಗಳು, ಮದ್ಯದಂಗಡಿಗಳು, ಬಟ್ಟೆ ಅಂಗಡಿಗಳು, ಮನೆಗಳ ಅಲಂಕಾರ ಸಾಮಗ್ರಿಗಳ ಅಂಗಡಿಗಳು, ಬ್ಯೂಟಿ ಪಾರ್ಲರ್‌ಗಳು, ಇತ್ಯಾದಿ ಯಾವುದೇ ನಗರದಲ್ಲಿ ನೋಡಿದರೂ ಇಂತಹ ಅನೇಕ ಸ್ಥಳಗಳು ಸದಾ ಗ್ರಾಹಕರಿಂದ ತುಂಬಿರುತ್ತವೆ. ಅದೇ ರೀತಿ ಔಷಧದ ಅಂಗಡಿಗಳು, ಆಸ್ಪತ್ರೆಗಳು ಕೂಡಾ ಯಾವಾಗಲೂ ತುಂಬಿತುಳುಕುತ್ತಿರು-ತ್ತವೆ. ಹಸಿವು ಇಲ್ಲದಿದ್ದರೂ ತಿನ್ನುವ, ಬಾಯಾರಿಕೆ ಆಗದಿದ್ದರೂ ಕುಡಿಯುವ ಪ್ರವೃತ್ತಿ ಹೆಚ್ಚಾಗಲು, ಹಣವನ್ನು ಖರ್ಚು ಮಾಡುವ ಧೋರಣೆಗೆ ಪರೋಕ್ಷವಾಗಿ ಸಿಕ್ಕಿರುವ ಬೆಂಬಲ ಕಾರಣ. ಇದು ಆರ್ಥಿಕ ಉದಾರೀಕರಣದಿಂದ ಬಂದದ್ದು. ನಾಲ್ಕು ಬಟ್ಟೆಗಳು ಸಾಕಾಗುವ ಸ್ಥಿತಿಯಲ್ಲಿ ೪೦ ಬಟ್ಟೆಗಳನ್ನು ಕೊಳ್ಳುವ ಪ್ರವೃತ್ತಿ ಹೆಚ್ಚಾಗುತ್ತಿದೆ. ಚಿಕ್ಕ ಕುಟುಂಬ ಒಂದು ಇದ್ದರೂ ಅರಮನೆಯಂತಹ ವೈಭವೋಪೇತ ಸೌಧಗಳನ್ನು ನಿರ್ಮಿಸುವುದು ಆಧುನಿಕ ಸಮಾಜದ ಪ್ರವೃತ್ತಿಯೆಂದು ಭಾವಿಸಲಾಗುತ್ತಿದೆ.

ಲೌಕಿಕ ಬದುಕಿನ ಲೋಲುಪ ಪ್ರವೃತ್ತಿಯ ಬಗೆಗೆ ತಿರಸ್ಕಾರವನ್ನು ಪ್ರಕಟಿಸಬೇಕಾದ ಧಾರ್ಮಿಕ ಸಂಸ್ಥೆಗಳು ಮತ್ತು ಮಠಗಳು ಚಿನ್ನದ, ಬೆಳ್ಳಿಯ, ಸಂಪತ್ತಿನ ಕ್ರೋಢೀಕರಣ ಮತ್ತು ಪ್ರದರ್ಶನವನ್ನು ತಮ್ಮ ಹೆಮ್ಮೆಯೆಂದು ಕೊಂಡಾಡಲು ಆರಂಭಿಸಿವೆ. ಚಿನ್ನದ ಕಿರೀಟ, ಬೆಳ್ಳಿಯ ರಥ, ಅಮೃತಶಿಲೆಯ ದೇವಾಲಯಗಳು, ಬಾಜಾ ಭಜಂತ್ರಿಯ ಮೆರವಣಿಗೆಗಳು - ದೇವಾಲಯಗಳ, ಮಠಗಳ ಸಂಸ್ಕೃತಿ-ಯಾಗುತ್ತಿವೆ. ಭೂತದ ಗುಡಿಗಳು ಮತ್ತು ಉತ್ಸವಗಳು ದೊಡ್ಡ ಮೊತ್ತದ ಹಣದ ಪ್ರಮಾಣದಿಂದಾಗಿ ವ್ಯಾಪಾರೀ ಸಂಸ್ಕೃತಿಯ ಅಸಹ್ಯ ಪ್ರದರ್ಶನದ ರೂಪಗಳಾಗು-ತ್ತಿವೆ. ಧನವಂತರು ಇಂತಹ ಉತ್ಸವಗಳಿಗಾಗಿ ಖರ್ಚು ಮಾಡುತ್ತಿರುವ ಲಕ್ಷ ಲಕ್ಷಗಳು ದೈವ ಭಕ್ತಿಯ ಅತ್ಯುನ್ನತ ಅಭಿವ್ಯಕ್ತಿಗಳು ಎನ್ನುವ ಗೌರವಕ್ಕೆ ಪಾತ್ರವಾಗುತ್ತಿವೆ. ತಮ್ಮ ದುಡಿಮೆಯ ಸಂಪತ್ತನ್ನು ತಮ್ಮ ಆತ್ಮ ತೃಪ್ತಿಗಾಗಿ ಖರ್ಚು ಮಾಡುತ್ತಿದ್ದೇವೆ ಎಂದು ಯಾರಾದರೂ ಹೇಳಿದರೆ ಇಂತಹ ಸಂಪತ್ತಿನ ಪ್ರದರ್ಶನ ಯಾಕೆ ಎನ್ನುವುದು ಅರ್ಥವಾಗದ ಸಂಗತಿ. ತೈಮೋನ್ ತನ್ನ ಪ್ರಜೆಗಳಿಗಾಗಿ, ಸೈನ್ಯಕ್ಕಾಗಿ, ಕವಿಕಲಾವಿದರಿಗಾಗಿ, ಸ್ನೇಹಿತರಿಗಾಗಿ ಖರ್ಚು ಮಾಡಿದ ರೀತಿಗಿಂತ ಇಂತಹ ಖರ್ಚುಗಳು ಗುಣಾತ್ಮಕವಾಗಿ ಭಿನ್ನ ಎಂದು ಅನ್ನಿಸುವುದಿಲ್ಲ.

ತೈಮೋನ್‌ನಂತಹ ಶ್ರೀಮಂತನೊಬ್ಬನಿಗೆ ಮಾತ್ರ ಇಂತಹ ದುರಂತ ಸಂಭವಿಸುತ್ತದೆ ಎನ್ನುವುದು ನನ್ನ ಆತಂಕಕ್ಕೆ ಕಾರಣವಲ್ಲ. ತೈಮೋನ್‌ನ ಸಂಸ್ಕೃತಿ ಪ್ರಭುತ್ವಾತ್ಮಕವಾಗಿರುವಾಗಲೇ ಲಕ್ಷಾಂತರ ಮಂದಿ ಜನಸಾಮಾನ್ಯರು ಆ ರೀತಿ ಬದುಕಲಾರದೆ, ಆದರೆ ಬದುಕಲು ಆಸೆಪಟ್ಟು ಅಂತಹ ವ್ಯವಸ್ಥೆಯ ಬಲಿಪಶು-ಗಳಾಗುತ್ತಾರೆ. ಹಣದುಬ್ಬರವನ್ನು ಅರ್ಥಶಾಸ್ತ್ರಜ್ಞರು ದೇಶದ ಅರ್ಥವ್ಯವಸ್ಥೆಯ ಪ್ರಗತಿಯ ಲಕ್ಷಣ ಎಂದು ಎಷ್ಟೇ ಹೇಳಿದರೂ, ನಿಜ ಬದುಕಿನಲ್ಲಿ ದಿನದ ಖರ್ಚಿಗೆ ಬೇಕಾದ ವಸ್ತುಗಳನ್ನು ತನ್ನ ಮಿತ ಆದಾಯದಲ್ಲಿ ಕೊಂಡುಕೊಳ್ಳಲಾರದೆ ಜನರು ದಿನದಿನವೂ ಸಂಕಟಪಡುತ್ತಿದ್ದಾರೆ. ಇವರ ಪಾಲಿಗೆ ವಸ್ತುಗಳ ಬೆಲೆ ಏರಿಕೆ ಒಂದು ಆಘಾತವಾದರೆ, ಅನೇಕರು ಸ್ವಚ್ಛಂದವಾಗಿ ಮಿತಿಮೀರಿ ಇಂತಹ ವಸ್ತುಗಳನ್ನು ಕೊಳ್ಳುತ್ತಿರುವ ಪರಿಸರದಲ್ಲಿ ತಾವು ಬದುಕಬೇಕಾಗಿರುವುದು ಇನ್ನೊಂದು ಆಘಾತ. ಇಂತಹ ಕುಟುಂಬಗಳ ಮಕ್ಕಳಿಗೆ ಅವಮಾನದ, ಹೆಂಗಸರಿಗೆ ಮೂಕ ಅತೃಪ್ತಿಯ. ಗಂಡಸರಿಗೆ ಅಸಹನೆಯ ಇಂತಹ ಪರಿಸರ ಹೀಗೆಯೇ ಮುಂದುವರಿದರೆ ನಮ್ಮ ದೇಶವು ತೈಮೋನ್‌ನ ದುರಂತದ ಬಳಿಕದ 'ಅಥೆನ್ಸ್' ಆಗಬಹುದೇ ಎನ್ನುವ ಭಯ ನಮ್ಮನ್ನು ಕಾಡುತ್ತದೆ. ಆರ್ಥಿಕ ಉದಾರೀಕರಣದ 'ಮನಮೋಹಕ' ಹೊರ ಕವಚದ ಮನಮೋಹನ ಸಿಂಗರ ಈ ಬಜೆಟ್ ಪ್ರತಿಪಾದಿಸುವದು 'ಅರ್ಥ'ದ ಅರ್ಥ (meaning) ವನ್ನು ಮರು ವಿಮರ್ಶೆ ಮಾಡುವುದು ಇಂದಿನ ಜರೂರಿನ ಅಗತ್ಯ.

ಸೌಜನ್ಯ : **ಮುಂಗಾರು**

ಡಂಕೆಲ್ ಮತ್ತು ಕಾಪಿರೈಟ್

೧೯೯೨

ಕವಿ ರವೀಂದ್ರನಾಥ ಠ್ಯಾಗೂರರ ಬರಹಗಳ ಎಲ್ಲಾ ಹಕ್ಕುಗಳನ್ನು ಹೊಂದಿದ ವಿಶ್ವಭಾರತಿ ಸಂಸ್ಥೆಗೆ ಮತ್ತೆ ಹತ್ತು ವರ್ಷಗಳ ಕಾಲ ಈ ಹಕ್ಕನ್ನು ಉಳಿಸಿಕೊಳ್ಳಲು ಕೇಂದ್ರ ಸರ್ಕಾರ ಅನುಮತಿ ಕೊಟ್ಟಾಗ 'ಕಾಪಿರೈಟ್ ಕಾಯಿದೆ'ಯ ಬಗ್ಗೆ ಸಾಹಿತಿ ಕಲಾವಿದರು ದೊಡ್ಡ ಪ್ರತಿಭಟನೆ ನಡೆಸಿದರು.

ಸತ್ಯಜಿತ್‌ರೇ, ಮಹಾಶ್ವೇತಾದೇವಿ, ಮೃಣಾಲ್‌ಸೇನ್, ಅಶೋಕ್‌ಮಿತ್ರ, ಸುಕುಮಾರಸೇನ್, ಶಂಭೂಮಿಶ್ರ, ಸುಭಾಸ್ ಮುಖೋಪಾಧ್ಯಾಯ, ಅಮಿಯಾಬಗ್ಚಿ ಮುಂತಾದ ೫೧ ಮಂದಿ ವಿವಿಧ ಕ್ಷೇತ್ರಗಳ ಗಣ್ಯರು ಹತ್ತು ವರ್ಷಗಳ ಕಾಲ ಕಾಪಿರೈಟ್ ಹಕ್ಕನ್ನು ವಿಸ್ತರಿಸುವ ಕ್ರಮ ಸಾಹಿತ್ಯಲೋಕದ ಮೇಲೆ ನಡೆದ ದೊಡ್ಡ ಹಲ್ಲೆ ಎಂದು ಬಣ್ಣಿಸಿದ್ದರು.

ಭಾರತ ಕಾಪಿರೈಟ್ ಒಬ್ಬ ಲೇಖಕನ ಜೀವಮಾನ ಹಾಗೂ ನಂತರ ೫೦ ವರ್ಷಗಳ ವರೆಗೆ ಅವರ ಬಂಧುಗಳಿಗೆ ಕಾಪಿರೈಟ್ ಹಕ್ಕನ್ನು ಅನುಭವಿಸಲು ಅವಕಾಶ ನೀಡಿದೆ. 'ಬರ್ನ್ ಸಮಾವೇಶ' ಎಂದೇ ಹೆಸರಾದ ಬರ್ನ್‌ನಲ್ಲಿ ನಡೆದ ಅಂತರ್ರಾಷ್ಟ್ರೀಯ ಕಾಪಿರೈಟ್ ಸಮಾವೇಶ ಲೇಖಕನ ಜೀವಮಾನ + ೫೦ ವರ್ಷಗಳನ್ನೇ ಮಾಪರಿ-ಯನ್ನಾಗಿಸಿದೆ.

ಅಗಸ್ಟ್ ೮,೧೯೯೧ಕ್ಕೆ ಠ್ಯಾಗೂರರು ಮರಣಹೊಂದಿ ೫೦ ವರ್ಷಗಳಾಗುತ್ತವೆ. ಅಂದರೆ ಆ ವರ್ಷ ವಿಶ್ವಭಾರತಿಗಿದ್ದ ಕಾಪಿರೈಟ್ ಹಕ್ಕು ಮುಗಿದು ೧೯೯೨ ರಿಂದ ಈ ಹಕ್ಕು ಸಾರ್ವಜನಿಕರಿಗೆ ಮುಕ್ತವಾಗಬೇಕಿತ್ತು. ಆ ಮಧ್ಯೆ ವಿಶ್ವಭಾರತಿ ಸಂಸ್ಥೆ ಲಾಬಿ ನಡೆಸಿದ ಕಾರಣ ಕೇಂದ್ರ ಸರ್ಕಾರ ಈ ಎಲ್ಲ ಗಣ್ಯರ, ಪ್ರಕಾಶಕರ ಪ್ರತಿಭಟನೆಗೆ ಕಿವಿಗೊಡದೆ ತಾನೇ ನಿರ್ಮಿಸಿದ ಕಾಯಿದೆಯನ್ನು ಉಲ್ಲಂಘಿಸಿತು. ವಿಶ್ವಭಾರತಿಗೆ ಮತ್ತೆ ಹತ್ತು ವರ್ಷಗಳ ಕಾಲ ಕಾಪಿರೈಟ್ ಹಕ್ಕು ಅನುಭವಿಸುವ ಅವಕಾಶ ಸಿಕ್ಕಿತು.

ಸರ್ಕಾರದ ಈ ಕ್ರಮ ಓದುಗರಿಗೆ ನೀಡಿರುವ ದೊಡ್ಡ ಪೆಟ್ಟು ಎಂದು ಬಣ್ಣಿಸಿದ ಈ ಗಣ್ಯರು ಮತ್ತು ಹತ್ತು ವರ್ಷಗಳ ಕಾಲ ಟ್ಯಾಗೂರರ ಕೃತಿಗಳನ್ನು ಓದುಗರಿಂದ ಬಚ್ಚಿಡುತ್ತಿದೆ ಎಂದು ಆರೋಪಿಸಿದ್ದರು ಕವಿ ರವೀಂದ್ರರು ಈ ಕಾಯಿದೆಯಿಂದಾಗಿ ಓದುಗರಿಗೆ ದಕ್ಕದೇ ಹೋಗಿಬಿಡುತ್ತಾರೆ. ಮಾತ್ರವಲ್ಲ, ಅವರನ್ನು ಕುರಿತು, ಅವರ ಕೃತಿಗಳನ್ನು ಕುರಿತು ಯಾವುದೇ ಚಲನಚಿತ್ರ ಡಾಕ್ಯುಮೆಂಟರಿಗಳನ್ನು ತಯಾರಿಸಲೂ ಸಾಧ್ಯವಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಟ್ಯಾಗೂರರ ಕೃತಿಗಳನ್ನು ಸಮಕಾಲೀನ ವಿಮರ್ಶೆಗೆ ಒಳಪಡಿಸಲು ಆಗುವುದಿಲ್ಲ ಎಂದಿದ್ದರು. ಟ್ಯಾಗೂರರ ಕೃತಿಗಳು ಪ್ರಾದೇಶಿಕ ಭಾಷೆಗಳಿಗೆ ಭಾಷಾಂತರಗೊಳ್ಳುತ್ತಿಲ್ಲ. ಹೀಗಾಗಿ ಟ್ಯಾಗೂರ್ ಜನರನ್ನು ತಲುಪದಿರುವ ವ್ಯವಸ್ಥಿತ ಸಂಚು ಈ ಕಾಯಿದೆಯ ಹಿಂದಿದೆ ಎಂದಿದ್ದರು. ರವೀಂದ್ರನಾಥ ಟ್ಯಾಗೂರರ ಕೃತಿಗಳನ್ನು ಅಚ್ಚುಮಾಡುವಾಗಲೂ ವಿಶ್ವಭಾರತಿ ಅತ್ಯಂತ ಬೇಜವಬ್ದಾರಿಯಾಗಿ ವರ್ತಿಸಿದೆ. ೧೯೬೫ರಲ್ಲಿ ಪ್ರಕಟಿಸಿದ ಟ್ಯಾಗೂರರ ಸಮಗ್ರ ಬರಹಗಳ ನಂತರವೂ ಟ್ಯಾಗೂರರ ನೂರಾರು ಲೇಖನಗಳು ಉಳಿದಿವೆ. ನಂತರದ ೨೬ ವರ್ಷಗಳಲ್ಲೂ ಈ ಬರಹಗಳನ್ನು ಸೇರಿಸುವ ಪ್ರಯತ್ನವನ್ನು ಮಾಡಿಲ್ಲ ಎಂದರೆ ವಿಶ್ವಭಾರತಿ ಟ್ಯಾಗೂರರ ಕೃತಿಗಳನ್ನು ಸರಿಯಾಗಿ ಓದುಗರಿಗೆ ಮುಟ್ಟಿಸುತ್ತಿಲ್ಲ ಎಂದೇ ಅರ್ಥ.

ಕೇಂದ್ರ ಸರ್ಕಾರ ನಡೆಸಿದ ಈ ಹಸ್ತಕ್ಷೇಪದ ವಿರುದ್ಧ ಜಿನೇವಾದಲ್ಲಿ ನಡೆಯಲಿದ್ದ ಅಂತರರಾಷ್ಟ್ರೀಯ ಪ್ರಕಾಶಕರ ಕಾಂಗ್ರೆಸ್‌ಗೂ ದೂರು ಒಯ್ಯಲು ಭಾರತೀಯ ಪ್ರಕಾಶಕರು ನಿರ್ಧರಿಸಿದರು.

೧೯೯೪

ಈ ವಿವಾದ ಎದ್ದ ಕೇವಲ ಎರಡು ವರ್ಷಗಳಲ್ಲಿ ಮತ್ತೊಂದು ಆಘಾತವನ್ನು ಸಾಹಿತ್ಯ, ಸಾಂಸ್ಕೃತಿಕ ಲೋಕ ಎದುರಿಸಬೇಕಾಗಿ ಬಂದಿದೆ. ಹತ್ತು ವರ್ಷಗಳ ಕಾಲ ಕಾಪಿರೈಟ್ ಹಕ್ಕನ್ನು ವಿಸ್ತರಿಸಿ ಸಾಹಿತಿ ಕಲಾವಿದರ ಪ್ರತಿಭಟನೆ ಎದುರಿಸಿದ್ದ ಸರ್ಕಾರ ಈಗ ಈ ಹಕ್ಕನ್ನು ೨೦ ವರ್ಷಗಳಿಗೆ ವಿಸ್ತರಿಸಿದೆ.

ಅಷ್ಟೇ ಅಲ್ಲದೆ ೧೯೫೭ರಲ್ಲಿ ರೂಪಿಸಿದ್ದ ಭಾರತದ ಕಾಪಿರೈಟ್ ಕಾಯಿದೆ ಬ್ರಿಟಿಷ್ ಸರ್ಕಾರದ ಕಾಪಿರೈಟ್ ಕಾಯಿದೆಯದೇ ತದ್ರೂಪು ಎಂದು ವರ್ಣಿಸಿ ಸಮಗ್ರ ತಿದ್ದುಪಡಿ ತಂದಿದೆ.

೧೯೫೭ರ ಕಾಯಿದೆಗೆ ೧೯೮೩,೧೯೮೪ ರಲ್ಲಿ ತಿದ್ದುಪಡಿ ತಂದು ಕಾಯಿದೆಯನ್ನು ಸಾಕಷ್ಟು ಭಾರತೀಕರಣ ಗೊಳಿಸಿದ್ದರೂ ಸಹಾ ೧೯೯೪ರಲ್ಲಿ ಈ ತಿದ್ದುಪಡಿ ಅವಶ್ಯಕತೆ

ಇತ್ತೆ? ೧೯೫೭ರ ಈ ತಿದ್ದುಪಡಿ ಈ ಹಿಂದಿನ ಕಾಯಿದೆಯನ್ನು ಬಹುತೇಕ ಬಲಗೊಳಿಸಿದೆ ಏಕೆ? ಎಂಬ ಪ್ರಶ್ನೆ ಈಗ ನಮ್ಮ ಮುಂದಿದೆ.

ಪ್ರಧಾನಿ ನರಸಿಂಹರಾವ್ ಅವರು ತಮ್ಮ 'ಚಾರಿತ್ರಿಕ' ಅಮೇರಿಕಾ ಪ್ರವಾಸಕ್ಕೆ ಹೊರಡುವ ಸ್ವಲ್ಪ ಮುನ್ನ ಈ ಕಾಪಿರೈಟ್ ಕಾಯಿದೆಗೆ ಸಹಿ ಮಾಡಿದ್ದಾರೆ ಎಂಬುದು ಈ ತಿದ್ದುಪಡಿಯ ಬಗ್ಗೆ ಮತ್ತಷ್ಟು ಗುಮಾನಿಯನ್ನು ಹುಟ್ಟುಹಾಕಿವೆ. ಈ ಮಧ್ಯೆ ಕಾಪಿರೈಟ್ ಕಾಯಿದೆಗೂ ಗ್ಯಾಟ ಒಪ್ಪಂದಕ್ಕೂ ಯಾವುದೇ ಸಂಬಂಧ ಇಲ್ಲ ಎಂದು ಮಾನವ ಸಂಪನ್ಮೂಲ ಖಾತೆಯ ಶಿಕ್ಷಣ ವಿಭಾಗದ ಹೆಚ್ಚುವರಿ ಕಾರ್ಯದರ್ಶಿ ಟಿ. ಎಸ್. ಚತುರ್ವೇದಿ ಅವರು 'ಸ್ವಯಂಪ್ರೇರಿತ' ನಿರಾಕರಣೆ ನೀಡುವುದರ ಮೂಲಕ ಈ ಗುಮಾನಿಯನ್ನು ಬಲಪಡಿಸಿದ್ದಾರೆ.

ಈ ಕಾಪಿರೈಟ್ ಕಾಯಿದೆಯ ತಿದ್ದುಪಡಿಯನ್ನು ಈಗಾಗಲೇ ಸುದ್ದಿ ಮಾಧ್ಯಮಗಳು 'ಚಾರಿತ್ರಿಕ' ಎಂದು ಬಣ್ಣಿಸಿವೆ. ಡಂಕೆಲ್ ಪ್ರಸ್ತಾವಗಳು ಪೇಟೆಂಟ್ ಮೂಲಕ ಮುಂದೊಡ್ಡಬಹುದಾದ ಆತಂಕಗಳ ಬಗ್ಗೆ ಕೃಷಿ ತಜ್ಞರು, ವಿಜ್ಞಾನಿಗಳು ಚಿಂತಿತ-ರಾಗಿದ್ದಾಗಲೇ 'ಸಹಿ ಮಾಡಿ ಇಲ್ಲವೇ ನಾಶವಾಗಿ' (ಸೈನ್ ಆರ್ ಪೆರಿಶ್) ಎಂಬ ಘೋಷಣೆ ನೀಡಿದ ಈ ಮಾಧ್ಯಮಗಳೇ ಕಾಪಿರೈಟ್ ತಿದ್ದುಪಡಿಯನ್ನೂ ವಿಶ್ವ-ದಲ್ಲಿಯೇ ಅತ್ಯಂತ ಬಿಗಿಯಾದ ಕಾಯಿದೆ ಎಂದು ಬಣ್ಣಿಸಿವೆ.

ಈ ಸಕ್ಕರೆಯ ಲೇಪದ ಹಿಂದಿರುವ ಕ್ವಿನೈನ್‌ನ ಕಹಿ ಗೊತ್ತಾಗುವುದು ನಂತರವೇ. ಕಾಪಿರೈಟ್ ಕಾಯಿದೆಗೆ ತಂದಿರುವ ತಿದ್ದುಪಡಿಯನ್ನು ಅರ್ಥೈಸಬೇಕಾದರೆ ಈ ತಿದ್ದುಪಡಿಯನ್ನು 'ಬಿಟ್ವೀನ್ ದಿ ಲೈನ್ಸ್' ಓದಿಕೊಂಡಾಗ ಮಾತ್ರವೇ ಸಾಧ್ಯ. ತಿದ್ದುಪಡಿ ಬಿಚ್ಚಿ ಹೇಳುತ್ತಿರುವುದಕ್ಕಿಂತ ಮುಚ್ಚಿ ಇಟ್ಟಿರುವುದು ಎಷ್ಟು ಎಂಬುದನ್ನು ಪರಿಶೀಲಿಸುವ ಪ್ರಯತ್ನಗಳು ಈಗ ಆರಂಭವಾಗಬೇಕಾಗಿದೆ.

ಕಾಪಿರೈಟ್‌ಗೆ ತಂದಿರುವ ತಿದ್ದುಪಡಿಯನ್ನು ಎಲ್ಲಾ ಕ್ಷೇತ್ರಗಳೂ ಸ್ವಾಗತಿಸುತ್ತಿರು-ವಾಗಲೇ ಎರಡು ಭಿನ್ನ ಹೇಳಿಕೆಗಳು ವ್ಯಕ್ತವಾಗಿವೆ. ನ್ಯಾಯಮೂರ್ತಿ ರಾಜೀವ್ ಧವನ್ 'ಈ ಕಾಪಿರೈಟ್ ತಿದ್ದುಪಡಿ ಗ್ಯಾಟ್‌ಗೆ ಬರೆದಿರುವ ಮುನ್ನುಡಿ' ಎಂದೇ ವರ್ಣಿಸಿದ್ದಾರೆ. ಧವನ್ ಪ್ರಕಾರ ಈ ತಿದ್ದುಪಡಿ ಕಂಪ್ಯೂಟರ್ ಕಾರ್ಯಕ್ರಮಗಳಲ್ಲಿ ಅಮೇರಿಕಾಗೆ ಮೂಗು ತೂರಿಸಲು ನೀಡಿರುವ ಸ್ವಾಗತ. ಅದೇ ವೇಳೆಗೆ ಈ ತಿದ್ದುಪಡಿ ಪ್ರಕಾಶಕರ ವಲಯದಿಂದ ವ್ಯಾಪಕ ವಿರೋಧವನ್ನು ಕಂಡಿದೆ. ಪ್ರಕಾಶನಕ್ಕೆ ಸಂಬಂಧಿಸಿದಂತೆ ಈ ಹಿಂದೆ ಇದ್ದ ಕಾಯಿದೆಯೇ ಸಾಕಷ್ಟು ಬಲವಾಗಿತ್ತು. ಹಾಗಿರುವಾಗ ಈ ತಿದ್ದುಪಡಿ ಏಕೆ? ಎಂದು ಅವರು ಪ್ರಶ್ನಿಸಿದ್ದಾರೆ.

ಈ ಎರಡೂ ಪ್ರಶ್ನೆಗಳನ್ನು ನಾವೀಗ ಪರಿಶೀಲಿಸೋಣ.

ಈಗ ಪೇಟೆಂಟ್‌ಗಳಿಗೆ ಸಂಬಂಧಪಟ್ಟ ಕಾನೂನುಗಳೇ ಅತ್ಯಂತ ವಿವಾದಾತ್ಮಕವಾಗಿದ್ದರೂ ಈಗ ವಿಶ್ವದಾದ್ಯಂತ ಹೆಚ್ಚುತ್ತಿರುವ ಕಂಪ್ಯೂಟರ್ ಸಾಫ್ಟ್‌ವೇರ್ ವ್ಯಾಪಾರದಲ್ಲಿ ಕಾಪಿರೈಟ್ ಕಾಯಿದೆ ಮಹತ್ವವನ್ನು ಗಳಿಸುತ್ತದೆ ಎನ್ನುತ್ತಾರೆ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಪ್ರೊ. ಬಿ. ಕೆ. ಚಂದ್ರಶೇಖರ್.

ವ್ಯಾಪಾರ ಸಂಬಂಧಿ ಬೌದ್ಧಿಕ ಹಕ್ಕುಗಳು (ಇಂಟಲೆಕ್ಚುಯಲ್ ಪ್ರಾಪರ್ಟಿ ರೈಟ್ಸ್-ಟ್ರಿಪ್ಸ್) ಮುಖ್ಯವಾಗಿ ನಾಲ್ಕು ವಿಧಗಳನ್ನು ಪ್ರಸ್ತಾಪಿಸುತ್ತದೆ. ಪೇಟೆಂಟ್, ಕಾಪಿರೈಟ್ ಜೊತೆಗೆ ಟ್ರೇಡ್‌ಮಾರ್ಕ್ ಮತ್ತು ಇನ್ವೆಂಟರ್ಸ್ ಸರ್ಟಿಫಿಕೇಟ್ (ಸಂಶೋಧನೆಗೆ ನೀಡುವ ಅರ್ಹತೆ). ಪೇಟೆಂಟ್‌ನ ಕಬಂಧ ಬಾಹುಗಳಡಿಯಲ್ಲಿ ಕಂಪ್ಯೂಟರ್ ಸಾಫ್ಟ್‌ವೇರ್ ಬರುವುದಿಲ್ಲ.

ಕಥೆ, ಕಾದಂಬರಿ. ಚಲನಚಿತ್ರ, ನಾಟಕ, ಕಲಾಕೃತಿ. ಸಂಗೀತದಲ್ಲಿನ ಹೊಸ ಆಲೋಚನೆಗಳನ್ನು ಕಾಪಿರೈಟ್ ರಕ್ಷಿಸುತ್ತದೆ. ಈ ಕಾಯಿದೆಯಡಿಯಲ್ಲಿ ೭೦ರ ದಶಕದಲ್ಲಿ ಕಂಪ್ಯೂಟರ್ ಸಾಫ್ಟ್‌ವೇರ್ ಸಹಾ ಸೇರಿತು. ಕಂಪ್ಯೂಟರ್ ಸಾಫ್ಟ್‌ವೇರನ್ನು ಕದಿಯುವುದರ ವಿರುದ್ಧ ರಕ್ಷಣೆಯನ್ನು ಈ ಕಾಯಿದೆಯಡಿಯಲ್ಲಿ ನೀಡಲಾಯಿತು.

ಕಾಪಿರೈಟ್ ಕಾಯಿದೆ, ೧೯೯೪ ಮುಖ್ಯವಾಗಿ ಗಮನ ಹರಿಸಿರುವುದು ಕಂಪ್ಯೂಟರ್ ಸಾಫ್ಟ್‌ವೇರ್‌ಗಳ ಬಗ್ಗೆ. ಇದುವರೆಗೂ ಸೃಜನಶೀಲ ಕೃತಿಯಂತೆ ರಕ್ಷಣೆ ಪಡೆಯುತ್ತಿದ್ದ ಕಂಪ್ಯೂಟರ್ ಪ್ರೋಗ್ರಾಂನ್ನು ಅದರಿಂದ ಬೇರೆ ಮಾಡಿ ಇದೇ ಮೊದಲ ಬಾರಿಗೆ ಪ್ರತ್ಯೇಕ ವಿಭಾಗದಡಿ ನಮೂದಿಸಲಾಗಿದೆ. ಮುಂದಿನ ದಶಕಗಳಲ್ಲಿ ಮಾಹಿತಿ ತಂತ್ರಜ್ಞಾನ ಉದ್ಯಮ ವಿಶ್ವವನ್ನು ಆಳಲಿದೆ. ಈ ಮಾಹಿತಿ ತಂತ್ರಜ್ಞಾನದ ಪ್ರಧಾನ ಅಂಗವೇ ಕಂಪ್ಯೂಟರ್ ಸಾಫ್ಟ್‌ವೇರ್ ಕಾಪಿರೈಟ್ ತಿದ್ದುಪಡಿಯ ಮುಖ್ಯ ಉದ್ದೇಶವೇ ಇದು. 'ಸೃಜನಶೀಲ' ಎಂದು ಪರಿಗಣಿಸಲ್ಪಟ್ಟಿದ್ದ ಕಂಪ್ಯೂಟರ್ ಪ್ರೋಗ್ರಾಂನ್ನು ಉದ್ಯಮವನ್ನಾಗಿಸುವುದು. ರಾಜೀವ್ ಧವನ್ ಅವರ ಅನುಮಾನ ಇರುವುದೂ ಇಲ್ಲಿಯೇ.

ಪೇಟೆಂಟ್ ಕಾಯಿದೆಯಡಿ ಬಗ್ಗು ಬಡಿಯಲಾಗದ ಭಾರತದ ಕಂಪ್ಯೂಟರ್ ತಂತ್ರಜ್ಞಾನವನ್ನು ಕಾಪಿರೈಟ್‌ವಲ್ಲಿಯೇ ಮಟ್ಟ ಹಾಕಲು ಕಾಪಿರೈಟ್ ಕಾಯಿದೆಗೆ ತಿದ್ದುಪಡಿ ತರಲು ಒತ್ತಡ ತಂದು ಯಶಸ್ವಿಯಾಗಿದೆ.

ಭಾರತದ ಪ್ರತಿಭಾವಂತರ ಮಿದುಳನ್ನು ಅಮೇರಿಕಾದ ಖಾಸಗಿ ಕಂಪನಿಗಳು ಎಗರಿಸುವ ರೀತಿಯನ್ನು ಪರಿಶೀಲಿಸಿದರೆ ಅಮೇರಿಕಾದ ಹುನ್ನಾರ ಇನ್ನಷ್ಟು ಅರ್ಥವಾಗ ಬಹುದು. 'ಸುಧಾ' ವಾರಪತ್ರಿಕೆಯ ಒಂದು ಲೇಖನ ನೋಡಿ :

'ವಿಧಾನಸೌಧದ ಸಮೀಪದ ಮಿಲ್ಲರ್ ರಸ್ತೆಗೆ ಬನ್ನಿ. ಟೆಕ್ಸಸ್ ಇನ್‌ಸ್ಟ್ರುಮೆಂಟ್ಸ್ (ಟಿಐ) ಎಂಬ ಹೆಸರಿನ ಒಂದು ಅಮೇರಿಕನ್ ಕಂಪನಿಯ ಶಾಖೆ ಇಲ್ಲಿದೆ. ಇಲ್ಲಿ ನಮ್ಮ ಯುವಕರು ಕಂಪ್ಯೂಟರ್ ಮುಂದೆ ಕುಳಿತು ಜಾಣ್ಮೆ-ತಾಳ್ಮೆ ಎರಡೂ ಬಳಸಿ ಸಾಫ್ಟ್‌ವೇರ್ ಪ್ರೋಗ್ರಾಂಗಳನ್ನು ಸೃಷ್ಟಿ ಮಾಡುತ್ತಾರೆ. ಮಿದುಳು ಶಕ್ತಿಯಿಂದ ರಚಿತವಾದ ಈ ಪ್ರೋಗ್ರಾಂಗಳನ್ನು ತರಂಗ ರೂಪದಲ್ಲಿ ಬಾಹ್ಯಾಕಾಶಕ್ಕೆ ಚಿಮ್ಮುತ್ತಾರೆ. ಅಲ್ಲೊಂದು ಉಪಗ್ರಹ ತೇಲುತ್ತಿದೆ. ಅದು ಈ ತರಂಗಗಳನ್ನು ನೇರವಾಗಿ ಅಮೇರಿಕಾದ ಟಿಐ ಕಂಪನಿಯ ಮುಖ್ಯ ಕಚೇರಿಗೆ ರವಾನೆ ಮಾಡುತ್ತವೆ. ಬೆಂಗಳೂರಿನಲ್ಲಿ ಬಟನ್ ಒತ್ತುತ್ತಿದ್ದಂತೆ ಅಲ್ಲಿನ ಕಂಪ್ಯೂಟರ್‌ನಲ್ಲಿ ಈ ಪ್ರೋಗ್ರಾಂಗಳು ಮರುಸೃಷ್ಟಿ ಆಗುತ್ತವೆ. ಅದನ್ನು ಅಮೇರಿಕಾದ ಜಾಣರು ಫ್ಲಾಪಿ ತಟ್ಟೆಗಳಲ್ಲಿ ಸಂಗ್ರಹಿಸಿ ಲೇಬಲ್ ಹಚ್ಚಿ ಬೇರೆ ದೇಶಗಳಲ್ಲಿ ಮಾರುತ್ತಾರೆ.

'ಇಷ್ಟೆಲ್ಲ ಸುತ್ತು ಬಳಸು ಬಾಹ್ಯಾಕಾಶ ಮಾರ್ಗದಲ್ಲಿ ಸರ್ಕಸ್ ಮಾಡುವ ಬದಲು ನಮ್ಮೂರಿನ ಈ ಪ್ರತಿಭಾವಂತರನ್ನೇ ಅಮೇರಿಕಾಗೆ ಒಯ್ಯಬಹುದಿತ್ತಲ್ಲ? ಅದು ದುಭಾರಿ ವೆಚ್ಚದ ಕೆಲಸ. ಈ ಹುಡುಗರಿಗೆ ದಾರಿ ಖರ್ಚು ಕೊಡಬೇಕು. ಅಲ್ಲಿಗೆ ಹೋದ ಮೇಲೆ ಡಾಲರ್‌ನಲ್ಲಿ ಪ್ರತೀ ತಿಂಗಳೂ ೨೫-೩೦ ಸಾವಿರ ರೂ. ಸಂಬಳ ನೀಡಬೇಕು. ವಸತಿ-ವಿಮೆ-ರಜೆ-ಆ ಭತ್ಯೆ ಈ ಭತ್ಯೆ ಕೊಡಬೇಕು. ಈ ಎಲ್ಲ ಭಯವನ್ನು ದೂರವಿಡಲೆಂದೇ ಈ ವ್ಯವಸ್ಥೆ. ನಮ್ಮ ಯುವಜನರ ದೇಹ ಮಾತ್ರ ಇಲ್ಲಿರುತ್ತದೆ. ಜೊತೆಗೆ ದೇಹಕ್ಕೆ ಸಂಬಂಧಿಸಿದ ಎಲ್ಲ ರೀತಿಯ ಸಮಸ್ಯೆಗಳೂ ಭಾರತದಲ್ಲಿಯೇ ಇರುತ್ತದೆ.

'ಇದು ಶೌರ್ಯ ಅಲ್ಲವೇ ? ಅಲ್ಲವೇ ಅಲ್ಲ. ಹುಡುಗರಲ್ಲಿ ನಡೆಯುವ ಕೆಲಸ ಇದು. ಮೇಲಾಗಿ ಈ ಕಂಪನಿ ಭಾರತ ಸರ್ಕಾರದ ಅನುಮತಿ ಪಡೆದೇ ಈ ಕೆಲಸ ಮಾಡುತ್ತದೆ.'

ಹಾಗಾದರೆ ಕಾಪಿರೈಟ್ ತಿದ್ದುಪಡಿಯಿಂದ ಅಮೇರಿಕಾದ ಈ ದಂಧೆಗೆ ಲಾಭವೇನಿದೆ ? ೧೯೯೦ರ ಅಂಕಿ ಅಂಶಗಳ ಪ್ರಕಾರವೇ ಕೇವಲ ಬೆಂಗಳೂರಿನಲ್ಲಿಯೇ ಫ್ರಾನ್ಸ್, ಇಟಲಿ ದೇಶಗಳ ಕಂಪನಿಗೂ ಸೇರಿದಂತೆ ೧೫ ಕಂಪ್ಯೂಟರ್ ಸಂಸ್ಥೆಗಳಿವೆ. ಅಮೇರಿಕಾದ ಕಂಪನಿಗಳಲ್ಲಿದ್ದ ಯುವಕರು ಈಗ ಈ ಕಂಪನಿಗಳಿಗೂ ವಲಸೆ ಹೋಗ

ತೊಡಗಿದ್ದಾರೆ. ಅಮೇರಿಕಾವ 'ಗುತ್ತಿಗೆ'ಯಾಗಿದ್ದ ಈ ಪ್ರತಿಭೆಗಳ ವಲಸೆಯಿಂದ ಈಗ ಈ ಕಂಪನಿಗಳಿಗೆ ಮೊದಲಿನಷ್ಟು ಲಾಭ ಇಲ್ಲ. ಈ ಐಡಿಯಾಗಳು ಬೇರೆಯವರ ಪಾಲಾಗದಂತೆ ನಡೆಯಲು ಅಮೇರಿಕಾ ಹಿಡಿದು ನಿಂತಿರುವ ಬೀಗ ಹಾಕುವ ವ್ಯವಸ್ಥೆಯೇ 'ಕಾಪಿರೈಟ್'.

ಅಮೇರಿಕಾದಲ್ಲಿ ಕಂಪ್ಯೂಟರ್ ಪ್ರೋಗ್ರಾಂಗಳನ್ನು ಬಾಡಿಗೆಗೆ ನೀಡುವುದು ಬಹು ಕೋಟಿ ಡಾಲರುಗಳ ದಂಧೆ. ಭಾರತ ತಯಾರಿಸಿದ ಪ್ರೋಗ್ರಾಂಗಳು ಪುನಃ ಭಾರತಕ್ಕೆ ಮಾರಲ್ಪಡುತ್ತವೆ– ಅಮೇರಿಕಾದ ಮುದ್ರೆಯೊಂದಿಗೆ. ಭಾರತದ 'ವಿಶ್ವದಲ್ಲಿಯೇ ಅತ್ಯಂತ ಬಿಗಿ' ಕಾಪಿರೈಟ್ ಕಾಯಿದೆ ಪ್ರಕಾರ ಎರಡು ಮಾತಿಲ್ಲದಂತೆ ಅವರು ಹೇಳುವ ರೇಟಿಗೆ ನಮ್ಮದೇ ಕಾರ್ಯಕ್ರಮ ಕೊಂಡುಕೊಳ್ಳಬೇಕು. ಹಾಗಾಗಿಯೇ ಅಮೇರಿಕಾಗೆ ಪೇಟೆಂಟ್‌ಗೆ ತರಬೇಕಾದ ತಿದ್ದುಪಡಿ ಎಷ್ಟು ಮುಖ್ಯವೋ ಕಾಪಿರೈಟ್‌ಗೆ ತಿದ್ದುಪಡಿ ತರುವುದೂ ಅಷ್ಟೇ ಮುಖ್ಯ.

ಇದೇ ಸಂದರ್ಭದಲ್ಲಿ ಮತ್ತೊಂದು ಕಡೆಯಿಂದ ವಿಶ್ವ ಬೌದ್ಧಿಕ ಆಸ್ತಿಹಕ್ಕು ಸಂಸ್ಥೆ (WIPO) ಕಾಪಿರೈಟ್ ಅವಧಿಯನ್ನು ೭೦ ವರ್ಷಕ್ಕೆ ವಿಸ್ತರಿಸಬೇಕೆಂದು ಲಾಬಿ ನಡೆಸತೊಡಗಿದೆ. ಈ WIPO ವಿಶ್ವಸಂಸ್ಥೆಯ ವಿಶೇಷ ಅಂಗವಾದರೂ ಸಹ ಡಂಕೆಲ್ ಪ್ರಸ್ತಾಪಗಳನ್ನು ಹೇರುವುದರಲ್ಲಿ ನಡೆಸಿರುವ ಪಾತ್ರ ಸ್ಪಷ್ಟವಾಗಿದೆ. ಸೋವಿಯತ್ ದೇಶದ ಪತನದೊಂದಿಗೆ ಸೂಪರ್‌ಪವರ್ ಆಗಿರುವ ಅಮೇರಿಕಾದ ಬಾಲಬಡುಕ ಸಂಸ್ಥೆಯಾಗಿ ಬದಲಾಗಿರುವ ಸಂದರ್ಭದಲ್ಲಿ WIPO ಡಂಕೆಲ್ ಪ್ರಸ್ತಾಪಕ್ಕೆ ಸಹಿ ಹಾಕಲು ಇತರೆ ರಾಷ್ಟ್ರಗಳ 'ಮನ ಒಲಿಸುವ' ಮಧ್ಯವರ್ತಿ ಸಂಸ್ಥೆಯಾಗಿ ಬದಲಾಗಿದೆ.

ಈ ಅಂಶ ಈಗ ಗುಟ್ಟಾಗಿಯೇನೂ ಉಳಿದಿಲ್ಲ. ರಾಜೀವ ಗಾಂಧಿಯವರಿಗೆ ತಂತ್ರಜ್ಞಾನ ಸಲಹೆಗಾರರಾಗಿದ್ದ ಸ್ಯಾಂಪಿಟ್ರೋಡಾರವರೇ ಅಮೇರಿಕಾ, ಗ್ಯಾಟ್, WIPO ಪ್ಯಾರಿಸ್ ಸಮಾವೇಶದಲ್ಲಿ ಭಾಗವಹಿಸುವಂತೆ ಭಾರತವನ್ನು ಒತ್ತಾಯ ಮಾಡಿತ್ತು ಎಂಬುದನ್ನು ಹೊರಗೆಡಹಿದ್ದಾರೆ.

ಇದೇ WIPO ಕಾಪಿರೈಟ್ ಅವಧಿಯನ್ನು ೭೦ ವರ್ಷಕ್ಕೆ ವಿಸ್ತರಿಸುವಂತೆ ಲಾಬಿ ನಡೆಸುತ್ತಿರುವ ಅರ್ಥ ಏನು ? ಎಂಬುದು ಈಗ ಬೆಳಕಿಗೆ ಬರಬೇಕಾಗಿದೆ.

ಅಮೇರಿಕಾದ ಸ್ವಾಮ್ಯವನ್ನು ೭೦ ವರ್ಷ ವಿಸ್ತರಿಸುವ ಮೂಲಕ ಮುಂದಿನ ದಶಕಗಳ ಮಾಹಿತಿ ತಂತ್ರಜ್ಞಾನವನ್ನು ಭಾರತದಿಂದ ವಂಚಿಸುತ್ತಿರುವಾಗಲೇ ರವೀಂದ್ರನಾಥ

ಠ್ಯಾಗೂರರ ಪುಸ್ತಕಗಳ ಕಾಪಿರೈಟ್ ವಿವಾದದಲ್ಲಿ ಸಾಹಿತಿ ಕಲಾವಿದರು ಮುಂದಿಸಿದ 'ಭಯ'ಗಳು ಮತ್ತಷ್ಟು ಗಂಭೀರ ಸ್ವರೂಪ ಪಡೆಯಲಿವೆ.

ಒಂದು ಸಂಸ್ಥೆ ಒಬ್ಬ ಪ್ರಮುಖ ಸಾಹಿತಿಯ ಕೃತಿಗಳ ಕಾಪಿರೈಟ್ ಪಡೆಯುವುದರ ಮೂಲಕ ಹೇಗೆ ಆ ಸಾಹಿತಿ ಜನರನ್ನು ಮುಟ್ಟದೇ ಹೋಗಬಹುದು ಎಂಬುದನ್ನು ಸಾಹಿತಿ ಕಲಾವಿದರು ಹೊರಗಿಟ್ಟಿದ್ದರು. ಆಗ ಕೇವಲ ಠ್ಯಾಗೂರ ಮಾತ್ರವಲ್ಲ ಉತ್ತಮ ಸಾಹಿತ್ಯ ಜನರಿಂದ ದೂರವೇ ಉಳಿಯಬಹುದು. ಲಾಭದ ಆಸೆಗಾಗಿ ಪುಸ್ತಕಗಳ ಬೆಲೆ ಸಿಕ್ಕಾಪಟ್ಟೆ ಏರಿಸಿ ನಿಜ ಓದುಗನನ್ನು ಈ ಕೃತಿಗಳು ತಲುಪದೇ ಶ್ರೀಮಂತರ ಶೋಕೇಸ್‌ಗಳಲ್ಲಿ ಪ್ರದರ್ಶನಕ್ಕಿಡುವ ಆಟಿಕೆಗಳಾಗುವ ಸಂಭವವೂ ಇದೆ.

ಈ ತಿದ್ದುಪಡಿಯ ಪರಿಣಾಮ ಜಾನಪದ ಸಂಶೋಧನೆ, ರಂಗಭೂಮಿ ಕ್ಷೇತ್ರಗಳನ್ನೂ ತಟ್ಟಲಿದೆ. ಪ್ರದರ್ಶಕನಿಗೆ ಹಕ್ಕು ಎನ್ನುವ ಸೋಗಿನಲ್ಲಿ ಯಾವುದೇ ರೀತಿಯ ದಾಖಲೀಕರಣ ಪ್ರಕ್ರಿಯೆಯನ್ನು ಅನುಭವಿಸಬೇಕಾಗಿ ಬರುತ್ತದೆ. ದಾಖಲೆ ಮತ್ತು ವಿಶ್ಲೇಷಣೆ ಮಾದರಿಯ ಮೇಲೆ ನಿಂತಿರುವ ಜಾನಪದ ಸಂಶೋಧನೆಗೆ ಇದರಿಂದ ಬೀಳುವ ಹೊಡೆತ ದೊಡ್ಡದು. ಯಾವುದೇ ಜಾನಪದ ಕುಣಿತಗಳ, ಮಾಹಿತಿದಾರನ ಆಡಿಯೋ, ವಿಡಿಯೋ ಕೂಡಾ ಮಾಡದ ಸ್ಥಿತಿ ಉಂಟಾಗುತ್ತದೆ.

ನಾಟಕಗಳ ಹಕ್ಕು ಹೆಚ್ಚಿದ ಕಾಪಿರೈಟ್ ಅವಧಿಯಿಂದಾಗಿ ಕೆಲ ಸಂಸ್ಥೆ, ವ್ಯಕ್ತಿಗಳ ತೆಕ್ಕೆಯಲ್ಲಿಯೇ ಉಳಿಯುತ್ತದೆ. ಹೇಗೆ ಚಲನಚಿತ್ರಗಳನ್ನು ತೆಗೆಯಲು ಸಾಧ್ಯ- ವಿಲ್ಲವೋ ಹಾಗೆಯೇ ನಾಟಕಗಳನ್ನೂ ಪ್ರದರ್ಶಿಸಲು ಸಾಧ್ಯವಾಗದೇ ಹೋಗ- ಬಹುದು. ನೂತನ ಕಾಪಿರೈಟ್ ಕಾಯಿದೆ ಮುಂದೆ ಒಡ್ಡಿರುವ ಮತ್ತೊಂದು ಆತಂಕ ವೆಂದರೆ ಒಂದು ನಾಟಕ ತಂಡ ಆಡಿದ ನಾಟಕವನ್ನೇ ಮತ್ತೊಂದು ತಂಡ ಆಡಬೇಕೆಂದಿದ್ದಲ್ಲಿ ಮರುಪ್ರಯೋಗದ ಹಕ್ಕನ್ನು ಆ ತಂಡದಿಂದ ಪಡೆಯಬೇಕು. ಇದಕ್ಕೆ ಸಾಕಷ್ಟು ಗೌರವ ಧನವನ್ನು ನೀಡಬೇಕು.

ಕಾಪಿರೈಟ್ ಕಾಯಿದೆಗೆ ತಂದಿರುವ ತಿದ್ದುಪಡಿಯ ಬಹುಭಾಗ ಇನ್ನೂ ಹೊರಬಿದ್ದಿಲ್ಲ. ಇಡೀ ತಿದ್ದುಪಡಿ ಇನ್ನೂ ಹಲವಷ್ಟನ್ನು ಬಿಚ್ಚಿಡುವ ಸಾಧ್ಯತೆ ಇದೆ.

ನೂತನ ಆರ್ಥಿಕ ನೀತಿಯಿಂದಾಗಿ ಇಂದು ಇಡೀ ಪುಸ್ತಕೋದ್ಯಮವೇ ಆತಂಕದ ಅಂಚಿನಲ್ಲಿದೆ. ರೂಪಾಯಿಯ ಅಪಮೌಲ್ಯೀಕರಣ ಪುಸ್ತಕಗಳು ಇರುವುದು ಕೊಂಡುಕೊಳ್ಳಲು ಅಲ್ಲ ಎನ್ನುವಂತೆ ಮಾಡಿವೆ. ಪುಸ್ತಕಗಳ ಬೆಲೆ ಕೈಗೆಟುಕದಂತಾಗಿ- ರುವುದು ಒಂದು ಕಾರಣವಾದರೆ ವಿದೇಶಿ ಪುಸ್ತಕಗಳ ಭಾರತೀಯ ಆವೃತ್ತಿಯಂತೂ

ಪುಸ್ತಕವನ್ನು ಮುಟ್ಟಲೂ ಪ್ರೇರೇಪಿಸುವುದಿಲ್ಲ. ಪುಸ್ತಕಗಳನ್ನು ಆಮದು ಮಾಡಿಕೊಳ್ಳಬೇಕಾದ ಪ್ರಕಾಶಕರು ರಿಸವ್ ಬ್ಯಾಂಕ್‌ನಲ್ಲಿ ನಾವು ಆಮದು ಮಾಡಿಕೊಳ್ಳಬೇಕಾದ ಪುಸ್ತಕಗಳ ಶೇ. ೧೩೩.೩೩ ಮೌಲ್ಯವನ್ನು ಠೇವಣಿಯಾಗಿ ಇರಿಸಬೇಕಾಗಿ ಬಂದಿದೆ. ಪ್ರಕಾಶಕರ ಪ್ರತಿಭಟನೆಗೆ ಸರ್ಕಾರ ಒಂದಷ್ಟು ತಗ್ಗಿದ್ದರೂ ಸಹಾ ಪುಸ್ತಕಗಳ ಬೆಲೆ ಇಳಿಸಲು ಸಾಧ್ಯವಾಗಿಲ್ಲ. ಪುಸ್ತಕಗಳಿಗೆ ಬಳಸುವ ಕಾಗದದ ಬೆಲೆಯೂ ಏರಿದೆ.

ಪುಸ್ತಕಗಳ ಬೆಲೆ ಏರಿಕೆ ಸಾಹಿತ್ಯ ಪ್ರಿಯರಿಗೆ ಎಷ್ಟು ಕಹಿಯಾಗಿದೆಯೋ ಸಂಶೋಧಕರಿಗೂ ಅಷ್ಟೇ ಆತಂಕವುಂಟು ಮಾಡಿದೆ. ಶೇ. ೯೯ ರಷ್ಟು ಪುಸ್ತಕಗಳನ್ನು ಆಮದು ಮಾಡಿಕೊಳ್ಳುವ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಗಾಬರಿಗೊಂಡಿದೆ. ನಮ್ಮ ಸಂವಹನ ವ್ಯವಸ್ಥೆಯೇ ಮುರಿದು ಬಿದ್ದಿದೆ ಎನ್ನುತ್ತಾರೆ ಭಾರತೀಯ ಅಂಕಿಅಂಶಗಳ ಸಂಸ್ಥೆಯ ನಿರ್ದೇಶಕ ಡಾ. ಎಂ.ಎಂ. ಗೋಪಿನಾಥ್.

ಹಳೆಯ ಪತ್ರಿಕೆಗಳಿಂದ ಮತ್ತೆ ನ್ಯೂಸ್‌ಪ್ರಿಂಟ್ ತಯಾರಿಸುವ ವಿಧಾನಕ್ಕೂ ಕೊಕ್ಕೆ ಬೀಳುತ್ತಿರುವುದರಿಂದ ಹಳೆಯ ಪತ್ರಿಕೆಯ ಬೆಲೆ ದಿಢೀರ್ ಕುಸಿತ ಕಾಣುವ ಪರಿಸ್ಥಿತಿಯೂ ಬರುತ್ತಿದೆ.

ಗ್ಯಾಟ್‌ಗೆ ಸ್ವಾಗತ ನೀಡುವ ಹುಮ್ಮಸ್ಸು ಅದರ ಪರಿಣಾಮವನ್ನು ಯಾವುದೆಲ್ಲಾ ರಂಗಗಳಲ್ಲಿ ಕಾಣಿಸಲು ಸಾಧ್ಯ ಎಂಬುದಕ್ಕೆ ಇವು ಸೂಚಿಯಾಗಿದೆ.

ಎಂ. ಎಸ್. ಶ್ರೀನಿವಾಸ

ಡಂಕೆಲ್ ಮತ್ತು ವಿದೇಶಿ ಪತ್ರಿಕೆಗಳು

"ದಿನ ಬೆಳಗಾದರೆ ನಮ್ಮ ಮನೆ ಬಾಗಿಲಿಗೆ ಬಿಕಿನಿ ತೊಟ್ಟ ಹುಡುಗಿಯ ಚಿತ್ರ, ಅವಳ ಅಂಗಾಂಗದ ವಿವರಗಳನ್ನು ಹೊತ್ತ ಪತ್ರಿಕೆ ಬಂದು ಬೀಳಬೇಕೆ ? ನಾನೇನೂ ಕಟ್ಟಾ ಸಂಪ್ರದಾಯವಾದಿಯಲ್ಲ. ಆದರೆ, ಮಾಹಿತಿ ಮತ್ತು ಜ್ಞಾನದ ಹೆಸರಿನಲ್ಲಿ ನಾವು ಓದಬೇಕಾಗಿರುವುದು ಏನನ್ನು ? ಅತಿಯಾದ ಹಾಸ್ಯ, ವ್ಯಂಗ್ಯ. ಟೀಕೆ, ಗಾಸಿಪ್— ಇವು ಒಂದು ಪತ್ರಿಕೆಯ ಮಾನದಂಡವೇ ?

ಎಲೆಕ್ಟ್ರಾನಿಕ್ ಮತ್ತು ಮುದ್ರಣ ಮಾಧ್ಯಮಗಳನ್ನು ಒಳಗೊಂಡ ವಿದೇಶೀ ಸಮೂಹ ಮಾಧ್ಯಮಗಳಿಗೆ ನಮ್ಮ ನಾಡಿನಲ್ಲಿ ಮುಕ್ತ ಅವಕಾಶ ಕೊಟ್ಟಲ್ಲಿ ನಮ್ಮ ಸಾಂಸ್ಕೃತಿಕ ಮತ್ತು ರಾಜಕೀಯ ಪರಂಪರೆ ಅಧೋಗತಿಗೆ ಇಳಿಯುವುದು ಖಂಡಿತ.

ಭಾರತದ ಬಹುಪಾಲು ಅಕ್ಷರಸ್ಥ ಜನ ದಿನ ಬೆಳಿಗ್ಗೆ ಮೊದಲು ಮಾಡುವ ಕೆಲಸ ಪತ್ರಿಕೆ ಓದುವುದು. ನಿತ್ಯದ ನಮ್ಮ ಕಾರ್ಯ ಚಟುವಟಿಕೆಗಳ ಮೇಲೆ ಈ ಪತ್ರಿಕೆಗಳು ಬೀರುವ ಪರಿಣಾಮವೂ ಅಗಾಧವಾದದ್ದು. ಆದ್ದರಿಂದ ಪತ್ರಿಕೆಗಳ ವಿಶ್ವಾಸಾರ್ಹತೆ ಪ್ರಶ್ನಾತೀತವೆನಿಸಿದೆ. ಪತ್ರಿಕೆಗಳ ಜೊತೆಗಿನ ಭಾರತೀಯರ ಸಂಬಂಧ ಹೀಗಿರುವಾಗ, ವಾಣಿಜ್ಯ ದೃಷ್ಟಿಯಿಂದ ಈ ನಾಡಿಗೆ ಬರಲಿರುವ ವಿದೇಶೀ ಸಂಸ್ಥೆಗಳು ತಮ್ಮ ನಾಡಿನ, ತಮ್ಮ ದೇಶದ ಹಿತಾಸಕ್ತಿಗಳನ್ನು ಪ್ರಚಾರ ಮಾಡುತ್ತವೆಯೇ ಹೊರತು ಭಾರತವನ್ನು ಹಾಡಿ ಹೊಗಳುವುದಿಲ್ಲ. ಭಾರತದಲ್ಲಿಯಂತೆ ಅವರು ಇನ್ನೂ ಅನೇಕ ರಾಷ್ಟ್ರಗಳಲ್ಲಿ ಬಂಡವಾಳ ಹೂಡಿರುತ್ತಾರೆ. ಬಂಡವಾಳಕ್ಕೆ ತಕ್ಕಂತೆ ಫಲ ಪಡೆಯಲು ತಮ್ಮ ಒಳಿತನ್ನು ನಮ್ಮ ಮೇಲೆ ಹೇರುತ್ತಾರೆ.

೧೯೫೦ರ ನಂತರ ಭಾರತದ ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಗಮನಾರ್ಹ ಸ್ಥಿತ್ಯಂತರಗಳಾಗಿವೆ. ಮಧ್ಯಮ ವರ್ಗದ ಜನರು ಜಾಗತೀಕರಣ ಮತ್ತು ಪಾಶ್ಚಾತ್ಯೀಕರಣದ ಏಜೆಂಟರಂತಾಗಿದ್ದಾರೆ. ೧೦-೧೫ ವರ್ಷಗಳ ಹಿಂದಿನವರೆಗೆ ಪಶ್ಚಿಮದ ವಿದ್ಯೆ-ಜ್ಞಾನ ಮತ್ತು ಸೌಲಭ್ಯಗಳನ್ನು ಅರಸಿ ದೇಶ ತೊರೆದಿದ್ದವರೆಲ್ಲ ಇಂದು ಅನಿವಾಸಿ ಭಾರತೀಯರೆಂಬ ಹೊಸ ಅವತಾರದಲ್ಲಿ ತಾಯ್ನಾಡಿಗೆ ಹಿಂದಿರುಗುತ್ತಿದ್ದಾರೆ. ಈ ಮಧ್ಯೆ, ಮಧ್ಯವಯಸ್ಕರು ಮತ್ತು ವೃದ್ಧರು ವಿದೇಶಗಳಿಗೆ ವಿಹಾರಾರ್ಥ ಹೋಗುತ್ತಾರೆ. ತಾಯಂದಿರು ತಮ್ಮ ಮಕ್ಕಳ ಬಾಣಂತನಕ್ಕಾಗಿ

ವಿದೇಶಕ್ಕೆ ಹೋಗುವಂತಾಗಿದೆ. ಇಂತಹ ಭೇಟಿಗಳು ವಿದೇಶೀ ಸಂಸ್ಕೃತಿಯನ್ನು ಬಹು ಬೇಗನೆ ಭಾರತಕ್ಕೆ ಆಮದು ಮಾಡುತ್ತಿವೆ. ಇದರ ಪಾಲಿಗೆ ಈಗ ವಿದೇಶೀ ದೃಶ್ಯ ಮಾಧ್ಯಮಗಳೂ ಸೇರಿಕೊಂಡಿವೆ. ಇವುಗಳು ನಮಗೆ ತೋರಿಸುವ, ತಂದು ಹೇರುವ ಸಂಸ್ಕೃತಿಯಾದರೂ ಎಂತಹುದು ? ಪಾಶ್ಚಿಮಾತ್ಯರ ತೋರಿಕೆಯ ಬಾಹ್ಯ ಮೌಲ್ಯಗಳಿಗೆ ಮಧ್ಯಮ ವರ್ಗದ ಭಾರತೀಯರು ಟ್ರೋಜನ್ ಕುದುರೆಗಳಂತಾಗಿದ್ದಾರೆ. ಇಂತಹ ಬೆಳವಣಿಗೆ ಭಾರತವನ್ನು ಯೂರೋಪ್-ಅಮೇರಿಕಾಗಳ ಸಂಸ್ಕೃತಿಯಡಿಯಲ್ಲಿ ಮೂರನೇ ದರ್ಜೆ ಪ್ರಜೆಯನ್ನಾಗಿಸುತ್ತದೆ.

ನನ್ನ ಪ್ರಕಾರ ಸಂಸ್ಕೃತಿ ಎನ್ನುವುದು ಒಂದು ಜನಾಂಗದ ಆಲೋಚನೆ, ಕಲೆ, ನಂಬಿಕೆ, ಆಚರಣೆ ಇತ್ಯಾದಿಗಳನ್ನೆಲ್ಲ ಒಳಗೊಂಡ ಒಂದು ಸಾಂಸ್ಥಿತ ವ್ಯವಸ್ಥೆ. ನಮ್ಮ ಸಂಸ್ಕೃತಿಯಲ್ಲಿ ಅನೇಕ ಲೋಪ ದೋಷಗಳಿರಬಹುದು. ಆದರೆ ಬುದ್ಧ, ಗಾಂಧಿ, ಭಕ್ತಿ ಚಳವಳಿಯಂತಹ ಅನೇಕ ಮೌಲ್ಯಗಳ ಹುಟ್ಟಿಗೆ ಕಾರಣವಾದ ಸಂಸ್ಕೃತಿ ನಮ್ಮದು. ಹೀಗಿರುವಾಗ ವಿದೇಶೀ ಸಮೂಹ ಮಾಧ್ಯಮಗಳು ನಿರಂತರವಾಗಿ ನಮಗೆ ವಿದೇಶೀ ಮೌಲ್ಯಗಳನ್ನೇ ಉಣಬಡಿಸುತ್ತಿದ್ದರೆ ನಮ್ಮ ಸಂಸ್ಕೃತಿಯ ಗತಿಯೇನು ? ಭಾರತದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳ ಮೇಲೆ ಒಂದೇ ಬಾರಿಗೆ ವಿದೇಶೀಯರ ದಾಳಿ ನಡೆಯುತ್ತಿದೆ. ಭಾರತದ ಪರಿಸ್ಥಿತಿ ನಿಜಕ್ಕೂ ಸೂಕ್ಷ್ಮವಾಗಿದೆ. ಏಕೆಂದರೆ, ಆಧುನಿಕತೆಯ ಹೆಸರಿನಲ್ಲಿ ನಡೆಯುವ ಇಂತಹ ಸ್ಥಿತ್ಯಂತರಗಳನ್ನು ಪ್ರಬಲವಾಗಿ ವಿರೋಧಿಸುವ ಸನಾತನವಾದಿಗಳು ಈಗ ಬಂಡೇಳಬಹುದು. ಅದು ಫ್ಯಾಸಿಸಂಗೆ ಹಾದಿ ಮಾಡಿಕೊಡಬಹುದು.

ಉದಾರೀಕರಣ, ಜಾಗತೀಕರಣ ಎಂದಾಕ್ಷಣ ಎಲ್ಲಕ್ಕೂ ಮುಕ್ತ ಅವಕಾಶ ಎಂದು ಅರ್ಥವಲ್ಲ. ,ಬೇಕಾದ್ದನ್ನು ಮಾತ್ರ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಇರಬೇಕು. ಫ್ರಾನ್ಸ್ ದೇಶ ಹಾಲಿವುಡ್ ಸಿನಿಮಾಗಳನ್ನು ತಿರಸ್ಕರಿಸುವುದಾದರೆ ನಾವೇಕೆ ಹಿಂಸೆ, ಲೈಂಗಿಕತೆ, ಡ್ರಗ್ಸ್ ಮುಂತಾದವುಗಳನ್ನೇ ವೈಭವೀಕರಿಸುವ ಸಿನಿಮಾಗಳಿಗೆ ಶರಣಾಗಬೇಕು ? ಹೊಸತನ್ನು ಆಹ್ವಾನಿಸುವಾಗ ನಮ್ಮ ಐತಿಹಾಸಿಕ ಪರಂಪರೆಯನ್ನು ಮರೆಯಬಾರದು. ಅದರಲ್ಲೂ ವಿಶೇಷವಾಗಿ ವಿದೇಶೀ ಮುದ್ರಣ ಮಾಧ್ಯಮದ ಬಗ್ಗೆ ವಿಪರೀತ ಎಚ್ಚರ ವಹಿಸಬೇಕು.

ರಾಷ್ಟ್ರ ನಿರ್ಮಾಣದ ಕೆಲಸ ನಮ್ಮಲ್ಲಿನ್ನೂ ಪೂರ್ಣಗೊಂಡಿಲ್ಲದ ಈ ಸಂದರ್ಭದಲ್ಲಿ ಸಮೂಹ ಮಾಧ್ಯಮದಂತ ಪ್ರಭಾವಿ ಸಾಧನವನ್ನು ವಿದೇಶೀಯರ ಕೈಗೆ ಕೊಡುವ ಬಗ್ಗೆ ನನಗಂತೂ ವಿಪರೀತ ಭಯವಿದೆ. ನಾನೊಬ್ಬ ಹಳೆಯ ಕಾಲದ ರಾಷ್ಟ್ರ ಭಕ್ತ. ನನ್ನ ದೇಶದ ಸಮಗ್ರತೆ-ಅಖಂಡತೆಗಳು ನನಗೆ ಹೆಮ್ಮೆಯ ವಿಷಯ. ಈಗಾಗಲೇ ಸ್ವಾತಂತ್ರ್ಯ ಪಡೆಯುವ ಕಾಲಕ್ಕೆ ಒಂದಿಷ್ಟು ಭಾಗವನ್ನು ಕಳೆದುಕೊಂಡಿದ್ದೇವೆ.

ಇನ್ನೂ ಕಾಶ್ಮೀರ, ಪಂಜಾಬ್ ಮುಂತಾದೆಡೆ ಪ್ರತ್ಯೇಕ ರಾಜಕೀಯ ಅಸ್ತಿತ್ವಕ್ಕಾಗಿ ವಿಚ್ಛಿದ್ರಕಾರಿ ಶಕ್ತಿಗಳು ತಲೆ ಎತ್ತುತ್ತಲೇ ಇವೆ. ಇಂತಹ ಸಂಕ್ರಮಣ ಸ್ಥಿತಿಯಲ್ಲಿ ರಾಷ್ಟ್ರ ಮತ್ತಷ್ಟು ಹೋಳಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ಸಮೂಹ ಮಾಧ್ಯಮದ ಮೇಲೇ ಹೆಚ್ಚಾಗಿದೆ. ಈ ನನ್ನ ಭಯ ಬರಿಯ ಭ್ರಮೆಯಲ್ಲ. ಯುಗೋಸ್ಲಾವಿಯಾ, ಸೋವಿಯತ್ ದೇಶ, ಜೆಕೊಸ್ಲಾವಾಕಿಯಾಗಳ ಉದಾಹರಣೆ-ಗಳು ನಮ್ಮ ಕಣ್ಣ ಮುಂದಿವೆ. ಹೀಗಿರುವಾಗ ವಿದೇಶಿ ಸಮೂಹ ಮಾಧ್ಯಮಗಳಿಂದ ಭಾರತದ ಸಮಗ್ರತೆಯ ಬಗ್ಗೆ ಬದ್ಧತೆಯನ್ನು ನಿರೀಕ್ಷಿಸುವುದು ಸಾಧ್ಯವೇ ?

ಭಾರತದಲ್ಲಿ ರೇಡಿಯೋ ಮತ್ತು ದೂರದರ್ಶನಗಳು ಸರ್ಕಾರದ ನಿಯಂತ್ರಣದಲ್ಲಿರುವುದರಿಂದ ನಮಗೆ ಮುದ್ರಣ ಮಾಧ್ಯಮ ಮತ್ತು ಸುದ್ದಿ ಸಂಸ್ಥೆಗಳೇ ಹೆಚ್ಚು ಮುಖ್ಯವಾಗುತ್ತವೆ. ಪ್ರಜಾಪ್ರಭುತ್ವದಲ್ಲಿ ಜನರು ನೇರವಾಗಿ ಭಾಗವಹಿಸಲು ಇರುವ ಪ್ರಮುಖ ದಾರಿ ಇದು. ಪತ್ರಿಕೆಗಳ ನಿಲುವು ಧೋರಣೆಗಳ ಬಗ್ಗೆ ನಮ್ಮಲ್ಲಿ ಎಷ್ಟೇ ಭಿನ್ನಾಭಿಪ್ರಾಯವಿದ್ದರೂ, ಆಳದಲ್ಲಿ ನಮ್ಮ ಪತ್ರಿಕೆಗಳಿಗೆ ರಾಷ್ಟ್ರೀಯ ಪ್ರಜ್ಞೆ ಮತ್ತು ಬದ್ಧತೆ ಇದೆ ಎಂಬ ನಂಬಿಕೆ ನಮ್ಮದು. ಸ್ವಾತಂತ್ರ್ಯ ಹೋರಾಟ, ಹಿಂದುಳಿದ ವರ್ಗಗಳ ಹೋರಾಟ, ದಲಿತ ಚಳುವಳಿ, ಮಹಿಳಾ ಚಳುವಳಿಗಳ ಸಂದರ್ಭದಲ್ಲಿ ಭಾರತೀಯ ಪತ್ರಿಕೆಗಳು ನಿಜಕ್ಕೂ ಅತ್ಯುತ್ತಮ ಕೆಲಸ ನಿರ್ವಹಿಸಿವೆ. ಮೊದಲಿಗೆ ಆಂಗ್ಲ ಪತ್ರಿಕೆಗಳ ಮೂಲಕ ಆಗಮಿಸುವ ವಿದೇಶೀಯರು ನಿಧಾನವಾಗಿ ಪ್ರಾದೇಶಿಕ ಭಾಷೆಗಳಿಗೂ ತಮ್ಮ ಜಾಲ ವಿಸ್ತರಿಸುತ್ತಾರೆ. ಗರಿಷ್ಠ ಸಂಖ್ಯೆಯ ಓದುಗರಿರುವ ಪ್ರಾದೇಶಿಕ ಭಾಷಾ ಪತ್ರಿಕೆಗಳಲ್ಲಿ ವಿದೇಶೀಯರ ದೃಷ್ಟಿಕೋನ ಪ್ರಚಾರವಾಗತೊಡಗುತ್ತದೆ. ಇದರ ಪರಿಣಾಮ ಏನಾಗಬಹುದೆಂಬುದನ್ನು ಎಲ್ಲರೂ ಊಹಿಸಬಹುದು.

ಜೊತೆಗೆ ವಿದೇಶೀ ಪತ್ರಿಕಾ ಸಂಸ್ಥೆಗಳ ಬಳಿ ಇರುವ ಸಂಪನ್ಮೂಲಗಳು ಭಾರತೀಯ ಪತ್ರಿಕೆಗಳಿಗೆ ಹೋಲಿಸಿದರೆ ಅಗಾಧವಾದದ್ದು. ಇಂತಹ ಸಂಸ್ಥೆಗಳು ಕಾನೂನು-ಕಾಯಿದೆಯ ಯಾವುದೇ ನಿರ್ಬಂಧವಿಲ್ಲದೆ, ವ್ಯಾಪಾರದ ದೃಷ್ಟಿಯಿಂದ ಬಂದು ಭಾರತೀಯ ಪತ್ರಿಕೆಗಳಿಗಿಂತಲೂ ಅತ್ಯಂತ ಕಡಿಮೆ ದರದಲ್ಲಿ ತಮ್ಮ 'ಸರಕು' ಮಾರಾಟ ಮಾಡತೊಡಗಿದರೆ ಬಡ ಭಾರತೀಯ ಪತ್ರಿಕೆಗಳ ಗತಿ ಏನು? ಆಕರ್ಷಕ ವೇತನ-ಸೌಲಭ್ಯಗಳ ಆಸೆಗೆ ಭಾರತೀಯ ಪತ್ರಕರ್ತರೇನಾದರೂ ವಿದೇಶೀ ಪತ್ರಿಕೆಗಳನ್ನು ಆಹ್ವಾನಿಸುತ್ತಿದ್ದರೆ, ಅವರಿಗೂ ಟ್ರೋಜನ್ ಕುದುರೆಯ ರೋಗ ಹತ್ತಿದೆ ಎಂದೇ ಅರ್ಥ.

ಪತ್ರಿಕೋದ್ಯಮದಲ್ಲಿರುವ ಬುದ್ಧಿವಂತರು, ರಾಜಕೀಯ ಮುತ್ಸದ್ದಿಗಳು ಹಾಗೂ ಸಾರ್ವಜನಿಕರು ಅಥವಾ ಪ್ರಜ್ಞಾವಂತ ಪತ್ರಿಕಾ ಓದುಗರು ಈ ಕುರಿತು ಎಚ್ಚರ ವಹಿಸಬೇಕಾಗಿದೆ.

ಸಂಗ್ರಹ : **ಸತ್ಯಾ ಎಸ್.**

●

ಈ ಸಂಚಿಕೆಯ ಲೇಖಕರು

ಕೆ. ಫಣಿರಾಜ ಉಪನ್ಯಾಸಕರು, ಮಣಿಪಾಲ ಇನ್‌ಸ್ಟಿಟ್ಯೂಟ ಆಫ್ ಟೆಕ್ನಾಲಜಿ, ಮಣಿಪಾಲ ೫೭೬ ೧೧೯

ಜಿ. ಎನ್. ಮೋಹನ ಪ್ರಜಾವಾಣಿ ವರದಿಗಾರ, ೨ನೇ ಮಹಡಿ, ಯೆನೆಪೋಯಾ ಚೇಂಬರ್ಸ್, ಬಲ್ಮಟ್ಟ, ಮಂಗಳೂರು ೫೭೫೦೦೨.

ಸತ್ಯಾ ಎಸ್. 'ಆಶ್ರಯ' ಮೇಗಿನ ಮನೆ, ದೇರೇಬೈಲು ಕೊಂಚಾಡಿ, ಅಶೋಕ ನಗರ, ಮಂಗಳೂರು ೫೭೫೦೦೬.

ಭಾಸ್ಕರ ಚಂದಾವರಕರ ನಂ. ೧೫, ಶೈಲೇಶ ಪಾರ್ಕ್, ಗಣೇಶ ನಗರ, ಪುಣೆ ೪೭೧೦೫೨

ಡಾ. ಕೇಶವ ಶರ್ಮ ಕೆ. ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾಲಯ ಬಿ. ಆರ್. ಪ್ರಾಜೆಕ್ಟ್ ೫೭೭೧೧೫.

ಡಾ. ಬಿ. ಎ. ವಿವೇಕ ರೈ ಅಧ್ಯಕ್ಷರು, ತುಳು ಸಾಹಿತ್ಯ ಅಕಾಡೆಮಿ, ಲಾಲ್‌ಬಾಗ, ಮಂಗಳೂರು ೫೭೫೦೦೬.

(ಕವರು ೪ ನೇ ಪುಟದಿಂದ ಬಂದದ್ದು)

ಶ್ರೀ ಮೊಯಿಲಿ ಸರ್ಕಾರದ ಸಾಧನೆ ಕಿರುನೋಟ :

ದೀರ್ಘಕಾಲದಿಂದ ನೆನಗುದಿಗೆ ಬಿದ್ದಿದ್ದ ವಿಜಯನಗರ ಉಕ್ಕು ಕಾರ್ಖಾನೆ ಸ್ಥಾಪನೆಗೆ ಚಾಲನೆ. ಮಂಗಳೂರಿನಲ್ಲಿ ೯ ದಶಲಕ್ಷ ಟನ್ ಸಾಮರ್ಥ್ಯದ ಪೆಟ್ರೋಲಿಯಂ ಶುದ್ಧೀಕರಣ ಘಟಕ ಪೂರ್ಣಗೊಳ್ಳುವಿಕೆ. ನೀರಾವರಿ ಕ್ಷೇತ್ರಕ್ಕೆ ೭೦೦ ಕೋಟಿ ರೂ. ವೆಚ್ಚದಲ್ಲಿ ೮೫೦೦೦ ಹೆಕ್ಟೇರ್ ಹೆಚ್ಚುವರಿ ಪ್ರದೇಶಕ್ಕೆ ನೀರಾವರಿ ಸೌಲಭ್ಯ. ಕೃಷಿ ಕ್ಷೇತ್ರಕ್ಕೆ ೯೩–೯೪ ಕ್ಕೆ ೨೩ ಕೋಟಿ ರೂ. ವಿನಿಯೋಗ. ವಿದ್ಯುತ್ ಉತ್ಪಾದನೆಯನ್ನು ೭೦೦೦ ಮೆಗಾವಾಟ್ಸ್‌ಗೆ ಹೆಚ್ಚಿಸಲು ಕಾರ್ಯಕ್ರಮ. ೨ ಲಕ್ಷ ಗೃಹ ನಿವೇಶನಗಳ ಹಂಚಿಕೆ, ೧೫೦ ಕೋಟಿ ರೂ. ವೆಚ್ಚದಲ್ಲಿ ೧ ಲಕ್ಷ ಮನೆಗಳ ನಿರ್ಮಾಣ.

ಸ್ವಾತಂತ್ರ್ಯೋತ್ಸವದ ಆಚರಣೆಯ ಸವಿ ನೆನಪಿನಲ್ಲಿ ಸಮಗ್ರ ಸಮುದಾಯದ ಸೇವೆಗೆ ಹೆಚ್ಚಿನ ಹುರುಪಿನಿಂದ ಸನ್ನದ್ಧವಾಗಿರಲು ಸರ್ಕಾರ ಕಟಿಬದ್ಧವಾಗಿದೆ.

ಕರ್ನಾಟಕ ವಾರ್ತೆ.

ಸ್ವಾತಂತ್ರ್ಯದ ಕನಸುಗಳು ಇಲ್ಲಿ ನನಸಾಗುತ್ತಿವೆ

ಬಿಡುಗಡೆಯಾದ ನಾಡಿನಲ್ಲಿ ಎಲ್ಲರೂ ಸಮಾನರು. ಸರ್ವರಿಗೂ ಸಮಬಾಳು ಎಂಬ ಕವಿವರ್ಯರ ಆಶಯವನ್ನು ಸಾಕಾರಗೊಳಿಸಿ ಸಮಾಜ ಮತ್ತು ಸಮುದಾಯವನ್ನು ಸಮೃದ್ಧಗೊಳಿಸುವುದೇ ನಮ್ಮ ಪರಮ ಧ್ಯೇಯ.

ಜವಾಬ್ದಾರಿಯುತ, ಕ್ರಿಯಾಶೀಲ, ಸ್ವಚ್ಛ ಮತ್ತು ಪಾರದರ್ಶಕ ಆಡಳಿತದ ಮೂಲಕ ಮುಖ್ಯಮಂತ್ರಿ ಶ್ರೀ ವೀರಪ್ಪ ಮೊಯಿಲಿ ಅವರ ಸರಕಾರ ಸಾಧಿಸಿರುವ ಮೈಲಿಗಲ್ಲುಗಳು ಹಲವು. ಶೋಷಣಾರಹಿತ ವ್ಯವಸ್ಥೆ ನಿರ್ಮಿಸಲು ಸಾಮಾಜಿಕ, ಆರ್ಥಿಕ, ಆಡಳಿತ ಕ್ಷೇತ್ರಗಳಲ್ಲಿ ಜಾರಿ ಮಾಡಿರುವ ನಿರ್ಣಯಗಳು ಜನ ಮನ್ನಣೆಗೆ ಪಾತ್ರ. ಕೋಮು ಸೌಹಾರ್ದ ಕಾಪಾಡಿ ಪ್ರಗತಿಗೆ ಪೂರಕ ವಾತಾವರಣ ಸೃಷ್ಟಿ. ಹಿಂದುಳಿದವರ, ಅಲ್ಪ ಸಂಖ್ಯಾತರ, ಪರಿಶಿಷ್ಟ ಜಾತಿ, ವರ್ಗಗಳ ಮತ್ತು ಸಮಾಜದ ಎಲ್ಲಾ ಸ್ತರಗಳ ದುರ್ಬಲ ಹಾಗೂ ಬಡಜನರ ಏಳಿಗೆಯನ್ನೇ ಏಕೈಕ ಉದ್ದೇಶವಾಗಿಟ್ಟುಕೊಂಡು ಶ್ರಮಿಸುತ್ತಿರುವ ಸರ್ಕಾರ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಸಂದೇಶವನ್ನು ಚಾಚೂ ತಪ್ಪದೆ ಪಾಲಿಸುತ್ತಿದೆ.

ಸರ್ಕಾರ ಘೋಷಿಸಿರುವ ನೂತನ ಕಾರ್ಯಕ್ರಮ : ೨ ಲಕ್ಷ ಗೃಹ ನಿವೇಶನ ಹಾಗೂ ೧ ಲಕ್ಷ ಮನೆಗಳ ಹಂಚಿಕೆ. ಪ್ರಸಕ್ತ ಸಾಲಿನಲ್ಲಿ ಆಶ್ರಯ ಮನೆ ಹಂಚಲು ೧ ಲಕ್ಷ ಫಲಾನುಭವಿಗಳನ್ನು ಗುರುತಿಸುವುದು. ವೃತ್ತಿ ಶಿಕ್ಷಣ ಹಾಗೂ ಸ್ನಾತಕೋತ್ತರ ಶಿಕ್ಷಣ ಪಡೆಯುತ್ತಿರುವ ಪರಿಶಿಷ್ಟ ಜಾತಿ-ವರ್ಗ ವಿದ್ಯಾರ್ಥಿಗಳಿಗೆ ಮಾಹೆಯಾನ ಭೋಜನ ವೆಚ್ಚ ರೂ. ೪೦೦ ಗಳಿಗೆ ಏರಿಕೆ. ಜಿಲ್ಲೆಗೊಂದರಂತೆ ೩೦ ಲಕ್ಷ ರೂ. ವೆಚ್ಚದಲ್ಲಿ ಪಿ. ಯು. ಸಿ. ವಿದ್ಯಾರ್ಥಿಗಳಿಗಾಗಿ ೨೦ ಹೊಸ ವಿದ್ಯಾರ್ಥಿ ನಿಲಯಗಳ ಸ್ಥಾಪನೆ. ಪರಿಶಿಷ್ಟ ಜಾತಿ ವರ್ಗಗಳಿಗೆ ಸೇರಿದ ಎಂ. ಫಿಲ್. ಪಿಹೆಚ್‌ಡಿ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡಲು ನಗದು ಪುರಸ್ಕಾರ. ಈ ವರ್ಗದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಭೋಜನ, ವಸತಿ ವೆಚ್ಚ ಪಡೆಯಲು ಆದಾಯ ಮಿತಿ ತೆಗೆದುಹಾಕುವ ನಿರ್ಧಾರ. ಮೊದಲಬಾರಿಗೆ ಡಾ. ಅಂಬೇಡ್ಕರ್ ವಸತಿ ಯೋಜನೆಯಡಿ ೧ ಲಕ್ಷ ಮನೆಗಳ ನಿರ್ಮಾಣ. ವಿಶೇಷ ಕಾರ್ಯಕ್ರಮವಾಗಿ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ೧ ಸಾವಿರ ಮನೆಗಳಂತೆ ಆಗಸ್ಟ್ ೩೦ ರೊಳಗೆ ೨.೧೨ ಲಕ್ಷ ಮನೆಗಳ ಪೂರ್ಣಗೊಳಿಸುವಿಕೆ.

(ಕವರು ೩ ನೇ ಪುಟಕ್ಕೆ)

SANKRAMANA PRAKASHANA DHARWAD 580-001